೧೦೧ನೇ ಸಂಚಿಕೆ!

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೫

ಚಂದಾ ರೂ. ೩೫೦/– (೨೦೨೦ರ ಮಾರ್ಚ್‌ನಿಂದ ೨೦೨೧ರ ಸೆಪ್ಟಂಬರ್‌ವರೆಗೆ) ಪುಟ: ೨೦ ಬೆಲೆ: ರೂ. ೨೫/–

**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಇದು ನಮ್ಮ ೧೦೧ನೇ ಸಂಚಿಕೆ. ಕರೋನಾ ಗದ್ದಲದ ಮಧ್ಯೆ ಕಳೆದ ನಮ್ಮ ಸಂಚಿಕೆ ನೂರನೆಯದು ಎಂಬುದೇ ನಮ್ಮ ಗಮನಕ್ಕೆ ಬಾರದೇ ಹೋಯಿತು! ಅದೇನೂ ದೊಡ್ಡ ವಿಷಯವಲ್ಲ. ಅದೊಂದು ಔಪಚಾರಿಕ 'ದಾಖಲೆ'ಯಷ್ಟೆ. ಆದರೆ ಇಂತಹ ಒಂದು ಸಣ್ಣ ಸಾಹಸ, ಸೀಮಿತ ವಲಯವನ್ನು ನೆಚ್ಚಿಕೊಂಡ ಒಂದು ಪತ್ರಿಕೆ ಈ ಸಾಂಸ್ಕೃತಿಕ ದುಷ್ಕಾಲದಲ್ಲೂ ನೂರು ಸಂಚಿಕೆಗಳನ್ನು ದಾಟಿ ಮುನ್ನಡೆದಿದೆ ಎಂಬ ಸಂಗತಿ ನಮ್ಮ ಸಮಾಜದ ಚೈತನ್ಯ ಇನ್ನೂ ಸಮಸ್ಥಿತಿಯಲ್ಲೇ ಇದೆ ಎಂಬುದನ್ನು ಸೂಚಿಸುತ್ತಿರಬಹುದೆಂಬ ದೃಷ್ಟಿಯಿಂದ ಗಮನಾರ್ಹವೆನಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಇದಕ್ಕೆ ನಮ್ಮ ಓದುಗ ಮತ್ತು ಲೇಖಕ ವರ್ಗದ ಗುಣಾತ್ಮಕತೆ ಮತ್ತು ಪತ್ರಿಕೆಯ ಹಿಂದೆ ಕೆಲಸ ಮಾಡುತ್ತಿರುವ ಒಂದು ಸಣ್ಣ ತಂಡದ ಶ್ರದ್ಧೆ ಮತ್ತು ಅರ್ಪಣಾ ಮನೋಭಾವವೇ ಕಾರಣವೆಂದು ಇಲ್ಲಿ ತಿಳಿಸಬಯಸುವೆ. ಇದರ ಜೊತೆ ನಮ್ಮ ಕೆಲವಾದರೂ ಸಾರ್ವಜನಿಕ ಗ್ರಂಥಾಲಯಗಳ ಅಧಿಕಾರಿಗಳ ಸಹಕಾರವೂ ಮುಖ್ಯವಾಗಿದೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ಪತ್ರಿಕೆಯ ಪರವಾದ ಧನ್ಯವಾದ ಮತ್ತು ಅಭಿನಂದನೆಗಳನ್ನು ತಿಳಿಸಬಯಸುವೆ.

ಇನ್ನೂ ಇಡೀ  ಜಗತ್ತು ಕರೋನಾ ವೈರಾಣು ಭೀತಿಯಿಂದ ತತ್ತರಿಸುತ್ತಲೇ ಇದೆ. ಅದು ಈವರೆಗೆ ತನ್ನೆಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡು ಕೋವಿಡ್–೧೯ ಬಾಧೆಯನ್ನು ಎದುರಿಸುತ್ತಾ, ಕೊನೆಗೆ ಅದರೊಂದಿಗೆ ಬಾಳುವೆ ಮಾಡುವ ಅನಿವಾರ್ಯತೆಯನ್ನು ಮನಗಂಡಿದೆ. ಅದರ ಹೆಚ್ಚುತ್ತಿರುವ ಬಲಿಗಳ ನಡುವೆಯೂ ದಿಗ್ಬಂಧನಗಳನ್ನು ಸಡಿಲಿಸಿಕೊಂಡು ಸಾಮಾನ್ಯ ಜನಜೀವನದತ್ತ ಮರಳುತ್ತಿರುವುದು, ಮನುಷ್ಯ ತನ್ನೆಲ್ಲ ಮಹಾನ್ ಜ್ಞಾನ ಮತ್ತು ಸಾಹಸಗಳ ಹೊರತಾಗಿಯೂ ಮೂಲತಃ ಅಸಹಾಯಕನೇ ಎಂಬುದನ್ನು ಸಾಬೀತುಪಡಿಸುತ್ತಿದೆ. ಆದರೆ ಈ ಸತ್ಯ ಅವನ ಒಳ ಆವರಣಕ್ಕೆ ಇಳಿದಿಲ್ಲ ಎಂಬುದನ್ನು ಈ ಸಾಮಾನ್ಯ ಜನಜೀವನದ ಯಾವ ವಿವರವೂ ವಿಮರ್ಶೆಗೆ ಒಳಗಾಗಿಲ್ಲ; ಹಾಗಾಗಿ ಬದಲಾಗಿಲ್ಲ ಎಂಬುದು ಸೂಚಿಸುತ್ತಿದೆ. ಉದಾಹರಣೆಗೆ, ನಮ್ಮ ಪ್ರಧಾನ ಮಂತ್ರಿಗಳು ಈ ಕರೋನಾ ವಿದ್ಯಮಾನದ ಹಾವಳಿಯ ಪರಿಹಾರಕ್ಕೆಂದು ಘೋಷಿಸಿರುವ ೨೦ ಲಕ್ಷ ಕೋಟಿ ರೂಪಾಯಿಗಳದ್ದೆಂದು ಹೇಳಲಾಗುವ ಪ್ಯಾಕೇಜಿನ ಪರಿಭಾಷೆ ಪೂರ್ಣವಾಗಿ ಆರ್ಥಿಕವಾದುದ್ದಾಗಿದೆ. ಮತ್ತೆ ಅದೇ ಕೈಗಾರಿಕೋದ್ಯಮಗಳ ಚೇತರಿಕೆಗೆ ಹಣಕಾಸಿನ ಸಹಾಯ, ಹೊಸ ಗಣಿಗಾರಿಕೆ ಮತ್ತು ಅಂತಾರಾಷ್ಟ್ರೀಯ ಮಟ್ಟದ ಮೂಲಸೌಲಭ್ಯಗಳ ಕಾಮಗಾರಿಗಳಿಗಾಗಿ ಖಾಸಗಿ ಕಂಪನಿಗಳಿಗೆ ಗುತ್ತಿಗೆಗಳು ಹಾಗೂ ಇವೆಲ್ಲವುಗಳ ಮೂಲ ಉದ್ದೇಶವಾದ ಅದೇ ಬೇಡಿಕೆ–ಪೂರೈಕೆ ಸರಪಳಿಯನ್ನು ಕಾಪಾಡಬೇಕಾದ ಅಗತ್ಯದ ಮಾತು. ಇದನ್ನು ಎತ್ತಿ ಹಿಡಿಯಲು 'ಆತ್ಮನಿರ್ಭರತಾ' ಎಂಬ ಭಾರವಾದ ಘೋಷಣೆ ಬೇರೆ!

ಪಾಶ್ಚಿಮಾತ್ಯ ದೇಶಗಳಿರಲಿ, ಅಥವಾ ಅವುಗಳ ವೈಭವ ಮತ್ತು ಅಧಿಕಾರ ಶಕ್ತಿಗೆ ಮಾರುಹೋಗಿ, ತಾನು ಬೆಳೆದಂತೆಲ್ಲ ಹೆಚ್ಚೆಚ್ಚು ಅಮಾನವೀಯವಾಗುತ್ತಾ ಹೋಗುತ್ತಿರುವ ಅವುಗಳ ಆಧುನಿಕ ತಂತ್ರಜ್ಞಾನಕ್ಕೆ ಶರಣಾಗಿ ದಿಕ್ಕೆಟ್ಟಂತಿರುವ ಚೀನಾ ಅತ್ತ ಇರಲಿ,. ಈ ಅಮಾನವೀಯತೆ ತರುವ ಆತ್ಯಂತಿಕ ಅನಾಹುತದ ಬಗ್ಗೆ ಎಚ್ಚರಿಕೆಗಳು ತುಂಬಿರುವ ಪರಂಪರೆಯುಳ್ಳ ದೇಶವೊಂದರ, ಅದೂ ರಾಷ್ಟ್ರೀಯ ಪರಂಪರೆಯ ಬಗೆಗಿನ ಮೇರೆವರಿಯದ ಹೆಮ್ಮೆಯ ಮೇಲೇ ಬೆಳೆದಿರುವ ಪಕ್ಷವೊಂದರ ಸರ್ಕಾರದ ಅಧಿಪತಿಯಾಗಿ ಮೋದಿಯವರು ಇಂದಿನ ಕರೋನಾ ಬಿಕ್ಕಟಿನ ಬಗ್ಗೆ ವಿಭಿನ್ನವಾಗಿ ಆಲೋಚಿಸಬಹುದಿತ್ತು. ಈ ಪರಂಪರೆಯ ತಾತ್ವಿಕ ಹೊಳಹನ್ನು ಅರಿಯುವ ಶಕ್ತಿ ಅವರ ರಾಷ್ಟ್ರೀಯ ಪರಂಪರೆಯ ಹೆಮ್ಮೆ ಕೇವಲ ಭೂತಕಾಲದ ಆರಾಧನೆಗೆ ಸೀಮಿತವಾಗಿ ಜಡವಾದದ್ದು ಎಂದು ಭಾವಿಸಿದರೂ, ಇಂದು ದೇಶದ ರಸ್ತೆಗಳಲ್ಲಿ, ಕಾಲು ದಾರಿಗಳಲ್ಲಿ, ರೈಲ್ವೇ ಹಳಿಗಳ ಮೇಲೆ ಬಿರುಬಿಸಿಲಿನಲ್ಲಿ ಮತ್ತು ಮುಂದಿನ ಹೊತ್ತಿನ ಆಹಾರವೆಲ್ಲಿ, ಯಾರಿಂದ ಎಂದು ಗೊತ್ತಿಲ್ಲದೆ ನೂರಾರು–ಸಾವಿರಾರು ಕಿ.ಮೀಗಳಷ್ಟು ದೂರದ ತಮ್ಮ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ಹೆಂಡತಿ–ಮಕ್ಕಳೊಂದಿಗೆ ನಡೆದಿರುವ, ದಾರಿ ಮಧ್ಯೆ ಹಲವರು ವಿವಿಧ ದಾರುಣ ಕಾರಣಗಳಿಗಾಗಿ ಸಾಯುತ್ತಿರುವ–ಲಕ್ಷ ಲಕ್ಷ ಕಾರ್ಮಿಕರನ್ನು ನೋಡಿಯಾದರೂ–ಅವರಿಗೆ ಪರಿಹಾರ ನೀಡುವ ಮಾತಿರಲಿ–ಈ ವ್ಯವಸ್ಥೆಯಲ್ಲಿ, ಈ ಜೀವನ ಕ್ರಮದಲ್ಲಿ  ಏನೋ ಮೂಲ ದೋಷವಿದೆ; ಅದರ ಮರುಪರಿಶೀಲನೆಯ ಅಗತ್ಯವಿದೆ ಎಂದು ಯೋಚಿಸಬಹುದಿತ್ತು. ಆಗ ಕರೋನಾವನ್ನು ಒಂದು ವ್ಯವಸ್ಥೆಯ ಸಮಸ್ಯೆ ಎಂದು ಗ್ರಹಿಸಬಹುದಿತ್ತು. ಆದರೆ ಅದಕ್ಕೆ ಬೇಕಾದ ಅಂತಃಕರಣದ ಕೊರತೆ ಇದ್ದರೆ ಏನು ಮಾಡುವುದು?

ಎಲ್ಲರೂ ಕೈಬಿಟ್ಟಂತಿರುವ ಈ ವಲಸೆ ಕಾರ್ಮಿಕರ ಸಂಕಷ್ಟದ ಪರಿಹಾರಕ್ಕಾಗಿ ಕೆಲ ಸಹೃದಯರು ನಮ್ಮ ಸರ್ವೋನ್ನತ ನ್ಯಾಯಾಲಯದ ಮೆಟ್ಟಿಲೇರಿದಾಗ ಅದಕ್ಕೆ ತನ್ನ ವಕೀಲನ ಮೂಲಕ 'ಯಾವ ಕಾರ್ಮಿಕರೂ ರಸ್ತೆಯಲ್ಲಿಲ್ಲ; ಯಾರೂ ಅನ್ನವಿಲ್ಲದೆ ಸಾಯುತ್ತಿಲ್ಲ' ಎಂದು ಅಧಿಕೃತವಾಗಿ ಹೇಳಿಕೆ ರವಾನಿಸಿದ ಸರ್ಕಾರವಿದು! ಇಂತಹ ಸರ್ಕಾರವನ್ನು ಏನೆಂದು ಕರೆಯುವುದೆಂದು ತೋಚುತ್ತಿಲ್ಲ. ಇನ್ನು ಈ ಹೇಳಿಕೆಯನ್ನು ಒಪ್ಪಿಕೊಂಡು ಈ ನ್ಯಾಯಲಯ ಈ ಪ್ರಕರಣವನ್ನು ಅಂತ್ಯಗೊಳಿಸಿತು ಎಂದರೆ ನಾವೀಗ ಎಂತಹ ಭಯಾನಕ  'ವ್ಯವಸ್ಥೆ'ಗೆ ಜಾರಿದ್ದೇವೆ ಎಂಬುದು ದೃಢಪಡುತ್ತದೆ.

ಕರೋನಾ, ಮನುಷ್ಯ ಸಮಾಜ ಬೆಳೆಯುತ್ತಾ ಸಂಘಟಿತವಾಗುತ್ತಿರುವ ರೀತಿಯ ಮತ್ತು ಅದು ರೂಪಿಸುತ್ತಿರುವ ಆಲೋಚನಾ ಲಹರಿಯ ಬಗ್ಗೆಯೂ ನಮ್ಮನ್ನು ಎಚ್ಚರಿಸುತ್ತಿರುವಂತಿದೆ. ವಿವಿಧ ಜೀವನ ದೃಷ್ಟಿ ಮತ್ತು ಜೀವನ ಕ್ರಮಗಳ ಸಮುದಾಯಗಳಿಗೆ ಸೇರಿದ ಕೋಟ್ಯಾಂತರ ಜನರನ್ನು ಒಂದು ದೇಶವನ್ನಾಗಿ ಮಾಡಿಕೊಂಡು ಅದನ್ನು ಒಂದು ಕೇಂದ್ರದಿಂದ 'ಆಳುವ' ಪರಿ ಅನೇಕ ಅಪಾಯಗಳಿಂದ ಕೂಡಿರುತ್ತದೆಂಬುದಕ್ಕೆ ಕರೋನಾವನ್ನು ಈ ದೇಶ ನಿರ್ವಹಿಸುತ್ತಿರುವ ರೀತಿಗೆ ಒಂದು ಉದಾಹರಣೆಯಾಗಿದೆ. ನಮ್ಮ ಪ್ರಧಾನಿಗಳು ಯಾರೊಂದಿಗೆ ಸಮಾಲಾಚಿಸಿದರೋ ಬಿಟ್ಟರೋ ಒಂದು ರಾತ್ರಿ ನಾಲ್ಕು ತಾಸುಗಳಷ್ಟೇ ಮುನ್ಸೂಚನೆ ನೀಡಿ ರಾಷ್ಟ್ರ ಜೀವನದ ಮೇಲೆ ಸಂಪೂರ್ಣ ದಿಗ್ಬಂಧನ ಹೇರಿಬಿಟ್ಟರು. ರಾಷ್ಟ್ರ ಜೀವನ ಎಂದರೆ ಏನು, ಅದರಲ್ಲಿ ಯಾರಾರು ಎಲ್ಲೆಲ್ಲಿ ಯಾವ ಸ್ಥಿತಿಯಲ್ಲಿದ್ದಾರೆ ಎಂಬ ಅರಿವಿಲ್ಲದ ನಾಯಕತ್ವ ಮಾಡಿದ ಘೋಷಣೆ ಇದು. ಇಂತಹ ನಾಯಕತ್ವ ಹುಟ್ಟಬಲ್ಲ ವ್ಯವಸ್ಥೆಯೂ ಇದು. ಇದರ ಫಲವನ್ನು ನಾವಿಂದು ನೋಡುತ್ತಿದ್ದೇವೆ. ನೋಡಲು ಇಷ್ಟಪಡದ ಸರ್ಕಾರ ನ್ಯಾಯಾಲಯಕ್ಕೆ ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳಿ ಬಚಾವಾಗುತ್ತದೆ. ಹಾಗಾಗಿಯೇ ಇದು ಆಡುವ 'ಆತ್ಮ ನಿರ್ಭರತಾ'ದಲ್ಲಿ ಆತ್ಮವೇ ಕಾಣೆಯಾಗಿದೆ. ಆತ್ಮವಿದ್ದಿದ್ದರೆ, ಅದು ಪ್ಯಾಕೆಜಿನಲ್ಲಿ ನಮ್ಮ ಆರ್ಥಿಕತೆಗೊಂದು ಹೊಸ ದಿಕ್ಕು, ಹೊಸ ರೂಪಕೊಟ್ಟು ದುಡಿಯುವ ಜನ ಅನಾಥ–ವಿಹ್ವಲರಾಗದಂತೆ ನೋಡಿಕೊಳ್ಳುವ, ಮನುಷ್ಯನಿಗಾಗಿ ಆರ್ಥಿಕತೆಯೇ ಹೊರತು ಆರ್ಥಿಕತೆಗಾಗಿ ಮನುಷ್ಯನಲ್ಲ ಎಂಬ ಇಂದಿನ ವಾಸ್ತವದ ಮಾನುಷ ಸತ್ಯದ ಹೊಳಹು ಕಾಣಬೇಕಿತ್ತು. ಈ ಸತ್ಯವನ್ನಾಧರಿಸಿದ ಆರ್ಥಿಕತೆಯ ಹೊಸ ನಕ್ಷೆಯೊಂದು ಅನಾವರಣಗೊಳ್ಳಬೇಕಿತ್ತು.

ನೋಟು ಅಮಾನ್ಯೀಕರಣದ ನಿರ್ಧಾರದಂತೆಯೇ ದಿಗ್ಬಂಧನದ ಏಕಪಕ್ಷೀಯ ಘೋಷಣೆ ಮೋದಿಯವರ ಅತಿ ಬುದ್ಧಿವಂತಿಕೆಯ, ತಾನೊಬ್ಬ ಮಾಂತ್ರಿಕ ಆಡಳಿತಗಾರನೆಂಬ ಭ್ರಮೆಯ ಫಲ. ಈ ಎರಡರ ಪರಿಣಾಮಗಳೂ ರಾಷ್ಟ್ರಜೀವನವನ್ನು ಅಸ್ತವ್ಯಸ್ತಗೊಳಿಸಿವೆ. ಇದು ಅರಿವಿಗೇ ಬಾರದಷ್ಟು ಮೋದಿಯವರು ಸ್ವಮೋಹ ಜಡತ್ವಕ್ಕೀಡಾಗಿ ದೇಶದಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳನ್ನೇ ಅಮಾನಿತ್ತಿನಲ್ಲಿಟ್ಟಂತೆ  ದಿಗ್ಬಂಧನದ ಮರೆಯಲ್ಲಿ ಸುಗ್ರೀವಾಜ್ಞೆಗಳಂತಹ ಬಳಸು ಮಾರ್ಗಗಳ ಮೂಲಕ ಆಡಳಿತ ನಡೆಸಹೊರಟಿರುವುದು ಕರೋನಾ ಸಂಕಷ್ಟಗಳಿಗೆ ಇನ್ನಷ್ಟನ್ನು ಸೇರಿಸಿದರೆ ಆಶ್ಚರ್ಯವಿಲ್ಲ.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮೇ ತಿಂಗಳ ಸಂಚಿಕೆ ಈಮೇಲ್ ರೂಪದಲ್ಲಿ ಓದಿದೆ. ಇಂತಹ ಸಂದರ್ಭದಲ್ಲೂ ತಾವು ಹಠಬಿಡದೆ ಪತ್ರಿಕೆ ರೂಪಿಸಿದ ಸಾಹಸಕ್ಕೆ ಏನು ಹೇಳಲಿ. ನಾಗೇಶ ಹೆಗಡೆಯವರ ಲೇಖನ, 'ಕೂರಿಗೆ' ಎಂಬ ಸರಳ ಸುಂದರ ಕಥೆ ಸಂಪಾದಕೀಯ ಹಾಗೂ ಉಳಿದ ಲೇಖನಗಳು ತುಂಬಾ ಚೆನ್ನಾಗಿವೆ. ಕರೋನಗಿಂತಲೂ ನಮ್ಮ ಟಿ.ವಿ. ಮಾಧ್ಯಮಗಳ ಕಿರಿಚಾಟ ಅರಚಾಟ ಅಸಂಬದ್ಧ ಹೇಳಿಕೆಗಳು ಮತ್ತು ನಮ್ಮ ದಿನಪತ್ರಿಕೆಗಳಲ್ಲಿ ಎರಡೆರಡು ಪುಟ ಪುಡಾರಿ, ಮರಿ ಪುಡಾರಿಗಳ ಸಮಾಜ ಸೇವೆ ಎಂಬ ಹೆಸರಿನ ಚಿತ್ರಗಳು ಮತ್ತು ವಿವರಗಳು, ನಾವು ಮನೆಯಲ್ಲಿ ಏನೇನು ಮಾಡಿ ತಿನ್ನುತ್ತಿದ್ದೇವೆ ಎಂಬ ಸೂಕ್ಷ್ಮತೆಗಳೇ ಸತ್ತ ಸೆಲ್ಫಿಗಳು ಇವನ್ನೆಲ್ಲಾ ನೋಡುತ್ತಿದ್ದರೆ, ಇಡೀ ವಿಶ್ವವನ್ನೇ ಇಂಥ ವೈರಾಣುಗಳು ಬಂದು ಎರಡು ಕಾಲಿನ ಪ್ರಾಣಿಗಳನ್ನು ಒಂದೇ ಸಲ ಮುಗಿಸಿ, ಈ ಭೂಮಿಗೆ ಪುನಃ ಉಸಿರಾಡುವಂತೆ ಮಾಡಬಾರದೇ ಎನಿಸುತ್ತದೆ.

**–ಜಯರಾಮ್ ಪಾಟೀಲ್,** ಹದಜನ, ಮೈಸೂರು

ಇಂತಹ ಕಷ್ಟದ ದಿನಗಳಲ್ಲೂ ಪತ್ರಿಕೆಯ ಮುದ್ರಣ ವ್ಯವಸ್ಥೆ ಮಾಡಿ ಅಂಚೆಯ ಮೂಲಕ ಕಳಿಸಿರುವ ನಿಮ್ಮ ಬದ್ಧತೆ ಅಪರೂಪದ್ದು. ಅಭಿನಂದನೆಗಳು.

**–ಎಂ.ಎಸ್. ಶ್ರೀರಾಮ್,** ಬೆಂಗಳೂರು

ಮೇ ಸಂಚಿಕೆಯ ಸಂಪಾದಕೀಯ ನಮ್ಮ ಒಳಗಣ್ಣನ್ನು ತೆರೆಸುವ ಲೇಖನ. ಬರೀ ಜ್ಞಾನಿಗಳಾಗದೆ ಅರಿವುಳ್ಳವರಾಗಬೇಕೆನ್ನುವ ಸದಾಶಯದ ಚಿಂತನೆ ಮಿಡಿದಿದೆ. ವಿಶ್ವಮಾನವತೆಯಿಂದ ಮತ್ತೂ ಮೇಲಕೆತ್ತಿ ಸಕಲ ಜೀವಾತ್ಮರನ್ನೊಳಗೊಂಡು ಸಹಜೀವನ ನಡೆಸಲು ಪ್ರೇರೇಪಿಸುತ್ತದೆ.

**–ಮಹಾಂತೇಶ, ಕೈಗಾ**

'ಹೊಸ ಮನುಷ್ಯ' ಮೇ ೨೦ ರ ಸಂಪಾದಕರ ಟಿಪ್ಪಣಿಗಳೂ ಸೇರಿದಂತೆ, ಕರೋನ ಕುರಿತಂತೆ ನಿಮ್ಮ ಇತ್ತೀಚಿನ ಎಲ್ಲ ಬರೆಹಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ, ವಸ್ತುನಿಷ್ಠತೆ, ಮತ್ತು ಸಮಸ್ಯೆಯ ಮೂಲವನ್ನು ಅರ್ಥೈಸುವ ಪ್ರಯತ್ನಗಳನ್ನು ಕಾಣಬಹುದಾಗಿದೆ. ಇದು ನಿಮ್ಮ ಎಲ್ಲ ಚಿಂತನೆಗಳ ವೈಶಿಷ್ಟ್ಯ ಎಂಬ ಮಾತನ್ನು ನಾನು ಪುನಃ ಹೇಳುವ ಅಗತ್ಯವಿಲ್ಲ. ಬಂಡವಾಳಗಾರರು ಹುಟ್ಟುಹಾಕುವ ಹುಸಿ ಅಗತ್ಯಗಳು, ನಮ್ಮ ವಿಲಾಸಪ್ರಿಯ ಜೀವನ ಶೈಲಿ, ಮತ್ತು ಪ್ರಕೃತಿಯ ಮೇಲಿನ ಮಾನವನ ಪೈಶಾಚಿಕ ದೌರ್ಜನ್ಯ, ಈ ಕುರಿತು ನಮ್ಮ ಯೋಚನಾಲಹರಿ ಹರಿಯುವಂತೆ ಈ ಲೇಖನಗಳು ನಿರ್ದೇಶಿಸುತ್ತವೆ. ನಮ್ಮ ಬದುಕನ್ನು ನಿಯಂತ್ರಿಸುವ ಅಧಿಕಾರದಲ್ಲಿರುವ ಜನ ಈ ಬಗ್ಗೆ ಯೋಚಿಸುವ ಅಗತ್ಯ ಇದೆ.

**–ಎಚ್. ಎಸ್. ಈಶ್ವರ,** ಬೆಂಗಳೂರು

'ಹೊಸ ಮನುಷ್ಯ' ಪತ್ರಿಕೆಯ ಪ್ರಮುಖ ಆಕರ್ಷಣೆ ಸಂಪಾದಕೀಯ ಎಂದರೆ ಅದು ಅತಿಶಯೋಕ್ತಿಯಲ್ಲ. ಮೇ ತಿಂಗಳ ಸಂಚಿಕೆಯಲ್ಲಿಯೂ ಡಿಎಸ್‌ಎನ್ ಮೇಷ್ಟ್ರು ಕರೋನಾ ಸಂಬಂಧಿಸಿದಂತೆ ವಿಶೇಷವಾಗಿ ಪ್ರಸ್ತಾಪಿಸಿ, ಅದರ ಸಕಲೆಂಟು ಆಯಾಮಗಳ ಕುರಿತು ಚರ್ಚಿಸಿರುವುದು ಸಮಯೋಚಿತ. ಆರೋಗ್ಯ–ಶಿಕ್ಷಣ ಕ್ಷೇತ್ರಗಳು ಖಾಸಗಿಯವರ ಕೈವಶವಾಗಿರುವ ಹಿನ್ನೆಲೆಯಲ್ಲಿ ಸಾಮಾನ್ಯ ಜನರಿಗೆ ಇವೆರಡೂ ಸೌಲಭ್ಯಗಳು ಕನ್ನಡಿಯ ಗಂಟು ಎಂಬಂತಾಗಿವೆ.

ಅಗತ್ಯವಿದ್ದಾಗ ಪ್ರಕೃತಿ ತನ್ನನ್ನು ತಾನು ಸರಿಪಡಿಸಿಕೊಳ್ಳಲು ಮುಂದಾಗುತ್ತದೆ ಎಂಬುದನ್ನು ನಾಗೇಶ್ ಹೆಗಡೆಯವರ 'ಗೇಯಾ ಸಿದ್ಧಾಂತ' ಕುರಿತ ಕೌತುಕಮಯ ಲೇಖನ ವಿಶದೀಕರಿಸುತ್ತದೆ. ಅಭಿವೃದ್ಧಿಯ ಮರೀಚಿಕೆ ಹಿಂದೆ ಬಿದ್ದ ಮನುಷ್ಯನೆಂಬ ಭಸ್ಮಾಸುರನನ್ನು ಪ್ರಕೃತಿ ಮೋಹಿನಿ ರೂಪ ಧರಿಸಿ ಕಾಲಕಾಲಕ್ಕೆ ಶಿಕ್ಷಿಸುತ್ತಾಳೆ ಎಂದೆನಿಸುತ್ತದೆ. ಆದರೆ ಪೆಗ್ಗಿ ಮೋಹನ ಅವರ ಲೇಖನದಲ್ಲಿ ಹೇಳಿರುವಂತೆ ಪ್ರಕೃತಿಯ ಕೋಪಕ್ಕೆ ತುತ್ತಾಗುವವರು ಬಡಜನರೇ ಎನ್ನುವುದೂ ಕ್ರೂರ ಸತ್ಯ.

ಬೀಗಮುದ್ರೆಯಿಂದ ಮನುಷ್ಯನ ಹಸ್ತಕ್ಷೇಪ ನಿಂತಿದ್ದರ ಫಲವಾಗಿ ಪ್ರಕೃತಿ ತನ್ನ ವೈಭವವನ್ನು ಮರಳಿ ಪಡೆದು ನಳನಳಿಸುತ್ತಿರುವುದೇ ಈ ಕಾರ್ಮೋಡದ ಅಂಚಿನಲ್ಲಿ ಇಣುಕುತ್ತಿರುವ ಬೆಳ್ಳಿ ಕಿರಣ. ಈ ಕಾರಣಕ್ಕಾಗಿಯೇ ಪ್ರಕೃತಿಯೊಂದಿಗೆ ತಾದಾತ್ಮ್ಯ ಇರಿಸಿಕೊಂಡು ಬದುಕಿದರೆ ಲೇಸು ಎಂಬುದನ್ನು ಪ್ರತಿಪಾದಿಸುವ ಮಹಾಂತೇಶ ಓಶಿಮಠ ಅವರ ಕಥೆ 'ಕೂರಿಗೆ' ತುಂಬಾ ಇಷ್ಟವಾಯಿತು.

'ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ' ಎಂಬ ತೇಜಸ್ವಿ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಅಷ್ಟಕ್ಕೂ, ಮನುಷ್ಯನ ಉಳಿವಿಗೆ ಪ್ರಕೃತಿಯ ಅವಶ್ಯಕತೆ ಇದೆ ಹೊರತು ಪ್ರಕೃತಿಗೆ ಮನುಷ್ಯನ ಅವಶ್ಯಕತೆಯಿಲ್ಲ, ಅಲ್ಲವೇ?

**–ಸೋಮು,** ಹುಬ್ಬಳ್ಳಿ.

ನಾಗೇಶ್ ಹೆಗಡೆಯವರ 'ಗೇಯಾ' ಬಗೆಗಿನ ಲೇಖನ ಈ ಸಂದರ್ಭದಲ್ಲಿ ಬಹಳ ಮುಖ್ಯವಾದ ಬರಹ. ಗೇಯಾ ಬಹಳ ವರ್ಷಗಳ ಹಿಂದೆಯೇ ನಾನು ಗಮನಿಸಿದ್ದೆ. ಆಧುನಿಕ ಅನುಭಾವಿಗಳ ಅನುಭವಗಳು ಅವರ ವಿಡಿಯೋ ಸರಣಿಗಳಲ್ಲಿ ನಿರೂಪಿತವಾಗಿವೆ. ಪಶ್ಚಿಮದಲ್ಲಿ ಈ ರೀತಿಯ 'ಕಲ್ಟ್' ಗಳು ಶುರುವಾಗಿವೆ. ಅದರಲ್ಲಿ ವಿಜ್ಞಾನಿಗಳು ಇದ್ದಾರೆ. ನಾಸೀಂ ಹೆರಮನ್ ಅನ್ನುವ ಥಿಯರೆಟಿಕಲ್ ಫಿಸಿಕ್ಸ್‌ನ ವಿಜ್ಞಾನಿಯೊಬ್ಬರು 'ಕನೆಕ್ಟೆಡ್ ಯೂನಿವರ್ಸ್' ಎನ್ನುವ ಇದೇ ಥರದ ವಿಡಿಯೋ ಮಾಡಿದ್ದಾರೆ. ಅದರಲ್ಲಿ ವಿಶ್ವ ಪ್ರಜ್ಞೆ ಎಂಬ ಪರಿಕಲ್ಪನೆಯ ಮೂಲಕ ವಿಶ್ವದ ಪ್ರತಿಯೊಂದೂ ಒಂದಕ್ಕೊಂದು ಸಂಬಂಧ ಹೊಂದಿ ವಿಶ್ವ ಹೇಗೆ ಇಡಿಯಾಗಿದೆ ಎನ್ನುವುದರ ಬಗ್ಗೆ ಮಾತಾಡುತ್ತಿದ್ದಾರೆ.

**–ಅಪೂರ್ವ ಡಿ'ಸಿಲ್ವ,** ಮೈಸೂರು

ಮೇ ಸಂಚಿಕೆಯಲ್ಲಿನ 'ಕೂರಿಗೆ' ನಾನು ಜೀವನದಲ್ಲಿ ಓದಿದ ಮೊದಲ ಕಥೆ! ಅಂದರೆ, ನನ್ನಿಂದ ಪೂರ್ಣ ಓದಿಸಿಕೊಂಡ ಕಥೆ. ಇದೊಂದು ಜೀವಂತ ಅನುಭವ ನೀಡುವ ಅದ್ಭುತ ಕಥೆ. ಇಂಥ ಕತೆಗಳು ಪತ್ರಿಕೆಯಲ್ಲಿ ಮತ್ತಷ್ಟು ಬರಲಿ.

**–ಬಿ. ಶಿವಕುಮಾರ್,** ಹಾಸನ

ಮಹಾಂತೇಶ ಓಶಿಮಠ ಅವರ 'ಕೂರಿಗೆ' ಒಂದು ಸರಳ ಸಹಜ ಕಥೆ. ಮನುಷ್ಯ, ಭೂಮಿ ಹಾಗು ಕ್ರೌರ್ಯ ಏಕಕಾಲಕ್ಕೆ ಪರಿಭ್ರಮಿಸಿ ಚಿಂತನೆಗೆ ಹಚ್ಚಿತು. ಸಹಜ ಪ್ರತಿಭೆಗೆ ಅವಕಾಶ ನೀಡಿರುವ ನಿಮಗೆ ಅಭಿನಂದನೆಗಳು.

**–ಸತೀಶ ಕುಲಕರ್ಣಿ,** ಹಾವೇರಿ

## ಶಾಂತಾದೇವಿ ಕಣವಿ: ಒಂದು ಸವಿ ನೆನಪು



**ಶಾಂ**ತಾದೇವಿ ಕಣವಿ ಇನ್ನಿಲ್ಲ ಎಂದು ತಿಳಿದ ಕೂಡಲೇ(೨೨.೫.೨೦೨೦) ನೆನಪಾದದ್ದು ಅದೇ ಮಂದಸ್ಮಿತ ಶಾಂತ ಮುಖ–ಮೆಲುಮಾತು. ಅಕ್ಷರ ಮಾಲೆಯನ್ನೇ ಒಡವೆಯನ್ನಾಗಿಸಿಕೊಂಡು ಅರವತ್ತರ ದಶಕದಲ್ಲಿ ಬರವಣಿಗೆಯಲ್ಲಿ ತೊಡಗಿಸಿಕೊಂಡು ಸರಿಸುಮಾರು ಮೂರೂವರೆ ದಶಕಗಳ ಅವಧಿಯಲ್ಲಿ ನೂರಾ ಹತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದು ಕನ್ನಡ ಮಹಿಳಾ ಸಾಹಿತ್ಯ ಲೋಕವನ್ನು ವಿಸ್ತರಿಸಿದವರಲ್ಲಿ ಶಾಂತಾದೇವಿ ಕೂಡ ಒಬ್ಬರು. ೭೦–೮೦ರ ದಶಕದಲ್ಲಿ 'ಪ್ರಜಾವಾಣಿ' ಇನ್ನಿತರ ದೀಪಾವಳಿ ವಿಶೇಷಾಂಕಗಳಲ್ಲಿ ಅವರ ಕಥೆಗಳು ತಪ್ಪದೆ ಪ್ರಕಟವಾಗುವಷ್ಟು ಅವರು ನಮ್ಮ ಪ್ರಮುಖ ಕಥೆಗಾರ್ತಿಯಾಗಿದ್ದರು. ಆ ಮೂಲಕವೇ ನನ್ನ ತಲೆಮಾರಿನ ಓದುಗರನ್ನು ಮುಟ್ಟಿದ್ದು ಕೂಡ.

ನವೋದಯದ ಘಟ್ಟದಲ್ಲಿ ಬರವಣಿಗೆಯನ್ನು ಆರಂಭಿಸಿದ ಶಾಂತಾದೇವಿಯವರು ತಮ್ಮ ತಂದೆ ತಾಯಿಯ ವಾಚನಾಭಿರುಚಿ ಮತ್ತು ಕವಿ–ಸಂಗಾತಿ ಚೆನ್ನವೀರ ಕಣವಿಯವರ ಪ್ರೋತ್ಸಾಹ, ಬೇಂದ್ರೆ–ಆನಂದಕಂದ–ಕಟ್ಟೀಮನಿ–ಸಿದ್ಧಯ್ಯ ಪುರಾಣಿಕ–ಜೀಎಸ್ಸೆಸ್–ಕಾಪಸೆ–ಮಾಳವಾಡ ದಂಪತಿ ಮುಂತಾದ ಹಿರಿಯ ಸಾಹಿತಿಗಳ ಮೆಚ್ಚುಗೆ ಪಡೆದು ಬರವಣಿಗೆಯಲ್ಲಿ ತಮ್ಮದೇ ಛಾಪು ಮೂಡಿಸಿದರು. ಕುಟುಂಬ ವತ್ಸಲೆಯಾದ ಶಾಂತಕ್ಕನವರು ತಮ್ಮ ಕತೆಗಳಲ್ಲೂ ಅದನ್ನು ವಿವಿಧ ರೂಪಗಳಲ್ಲಿ ಕಾಣಿಸಿರುವರು. ಕುಟುಂಬಗಳೊಳಗಣ ಇಕ್ಕಟ್ಟು–ಬಿಕ್ಕಟ್ಟುಗಳನ್ನು ಹೊಂದಾಣಿಕೆ ಮತ್ತು ಸಮನ್ವಯದ ಮೂಲಕ ಅನುಸಂಧಾನ ಮಾಡುವುದೇ ಅವರ ಕಥೆಗಳ ಆಶಯವೆಂಬುದಕ್ಕೆ 'ಕಳಚಿ ಬಿದ್ದ ಪೈಜಣ', 'ಜಾತ್ರೆ ಮುಗಿದಿತ್ತು', 'ಮರುವಿಚಾರ', 'ಬಾರುಕೋಲು' ಮುಂತಾದ ಕಥೆಗಳೇ ಸಾಕ್ಷಿಯಾಗಿವೆ.

ಏಳು ಕಥಾ ಸಂಕಲನಗಳನ್ನು ನಮ್ಮ ಮಡಿಲಿಗಿರಿಸಿ ಶಾಂತಕ್ಕ ಮರೆಯಾಗಿರುವರು. ಅವರನ್ನು ನಾನು ಕೊನೆಯ ಬಾರಿ ನೋಡಿದ್ದು, ೨೦೧೮ರ ಅಕ್ಟೋಬರ್‌ನಲ್ಲಿ ಧಾರವಾಡದ ಅವರ ಮನೆಯಲ್ಲಿ. 'ನನಗೆ ಮಂಡಿನೋವು. ಕಣವಿಯವರು ಚಲೋ ಚಾ ಮಾಡ್ತಾರೆ ನೋಡ್ರಿ' ಎಂದು ಕಣವಿಯವರ ಮುಖೇನ ನಮ್ಮ ಶಿವಮೊಗ್ಗ ಗೆಳೆಯರ ತಂಡಕ್ಕೆ ಚಹಾ ಸತ್ಕಾರ ಮಾಡಿ ಬೀಳ್ಕೊಟ್ಟಿದ್ದು ನಾನು ಬಹುಕಾಲ ಕಾಪಿಟ್ಟುಕೊಳ್ಳುವ ಒಂದು ಸವಿ ನೆನಪಾಗಿದೆ.

**–ಸವಿತಾ ನಾಗಭೂಷಣ**

ಯುವಲಹರಿ

# ಯಕ್ಷಗಾನ ಭಾಗವತಿಕೆಯ 'ಮೂಲವಸ್ತು' ಮತ್ತು ಹೆಣ್ಣು ಧ್ವನಿ

–ಕೃತಿ ಆರ್.



**"ಯಕ್ಷಗಾನದಲ್ಲಿ ಕುಣಿತವಾಗಲಿ, ತಾಳವಾದ್ಯಗಳಾಗಲಿ, ಭಾಗವತಿಕೆಯಾಗಲಿ, ಗಂಡಸರೇ ಭಾಗವಹಿಸುತ್ತಾ ಹೋದ ಹಾಗೆ ಅದು ಗಂಡು ದೇಹಕ್ಕೆ ತಕ್ಕಂತೆ ಬೆಳೆದಿದ್ದು ಅನಿವಾರ್ಯವಾಗಿತ್ತು. ಗಂಡಸರು ಮಾಡುವ ಹೆಣ್ಣು ವೇಷವೂ ನಮಗೆ ಎಷ್ಟು ರೂಢಿಯಾಗಿದೆಯೆಂದರೆ ಹೆಂಗಸರೇ ಹೆಣ್ಣು ವೇಷ ಮಾಡಿದಾಗಲೂ ಗಂಡಸರ ಅನುಕರಣೆಯನ್ನೇ ಹೆಂಗಸರು ಮರುಅನುಕರಣೆ ಮಾಡಬೇಕಾಗುತ್ತದೆ. ಯಕ್ಷಗಾನ 'ಶೈಲೀಕೃತ' ರಂಗ ಪ್ರಕಾರವಾಗಿದ್ದರಿಂದ ಸ್ವಲ್ಪ ಮಟ್ಟಿಗೆ ಹೆಂಗಸರಿಗೆ ಇದನ್ನು ಮಾಡಲು ಸಾಧ್ಯವಾಗಿದ್ದಿದೆ.".**

ಗಂಡಸರು ಮಾತ್ರ ಪ್ರದರ್ಶನ ಕೊಡುವ ಯಕ್ಷಗಾನ ರಂಗಭೂಮಿಯಲ್ಲಿ ಹೆಣ್ಣು ರಂಗಸ್ಥಳ ಹತ್ತುವಾಗ, ಹಿಂದಿನಿಂದ ಹೆಣ್ಣುಮಕ್ಕಳನ್ನು ಹೊರಗಿಟ್ಟ ಇತರ ಸಾರ್ವಜನಿಕ ಕೆಲಸಗಳಂತೆ, ಅಥವಾ ಸಮಾಜದ ಉಳಿದ ವ್ಯವಸ್ಥೆಗಳಲ್ಲಾಗುವಂತೆಯೇ ಹಲವು ತೊಡಕುಗಳಾಗುತ್ತವೆ. ಅದು ಹಿಂದಿನಿಂದ ಬಂದ ಭೌತಿಕ ವ್ಯವಸ್ಥೆ ಮತ್ತು ನಡಾವಳಿಗಳು ಸಾಮಾಜಿಕರಿಗೆ ರೂಢಿಸಿದ ಪೂರ್ವಗ್ರಹದ ಸಮಸ್ಯೆಗಳು. ಇವುಗಳ ಬಗ್ಗೆ ಇಲ್ಲಿ ಬರೆಯಲು ಜಾಗದ ಕೊರತೆಯಿರುವುದರಿಂದ, ಯಕ್ಷಗಾನ ಕಲೆಯ 'ಮೂಲವಸ್ತು'ವನ್ನು ಹೆಣ್ಣು ಧ್ವನಿಯಲ್ಲಿ ಪ್ರಸ್ತುತಪಡಿಸುವಾಗ ನಾನು ಕಂಡುಕೊಂಡ ಕೆಲವು ಕುತೂಹಲಕರ ಸಮಸ್ಯೆಗಳನ್ನು ಇಲ್ಲಿ ಹೇಳುತ್ತೇನೆ.

ಒಂದು ಕಲೆಯನ್ನು ನೋಡುವುದು, ಪ್ರಯೋಗಿಸುವುದು, ಗ್ರಹಿಸುವುದು, ಅನುಭವಿಸುವುದು, ಸವಿಯುವುದು ಮುಂತಾದವುಗಳ ಬಗ್ಗೆ ಯೋಚಿಸುವ ಶಾಸ್ತ್ರವನ್ನು ರಸತತ್ವ ಎನ್ನಬಹುದಾದರೆ, ಕಳೆದ ಶತಮಾನದ ಬಹುಮುಖ್ಯ ತಿರುವು, ಈ ರಸತತ್ವದ 'ತತ್ವ'ಗಳು ಸಾಮಾನ್ಯೀಕರಣವಾದಂತೆಲ್ಲ ಅದು ಅನುಪಯೋಗಿಯಾಗುತ್ತಾ ಹೋಗುವುದನ್ನು ಗುರುತಿಸಿಕೊಂಡಿದ್ದು. ಅಂದರೆ ಒಂದು ನಿರ್ದಿಷ್ಟ ಕಲೆಯ ಸೌಂದರ್ಯವನ್ನು ಅಳೆಯುವಾಗ ಎಲ್ಲಾ ಕಲೆಗಳಿಗೂ ಅನ್ವಯವಾಗುವ ತತ್ವಗಳನ್ನು ಬಳಸಿದಷ್ಟೂ ಆ ಕಲೆಯನ್ನು ಪರಿಪೂರ್ಣವಾಗಿ ಗ್ರಹಿಸಲು ವಿಫಲವಾಗುವುದು. ಹಾಗಾಗಿಯೇ ಒಂದು ಕಲೆಯ ಭೌತಿಕತೆ ಅಥವಾ ಮೂಲವಸ್ತು (ಮೆಟಿರಿಯಾಲಿಟಿ) ಮತ್ತು ನಿರ್ಬಂಧ(ಕನ್ಸ್ಟ್ರೈನ್)ಗಳನ್ನು ಗಮನಿಸುವುದು ನಮಗೆ ಅನಿವಾರ್ಯವಾಗುತ್ತದೆ. ಉದಾಹರಣೆಯೊಂದಿಗೆ ಹೇಳಿದರೆ ಇದು ಸ್ಪಷ್ಟವಾಗಬಹುದು. ಸಂಗೀತದ ಮೂಲವಸ್ತು ಶಬ್ದ, ಧ್ವನಿ(ಸೌಂಡ್) ಎಂದು ಹೇಳಬಹುದು. ಅದು ಬರೀ ಒಂದು ಶಬ್ದವಲ್ಲ; ಬದಲಿಗೆ ಶಬ್ದದಿಂದ ಶಬ್ದಕ್ಕೆ ಇರುವ ಸಂಬಂಧ. ಆ ಭಾಷೆಯಲ್ಲಿನ ಬೇರೆ ಶಬ್ದಗಳೊಂದಿಗಿರುವ ಸಂಬಂಧವೂ ಸಂಗೀತದ ಮೆಟಿರಿಯಲ್ ಎಂದು ಉದಾಹರಣೆಯಾಗಿ ಇಟ್ಟುಕೊಳ್ಳಬಹುದು. ಹಾಗೆಯೇ ನಿರ್ಬಂಧವೆಂದರೆ ಒಂದು ಕಲಾರೂಪಕ್ಕಿರುವ ನಿಯಮ, ನಿಬಂಧನೆಗಳು. ಸಂಗೀತದ ಕಲಾಪ್ರಕಾರದಲ್ಲಿರುವ ನಿಯಮದಂತೆ ವಸ್ತು ಮತ್ತು ಲಕ್ಷಣಗಳ ಮಧ್ಯಸ್ಥಿಕೆ ಮಾಡುವುದು ಈ ಮೂಲವಸ್ತು. ಅಂದರೆ ಕಲಾಪ್ರಕಾರದ ರೂಪ ಲಕ್ಷಣಗಳು ಶಬ್ದದ ಮೂಲಕವೇ ಪ್ರಕಟಗೊಳ್ಳುತ್ತವೆ, ನಿಯಮ ನಿಬಂಧನೆಗಳು ಮೂಲವಸ್ತುವಿನ ಒಳಗೇ ಕಟ್ಟಲ್ಪಟ್ಟಿರುತ್ತದೆ. ಈ ಮೂಲವಸ್ತುವನ್ನು (ಬಣ್ಣ, ಶಬ್ದ, ಪದಗಳು)ಕಲಾವಿದ ನಿಯಂತ್ರಿಸುತ್ತಾ ಇರುತ್ತಾನೆ. ಕೆಲವೊಮ್ಮೆ ಕಲಾಪ್ರಕಾರದ ಲಕ್ಷಣವೂ ಮೂಲವಸ್ತು ಆಗುತ್ತದೆ. ಏಕೆಂದರೆ ಕಲಾವಿದೆ ತಾನು ಉಪಯೋಗಿಸುತ್ತಿರುವ ಕಲೆಯ ರೂಪ ಲಕ್ಷಣವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿರುತ್ತಾಳೆ.

ಯಕ್ಷಗಾನ ಕುಣಿತ, ಮಾತು, ಭಾಗವತಿಕೆ, ತಾಳವಾದ್ಯ ಎಲ್ಲವೂ ಇರುವ ಒಂದು ರಂಗಭೂಮಿ. ಈ ಎಲ್ಲಾ ವಿಭಾಗಕ್ಕೂ ಪ್ರತ್ಯೇಕ ಮೂಲವಸ್ತುಗಳಿದ್ದು ಅವೆಲ್ಲದಕ್ಕೂ ಅದರದೇ ಆದ ಹಲವು ಸ್ತರಗಳ ನಿರ್ಬಂಧಗಳಿವೆ. ಯಕ್ಷಗಾನವನ್ನು ಒಂದು ಸಾಮಾಜಿಕ ರಾಜಕೀಯ ಅಧ್ಯಯನಕ್ಕೆ ಒಳಪಡಿಸುವಾಗಲೂ ಪ್ರಸಂಗದ ಕಥೆಯನ್ನೋ, ಆ ಪ್ರಸಂಗವನ್ನು ರಂಗದಲ್ಲಿ ತಂದ ಬಗೆಯನ್ನೋ ನೋಡಿದರೆ ಪೂರ್ಣವಾಗಲಾರದು. ಒಂದು ನಿರ್ದಿಷ್ಟ ದಿನದ ರಂಗಪಠ್ಯದ ಚಾರಿತ್ರಿಕತೆ ಅದರ ಮೂಲ ವಸ್ತುವಿನಲ್ಲೂ ಪ್ರಕಟಗೊಂಡಿರುತ್ತದೆ. ಮೂಲವಸ್ತುವೂ ಪರಂಪರೆಯ, ಸಮಾಜದ ಸಮಷ್ಟಿ ಉತ್ಪನ್ನವೇ ಆಗಿರುವುದರಿಂದ, ಅದರೊಟ್ಟಿನ ಸಂಘರ್ಷವೂ ಸಮಾಜ ಮತ್ತು ಕಲೆಯ ಸಂಬಂಧವನ್ನು ಪ್ರತಿಫಲಿಸುತ್ತದೆ.

ಯಕ್ಷಗಾನದಲ್ಲಿ ಕುಣಿತವಾಗಲಿ, ತಾಳವಾದ್ಯಗಳಾಗಲಿ, ಭಾಗವತಿಕೆಯಾಗಲಿ, ಗಂಡಸರೇ ಭಾಗವಹಿಸುತ್ತಾ ಹೋದ ಹಾಗೆ ಅದು ಗಂಡು ದೇಹಕ್ಕೆ ತಕ್ಕಂತೆ ಬೆಳೆದಿದ್ದು ಅನಿವಾರ್ಯವಾಗಿತ್ತು. ಗಂಡಸರು ಮಾಡುವ ಹೆಣ್ಣು ವೇಷವೂ ನಮಗೆ ಎಷ್ಟು ರೂಢಿಯಾಗಿದೆಯೆಂದರೆ ಹೆಂಗಸರೇ ಹೆಣ್ಣು ವೇಷ ಮಾಡಿದಾಗಲೂ ಗಂಡಸರ ಅನುಕರಣೆಯನ್ನೇ ಹೆಂಗಸರು ಮರುಅನುಕರಣೆ ಮಾಡಬೇಕಾಗುತ್ತದೆ. ಯಕ್ಷಗಾನ 'ಶೈಲೀಕೃತ' ರಂಗ ಪ್ರಕಾರವಾಗಿದ್ದರಿಂದ ಸ್ವಲ್ಪ ಮಟ್ಟಿಗೆ ಹೆಂಗಸರಿಗೆ ಇದನ್ನು ಮಾಡಲು ಸಾಧ್ಯವಾಗಿದ್ದಿದೆ.

ಆದರೆ ಮೂಲವಸ್ತುವಿನ ಮುಖ್ಯ ಸಮಸ್ಯೆ ಕಾಣುವುದು ಧ್ವನಿ ಉಪಯೋಗಿಸಬೇಕಾದ ಯಕ್ಷಗಾನದ ವಿಭಾಗಗಳಲ್ಲಿ. ಭಾಗವತಿಕೆ ಮತ್ತು ಮಾತು ಎರಡಕ್ಕೂ ಬೇಕಾಗುವುದು ನಮ್ಮ ಗಂಟಲು ಹೊರಡಿಸಬಹುದಾದ ಶಬ್ದ. ಇಲ್ಲಿ ಭಾಗವತಿಕೆ(ಹಾಡುಗಾರಿಕೆ) ಯ ಮೂಲವಸ್ತುವೇ 'ಗಂಡು' ಧ್ವನಿ, ಅಥವಾ ಗಂಡು ಸ್ವರಕ್ಕೆ 'ಸಹಜ'ವಾದ ಪಿಚ್. ಧ್ವನಿಯ ಬಳಸುವಿಕೆ, ಸ್ವರಕ್ಕೆ ಮಾಡುವ ಅಲಂಕಾರಗಳು, ಅಲುಗುಗಳು ಯಕ್ಷಗಾನ ಪದ್ಯದ ಶೈಲಿಯನ್ನು ಬೇರೆಯಾಗಿಟ್ಟಿದ್ದಲ್ಲದೇ, ಇಂತಹ ಪ್ರಯೋಗಗಳು ಗಂಡಿನ ಧ್ವನಿಯ ಸಾಧ್ಯತೆಗಳಿಗೆ ಅನುಗುಣವಾಗಿ ಬೆಳೆಯುತ್ತಾ ಬಂದಿದೆ. ಭಾಗವತನನ್ನು ಯಕ್ಷಗಾನದಲ್ಲಿ ಪ್ರಥಮ ವೇಶ ಎಂದು ಕರೆಯುತ್ತಾರೆ. ಈ ಭಾಗವತ ಇಡೀ ಪ್ರಸಂಗದ ಸೂತ್ರಧಾರಿತ್ವವನ್ನು ವಹಿಸಿಕೊಳ್ಳುತ್ತಾನೆ. ಉಳಿದ ಪಾತ್ರಗಳು ರಂಗದ ಮೇಲೆ ಬಂದು ಹೋಗುತ್ತಾ ಇರುತ್ತವೆ. ಹಾಗಾಗಿ ಇಡೀ ಪ್ರಸಂಗದ ಒಟ್ಟಂದದ ಜವಾಬ್ದಾರಿ ಅವನ ಮೇಲಿರುತ್ತದೆ. ಒಂದು ರೀತಿಯ ನಿರ್ದೇಶಕನ ಪಾತ್ರ ಅವನದು. ಮಾತು, ಕುಣಿತ ಜಾಸ್ತಿಯಾದರೆ ಮಧ್ಯವೇ ಮುಂದಿನ ಪದ್ಯ ಎತ್ತಿ ಅದನ್ನು ನಿಯಂತ್ರಿಸಬಲ್ಲವನಾಗಿರುತ್ತಾನೆ. ಇದರಿಂದಾಗಿಯೇ ಯಕ್ಷಗಾನದ ವಾತಾವರಣವನ್ನು ತರುವ ಜವಾಬ್ದಾರಿ ಅವನ ಹೆಗಲಿನ ಮೇಲಿರುತ್ತದೆ.

ಯಕ್ಷಗಾನದ ವಾತಾವರಣ ಎನ್ನುವುದು ನಿರ್ದಿಷ್ಟವಾಗಿ ಹೀಗೇ ಎಂದು ಹೇಳಲು ಬರದು. ಆದರೆ ಯಕ್ಷಗಾನದ ಎಲ್ಲಾ ವಿಭಾಗಗಳು ಹಿಂದಿನಿಂದ ಕೇಳುತ್ತಾ ಮಾಡುತ್ತಾ ಬಂದ ಒಂದು ರಂಗಭೂಮಿಯ ಅನುಭವದ ಮೇಲೆ ನಿಂತಿರುವಂತದ್ದು. ಅಂದರೆ ಹಲವು ಪರಂಪರೆಗಳಂತೆ ರೂಢಿ ವಾತಾವರಣವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅಂದರೆ ಪದ್ಯ ಹೇಳುವ ಶೈಲಿಯ ಜೊತೆಗೆ ಆ ಶೈಲಿಯನ್ನು ಹೇಳುವ ಧ್ವನಿಗೂ ನಾವು ಹೊಂದಿಕೊಂಡಿರುತ್ತೇವೆ. ಗಂಡು ಧ್ವನಿ, ಗಡುಸು ಧ್ವನಿ ಇರುವ ಮಹಿಳಾ ಕಲಾವಿದರಿಗೆ, 'ಯಕ್ಷಗಾನಕ್ಕೆ ಹೇಳಿ ಮಾಡಿಸಿದ ಧ್ವನಿ'ಎಂದು ಹೇಳಲಾಗುತ್ತದೆ. 'ಹೆಂಗಸರ ಧ್ವನಿ ಯಕ್ಷಗಾನದ ವಾತಾವರಣವನ್ನು *ವಾತಾರಾವಣ* ಮಾಡುತ್ತದೆ', 'ಪಾತ್ರದ ಅಭಿನಯ ಕುಣಿತ ಎಲ್ಲ ಅಡ್ಡಿ ಇಲ್ಲ, ಆದರೆ ಹೆಂಗಸು ಪಾತ್ರಧಾರಿಗಳು ಬಾಯಿಬಿಟ್ಟರೆ ಬಣ್ಣಗೇಡು' ಎನ್ನುವ ತೀರಾ ಸಾಮಾನ್ಯ ಕಮೆಂಟುಗಳು. ನಮಗೆ ಯಕ್ಷಗಾನದ ವಾತಾವರಣದ ಅನುಭವದಲ್ಲಿ ಗಂಡು ಧ್ವನಿ ಎಷ್ಟು ಸೇರಿಕೊಂಡಿದೆ ಎನ್ನುವುದನ್ನು ತೋರಿಸುತ್ತದೆ.

ಯಕ್ಷಗಾನದ ಈ ಧ್ವನಿಯನ್ನು ಬೇರೆ ಪಿಚ್‌ಗೆ ಹೊಂದಿಸಿಕೊಳ್ಳುವಲ್ಲಿ ಕಲಾವಿದೆ ಹಲವು ಪ್ರಯೋಗಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ರೂಢಿ ಅನ್ನುವುದು ನಮಗೇ (ಯಕ್ಷಗಾನವನ್ನು ನೋಡುತ್ತಾ ಬೆಳೆದ ಕಲಾವಿದೆಯರಿಗೆ) ನಮ್ಮ ಪಿಚ್‌ನಿಂದ ಧ್ವನಿಯನ್ನು ಸ್ವಲ್ಪ ಗಡಸು ಮಾಡಿಕೊಳ್ಳುವ ಹಾಗೆ ಗೊತ್ತಿಲ್ಲದಂತೆಯೇ ಟ್ರೈನ್ ಆಗುತ್ತಾ ಇರುತ್ತೇವೆ. ಇದು ಕಲಾವಿದೆಯರನ್ನು ಒಂದು ಒತ್ತಡಕ್ಕೆ ತಂದಿಡುತ್ತದೆ. ಯಕ್ಷಗಾನವನ್ನು ವೃತ್ತಿಯಾಗಿ ತೆಗೆದುಕೊಂಡವರಿಗೆ, ಪ್ರೇಕ್ಷಕರನ್ನು ತಕ್ಷಣಕ್ಕೇ ಒಪ್ಪಿಸಬೇಕಾದ ಅನಿವಾರ್ಯತೆಯಿಂದಾಗಿ ಈ ಒತ್ತಡ ಅತೀ ಹೆಚ್ಚು. ಹೆಂಗಸರ ಎಂಟ್ರಿಯ 'ಹೊಸತನ', ಯಕ್ಷಗಾನ ಭಾಷೆಯಲ್ಲೇ ಹೇಳುವುದಾದರೆ ವರವೂ ಶಾಪವೂ ಆಗುತ್ತದೆ. ಹೆಂಗಸರಿಗೂ ಇದೆಲ್ಲ ಮಾಡಲು ಬರುತ್ತದೆ ಎನ್ನುವುದನ್ನು ನುರಿತ ಪ್ರೇಕ್ಷಕರಿಗೆ ಒಪ್ಪಿಸುವ ಒತ್ತಡದ ಜೊತೆಗೆ, ಭಾಗವತಿಕೆಯಲ್ಲಿ ತೋರಿಸುವ ವೀರ, ಕರುಣ ಶೃಂಗಾರ ಇತ್ಯಾದಿ ರಸಗಳನ್ನು ಹೆಣ್ಣು ಧ್ವನಿಯ ಸಾಧ್ಯತೆಗಳಲ್ಲೇ ಹೊಸದಾಗಿ ಅನುಸಂಧಾನ ಮಾಡುತ್ತಾ ಹೋಗುವ ಕೆಲಸವೂ ಕಲಾವಿದೆಯರಿಗಿದೆ. ಹೆಚ್ಚು ಹೆಂಗಸರು ಯಕ್ಷಗಾನದಲ್ಲಿ ತೊಡಗಿಸಿಕೊಳ್ಳುತ್ತಾ ಹೋದಂತೆ, ಗಂಡಸರ 'ಸಹಜ' ಧ್ವನಿಗಳಲ್ಲೂ ಹಲವು ಪಿಚ್‌ಗಳಿರುವುದು ಒಪ್ಪಿಕೊಂಡಂತೆ, ಹೆಂಗಸರ 'ಸಹಜ' ಧ್ವನಿಯ ವೈವಿಧ್ಯತೆಯೂ ಮುಂದೆ ಭಾಗವತಿಕೆಯ ಮೂಲವಸ್ತುವಾಗಬಹುದು.



**(ಮಲೆನಾಡಿನ ಪುರಪ್ಪೆಮನೆಯಲ್ಲಿ ಅಡಿಕೆ ವ್ಯವಸಾಯ ಮಾಡುವ ಆರ್ ಕೃತಿ ಯಕ್ಷಗಾನ–ತಾಳಮದ್ದಲೆಯಲ್ಲಿ ಆಸಕ್ತಿ ಹೊಂದಿ ಅದರ ಅಧ್ಯಯನದ ಜೊತೆಗೆ ಭಾಗವತಿಕೆಯಲ್ಲಿಯೂ ತರಬೇತು ಪಡೆಯುತ್ತಿದ್ದಾರೆ.)**

ಪ್ರಚಲಿತ-೧

# ಕರೋನಾ ಸಂಕಟದಿಂದ ಜಗತ್ತು-ಭಾರತ ಕಲಿಯಬೇಕಾದದ್ದೇನು?

-ಸುಧೀಂದ್ರ ಕುಲಕರ್ಣಿ




**ಕರೋನಾ ಜಗತ್ತಿನಾದ್ಯಂತ ಮಾಡಿರುವ ಪರಿಣಾಮಗಳು ಯುಗಪ್ರವರ್ತಕವಾಗಿರುವಂತೆ ಕಾಣತೊಡಗಿದ್ದು, ಇವು ಹೊಸದೊಂದು ಜಾಗತಿಕ ವ್ಯವಸ್ಥೆಯನ್ನೂ ನಿರ್ಮಿಸುವ ಸೂಚನೆಗಳು ದೊರಕತೊಡಗಿವೆ. ಈ ಬಗ್ಗೆ ವಿವಿಧ ಕೋನಗಳಿಂದ ಚಿಂತಿಸಿ ಬರೆದ ಲೇಖನವಿದು. ಈ ಲೇಖನ ಎತ್ತುವ ಹಲವು ಪ್ರಶ್ನೆಗಳು ಮತ್ತು ನೀಡುವ ಉತ್ತರಗಳು ಕುತೂಹಲಕರವಾಗಿದ್ದರೂ, ಚರ್ಚಾರ್ಹವೂ ಆಗಿವೆ. ಈ ಬಗ್ಗೆ ನಮ್ಮ ಓದುಗರು ತಮ್ಮ ಪ್ರತಿಕ್ರಿಯೆಗಳನ್ನು ಬರೆದು ಕಳಿಸಬಹುದು. ಇದು ಸುಧೀಂದ್ರ ಕುಲಕರ್ಣಿಯವರು 'ಹೊಸ ಮನುಷ್ಯ'ದ ವಿಶೇಷ ಆಹ್ವಾನದ ಮೇರೆಗೆ ಈ ಪತ್ರಿಕೆಗೆಂದೇ ಕನ್ನಡದಲ್ಲಿ ಬರೆದ ಲೇಖನವಾಗಿದೆ-ಸಂ.**

ರೇಖಾಚಿತ್ರ: ಗುಜ್ಜಾರ್

ಜಗತ್ತಿನ ಇತಿಹಾಸದಲ್ಲಿ ಸಣ್ಣ-ದೊಡ್ಡ ಸಂಕಟಗಳು ಬರುತ್ತಲೇ ಇರುತ್ತವೆ. ಸಂಕಟವಿಲ್ಲದೇ ಜೀವನವಿಲ್ಲ. ದೊಡ್ಡ ಸಂಕಟ ಬಂದಾಗ ವಿನಾಶ-ವಿಧ್ವಂಸಗಳು ಆಗುವುದು ಸಹಜ. ಆದರೆ ವಿನಾಶದ ಗರ್ಭದಿಂದಲೇ ಹೊಸ ವಿಕಾಸದ ಜನ್ಮ ಕೂಡ ಆಗುತ್ತಲೇ ಇರುತ್ತದೆ. ಇದೂ ಪ್ರಕೃತಿಯ ನಿಯಮವೇ. ಮಾನವ ಕುಲದ ಸದೀರ್ಘ ಪಯಣದಲ್ಲಿ ಯಾವಾಗಲೂ ವಿನಾಶಕ್ಕಿಂತ ವಿಕಾಸದ ಕೈ ಮೇಲು. ವಿಧ್ವಂಸಕತೆಯ ವಿರುದ್ಧದ ಸಮರದಲ್ಲಿ ನಿರ್ಮಾಣವೇ ಯಾವಾಗಲೂ ಗೆಲ್ಲುವುದು. ಹೀಗಿರದಿದ್ದರೆ ಮಾನವ ಕುಲದ ಉತ್ಕ್ರಾಂತಿ ಸಾಧ್ಯವೇ ಇರಲಿಲ್ಲ.

ದೊಡ್ಡ ಸಂಕಟ ಬಂದಾಗ, ದೊಡ್ಡ ಪ್ರಮಾಣದಲ್ಲಿ ಸಾವು-ನೋವು ಅನುಭವಿಸಿದಾಗ **'ಮುಂದೆ ನಮ್ಮ ಗತಿ ಏನು?'** ಎಂಬ ಪ್ರಶ್ನೆ ಜನರನ್ನು ನಿಶ್ಚಿತವಾಗಿಯೂ ಕಾಡುತ್ತದೆ. ಆದರೆ ಆ ಕರಾಳ ಇರುಳು ಕೂಡ ಮುಗಿದು ಹೊಸ ದಿನದ ಸೂರ್ಯ ಬಾನಿನಲ್ಲಿ ಮೂಡೇರಿ ಬಂದಾಗ ಮಾನವ ಜನಾಂಗದ ಅದಮ್ಯ ಅಂತಃಶಕ್ತಿಯ ಪರಿಚಯವಾಗುತ್ತದೆ. ಆನಂತರ ಜಗತ್ತಿನ ಪಯಣದ ಹಾದಿಯಲ್ಲಿ ಹೊಸ ನಿರ್ಮಾಣದ ಪರ್ವ ಶುರುವಾಗುತ್ತದೆ.

ಕರೋನಾ ಮಹಾರೋಗದ ಸಂಕಟ ಒಂದು ವಿನೂತನ ಸಂಕಟ. ಅದು ವಿನೂತನವೂ, ವಿಶಾಲವೂ, ವಿಶ್ವವ್ಯಾಪ್ತವೂ ಆಗಿರುವುದರಿಂದಲೇ ಒಂದು ಹೊಸ ಜಗತ್ತಿಗೆ ನಾಂದಿಯಾಗಲಿದೆ. ಅರ್ಥಾತ್, ನಾವು ಇದರಿಂದ ಸರಿಯಾದ ಪಾಠಗಳನ್ನು ಕಲಿತುಕೊಂಡರೆ.

## ಕರೋನಾ ಸಂಕಟದ ವೈಶಿಷ್ಟ್ಯತೆಗಳು

ಈ ಪಾಠಗಳು ಯಾವುವು ಎಂಬ ವಿವೇಚನೆಗಿಂತ ಮುಂಚೆ- ಅಥವಾ ಈ ವಿವೇಚನೆಗೆ ಸಹಾಯಕ ಎಂಬ ಕಾರಣಕ್ಕಾಗಿ ಕರೋನಾ ಸಂಕಟದ ವೈಶಿಷ್ಟ್ಯತೆಗಳು ಏನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ.

ಮೊದಲಿನ ವಿಶೇಷತೆ ಎಂದರೆ ಇದರಲ್ಲಿ ಪ್ರತಿ ವ್ಯಕ್ತಿಯು ಸಂಕಟದ ವಾಹಕ-ಪ್ರಸಾರಕನಾಗಲೂ ಸಾಧ್ಯ ಮತ್ತು ಈ ಸಂಕಟದಿಂದ ತನ್ನನ್ನು ಮತ್ತು ಇತರರನ್ನು ದೂರವಿಡುವುದಕ್ಕಾಗಿ ಸಂರಕ್ಷಿತನಾಗಲೂ ಸಾಧ್ಯ. ಎಂದರೆ ತಾನು ಇತರರಿಗೆ ಮತ್ತು ಸ್ವಂತಕ್ಕೆ ಮಾರಕನಾಗಬಾರದು, ತಾರಕನಾಗಬೇಕು ಎಂಬ ಮೂಲಭೂತ ಸತ್ಯ ಕರೋನಾ ವೈರಸ್ ಸಂಕಟದಲ್ಲಿ ಅಡಗಿದೆ. ಇದರರ್ಥ, ವ್ಯಕ್ತಿ ಕೇಂದ್ರಿತ ಆಚರಣೆಯೇ ಈ ಸಮಸ್ಯೆಗೆ ಉಪಾಯ. ಇದರಲ್ಲಿ ವ್ಯವಸ್ಥೆಯ ದೋಷವಿಲ್ಲ. ಹಾಗೂ ಸಮಸ್ಯೆಯ ನಿವಾರಣೆಯಲ್ಲಿ ವ್ಯವಸ್ಥೆಯ ಜವಾಬ್ದಾರಿ ಇಲ್ಲ ಎಂದಾಗುವುದಿಲ್ಲ. ಜಗತ್ತಿನ ಬೇರೆ ಬೇರೆ ದೇಶಗಳು ತಮ್ಮ ಆರ್ಥಿಕ ಬೆಳವಣಿಗೆಗಾಗಿ ರೂಪಿಸಿಕೊಂಡ ವ್ಯವಸ್ಥೆಗಳ ದೋಷಪೂರ್ಣ ವ್ಯವಸ್ಥೆಗಳಿಂದಾಗಿ ಪರಿಸರದ ಮೇಲೆ ಆದ ಅನೇಕಾನೇಕ ದುಷ್ಪರಿಣಾಮಗಳು, ಮನುಷ್ಯ ಮತ್ತು ಮನುಷ್ಯೇತರ ಜೀವರೂಪಗಳ ಮಧ್ಯೆ ಸಾವಿರಾರು ವರ್ಷಗಳಿಂದ ಮುಂದುವರೆದು ಬಂದಿದ್ದ ಸಂತುಲನದಲ್ಲಿ ಆದೇ **ವಿಕೃತಿ**ಗಳು ಹಾಗೂ ಈ ಆರ್ಥಿಕ ವೃದ್ಧಿಯ ವ್ಯವಸ್ಥೆಗಳಿಂದ ನಿರ್ಮಾಣಗೊಂಡ ಸಾಮಾಜಿಕ ವಿಶಮತೆಗಳು-ಇವೆಲ್ಲವುಗಳನ್ನು ನೋಡಿದಾಗ ಮನುಷ್ಯ ವ್ಯವಸ್ಥೆಗಳ ಜವಾಬ್ದಾರಿ ನಿಶ್ಚಿತವಾಗಿಯೂ ಸ್ಪಷ್ಟದ್ದಾಗುತ್ತದೆ.

ಅಂದರೆ, ಒಂದು ಕಡೆ ವ್ಯವಸ್ಥೆ ಪರಿವರ್ತನೆಯ ಅತ್ಯಾವಶ್ಯಕತೆ ಹಾಗೂ ಇನ್ನೊಂದು ಕಡೆ ವ್ಯಕ್ತಿಯ ಸ್ವಯಂ ಜೀವನದಲ್ಲಿ ಆಗಬೇಕಾದ ಪರಿವರ್ತನೆಯ ಅತ್ಯಾವಶ್ಯಕತೆ- ಹೀಗೆ ಎರಡು ಪರಸ್ಪರ ಪೂರಕ ಸತ್ಯಗಳು ಕರೋನಾ ಸಂಕಟದಿಂದಾಗಿ ಜಗತ್ತಿನ ಎದುರು ದೃಷ್ಟಿಗೋಚರವಾಗಿದೆ. ಇದರಿಂದಾಗಿ ಸಮಾಜದ ಸಿದ್ಧಾಂತದ ಒಂದು ದೊಡ್ಡ ಸತ್ಯ ಜಗತ್ತಿಗೆ ಅರಿವಾಗುತ್ತಲಿದೆ : Each for all, all for each.

ಕರೋನಾ ಸಂಕಟದ ಇನ್ನೊಂದು ಮಹತ್ವದ ವೈಶಿಷ್ಟ್ಯವೆಂದರೆ, ಇದರ ಮೂಲ ಸ್ವರೂಪ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಸಂಕಟವಾಗಿದ್ದರೂ(ಪಬ್ಲಿಕ್ ಹೆಲ್ತ್ ಕ್ರೈಸಿಸ್) ಕೂಡ ಇದರ ಪ್ರಸಾರ ನಿಲ್ಲಿಸಲಿಕ್ಕಾಗಿ ಕೈಕೊಳ್ಳಬೇಕಾದ ದಿಗ್ಬಂಧನ(ಲಾಕ್‌ಡೌನ್) ದೇಶಗಳೊಳಗಿನ ಹಾಗೂ ದೇಶ ದೇಶಗಳ ನಡುವೆ ಸಂಚಾರ ಸ್ಥಗಿತತೆ ಇತ್ಯಾದಿ ಉಪಾಯಗಳಿಂದಾಗಿಯೇ ಒಂದು ಮಹಾಭಯಂಕರ ಆರ್ಥಿಕ ಸಂಕಟ ಹುಟ್ಟಿಕೊಂಡಿದೆ. ಈ ಆರ್ಥಿಕ ಸಂಕಟ ಕೂಡ ಜಾಗತಿಕ ಸ್ವರೂಪದ್ದಾಗಿದೆ. ಈ ಆರ್ಥಿಕ ಸಂಕಟದ ಪ್ರಬಲತೆ, ತೀವ್ರತೆ ಎಷ್ಟೆಂದರೆ ಅಮೆರಿಕಾ ಮತ್ತು ಪಶ್ಚಿಮದ ಅತೀ ಶ್ರೀಮಂತ ದೇಶಗಳು ಕೂಡ ತತ್ತರಿಸಿ ಹೋಗಿವೆ. ಇಷ್ಟೇ ಅಲ್ಲ, ಈ ದೇಶಗಳ ಆರ್ಥಿಕ ವ್ಯವಸ್ಥೆಗಳು ಅನುಭವಿಸುತ್ತಿರುವ ಹಾಗೂ ಇನ್ನು ಮುಂದೆ ಅನುಭವಿಸಲಿರುವ ಪೆಟ್ಟುಗಳನ್ನು ನೋಡಿದರೆ, ಕರೋನಾ ಸಂಕಟದಿಂದಾಗಿ ಇಡೀ ಜಗತ್ತಿನ ಆರ್ಥಿಕ ರಚನೆ(ಗ್ಲೋಬಲ್ ಎಕನಾಮಿಕ್ ಆರ್ಡರ್)ಯಲ್ಲಿ ಅಮೂಲಾಗ್ರ ಬದಲಾವಣೆಯ ಸೂಚನೆಗಳು ಕಾಣತೊಡಗಿವೆ. ಇನ್ನು ಮೇಲೆ ಈ ಮಹಾ ಬದಲಾವಣೆಗೆ ಅತೀ ಹೆಚ್ಚು ವೇಗ ಬರಲಿದೆ. ಕೇವಲ ಎರಡೇ ಎರಡು ತಿಂಗಳುಗಳಲ್ಲಿ ಸುಮಾರು ಮೂರುವರೆ ಕೋಟಿ ಕಾರ್ಮಿಕರು ಅಮೇರಿಕದಂಥ ದೇಶದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಇದರ ಅರ್ಥವೆಂದರೆ, ಕರೋನಾ ಸಂಕಟದ ನಂತರ-ಹಾಗೂ ಈ ಸಂಕಟದ ಕಾರಣದಿಂದಾಗಿಯೇ- ಒಂದು ಹೊಸ ವಿಶ್ವ ವ್ಯವಸ್ಥೆ ಹುಟ್ಟಲಿದೆ.

ಈ ದಿಗ್ಬಂಧನದಿಂದಾಗಿ ಭಾರತವನ್ನೊಳಗೊಂಡು ಜಗತ್ತಿನ ಸುಮಾರು ಎಲ್ಲ ದೇಶಗಳಲ್ಲಿಯೂ ಆರ್ಥಿಕ, ಸಾಮಾಜಿಕ ವಿಷಮತೆ ಕಣ್ಣಿಗೆ ಕಟ್ಟುವಂತೆ ಕಾಣತೊಡಗಿದೆ. ಈ ವಿಷಮತೆ ಮೊದಲೇ ಇತ್ತು. ಆದರೆ ಕರೋನಾ ವೈರಸ್ ಸಂಕಟ ಈ ವಿಷಮತೆಗೆ ಕನ್ನಡಿಯಾಗಿ ಕೆಲಸ ಮಾಡುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದಲ್ಲಿಯ ಬಡವರ ಪರಿಸ್ಥಿತಿ, ವಿಶೇಷವಾಗಿ ಸಂಚಾರಿ ಕಾರ್ಮಿಕರ(ಮೈಗ್ರೆಂಟ್ ವರ್ಕರ್ಸ್) ಬವಣೆ, ಇಂದು ಇಡೀ ಜಗತ್ತು ನೋಡುತ್ತಿದೆ. ಇದು ಸಾಮಾಜಿಕ ವಿಷಮತೆಯೂ, ಭೌಗೋಳಿಕ ವಿಷಮತೆಯೂ ಹೌದು. ಏಕೆಂದರೆ ನಾಲ್ಕೂವರೆ ಕೋಟಿ ಸಂಚಾರಿ ಕಾರ್ಮಿಕರಲ್ಲಿ ಬಹುಸಂಖ್ಯರು, ಅಲ್ಪವಿಕಸಿತ ರಾಜ್ಯಗಳಾದ ಪೂರ್ವ ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶಗಳಿಂದ ಬಂದವರು. ಯಾವ ಪೂರ್ವತಯಾರಿಯೂ ಇಲ್ಲದೇ, ಯಾವ ಮುನ್ಸೂಚನೆಯೂ ಇಲ್ಲದೇ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ದಿಗ್ಬಂಧನ ಘೋಷಿಸಿದ ನಂತರ ಈ ಸಂಚಾರಿ ಕಾರ್ಮಿಕರಿಗೆ ಉಂಟಾದ ಮಾನಸಿಕ ಪೀಡೆ, ಅವರು ಕಾಲ್ನಡಿಗೆಯಿಂದಲೇ ನೂರಾರು ಕಿ.ಮೀ. ಪ್ರಯಾಣ ಮಾಡಿ ಹೋಗುವ ದೃಶ್ಯ ಭಾರತ ದೇಶದ ಅಸಮತೋಲ ವಿಕಾಸದ ಕಹಿಸತ್ಯವನ್ನು ಭಾರತೀಯರಿಗೂ, ಜಗತ್ತಿನ ಜನರಿಗೂ ಹೇಳುತ್ತಿದೆ.. ಇದರಿಂದಾಗಿ ಮೋದಿ ಮತ್ತು ಅವರ ಸಮರ್ಥಕರು, 'ಏಕ ಭಾರತ ಶ್ರೇಷ್ಠ ಭಾರತ' ಎಂಬ ಸುಂದರವಾದ ಘೋಷವಾಕ್ಯಗಳನ್ನು ಎಷ್ಟೇ ಪ್ರಚಾರಿಸಿದರೂ ಕೂಡ ಒಂದು ಭಾರತವೆಂಬುದು ಇಲ್ಲವೇ ಇಲ್ಲ. ಇದರಲ್ಲಿ ಎರಡು ಭಾರತಗಳಿವೆ-ಒಂದು ಶ್ರೀಮಂತರದು, ಇನ್ನೊಂದು ಬಡವರದು-ಈ ವಾಸ್ತವಿಕತೆಯನ್ನು ಇಡೀ ಜಗತ್ತೇ ನೋಡಿದೆ.

ಕೊನೆಯದಾಗಿ, ಕರೋನಾ ಸಂಕಟದಿಂದಾಗಿ ಜಾಗತೀಕರಣ(ಗ್ಲೋಬಲೈಸೇಷನ್) ಮತ್ತು ಜಾಗತಿಕ ಶಾಸನ(ಗ್ಲೋಬಲ್ ಗೌರ್ನೆನ್ಸ್) ಇವುಗಳ ಎದುರಿಗೆ ಹೊಸ ಸಮಸ್ಯೆಗಳನ್ನು ಉಂಟುಮಾಡಿದೆ. ಒಂದು ಕಡೆ ನೋಡಿದರೆ, ಕರೋನಾ ಸಂಕಟ ಜಾಗತಿಕ ಸ್ವರೂಪದ ಸಂಕಟ. ಆದ್ದರಿಂದ ಇದಕ್ಕೆ ಪರಿಣಾಮಕಾರಿ ಉಪಾಯ ಕೂಡ ಜಾಗತಿಕ ಸಹಕಾರ, ಐಕ್ಯತೆಗಳಲ್ಲಿಯೇ ಅಡಗಿದೆ ಎಂಬುದು ಸ್ಪಷ್ಟ. ಆದರೆ ಇನ್ನೊಂದು ಕಡೆ ನೋಡಿದರೆ ಜಾಗತಿಕ ಮಟ್ಟದಲ್ಲಿ ಐಕ್ಯತೆ, ಸಹಕಾರಗಳ ಅತೀವ ಕೊರತೆಯನ್ನು ನಾವು ಕಾಣುತ್ತಿದ್ದೇವೆ, ಜಗತ್ತಿನ ಎರಡು ಪ್ರಬಲ ದೇಶಗಳಾದ ಅಮೇರಿಕಾ ಮತ್ತು ಚೀನಗಳ ಮಧ್ಯೆ ಜಗಳ ಬಿಸಿಯಾಗುತ್ತಾ ನಡೆದಿದೆ. ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾಗತಿಕ ಆರೋಗ್ಯ ಸಂಸ್ಥೆ(ವರ್ಲ್ಡ್ ಹೆಲ್ತ್

ಆರ್ಗನೈಸೇಶನ್) ಮೇಲೆ ಸತತವಾಗಿ ದಾಳಿ ನಡೆಸಿದ್ದಾರೆ. ಇಂದಿನ ಸಂಕಟ ಸಮಯದಲ್ಲಿ ಸಂಯುಕ್ತ ರಾಷ್ಟ್ರ ಸಂಘ(UNO) ಕೂಡ ಪ್ರಭಾವಹೀನವಾಗಿಬಿಟ್ಟಿದೆ. ಜಾಗತಿಕ ಸರಬರಾಜು ಸರಪಳಿಗಳು(ಗ್ಲೋಬಲ್ ಸಪ್ಲೈ ಚೈನ್‌ಗಳು) ಮುರಿದುಹೋಗುತ್ತಿರುವುದರಿಂದ ಅನೇಕ ದೇಶಗಳು "ನಮ್ಮ ಬಂಡೆ ನಾವೇ ಹೊಡೆಯೋಣ" ಎಂಬ ಸ್ವಕೇಂದ್ರಿತ ವಿಚಾರಕ್ಕೆ ಬಲಿಯಾಗುತ್ತಿವೆ. ಇದಕ್ಕೆ 'ಆತ್ಮ ನಿರ್ಭರತೆ'(ಸೆಲ್ಫ್ ರಿಲಯನ್ಸ್) ಧೋರಣೆಯ ಹೆಸರು ಕೊಡಲಾಗುತ್ತಿದೆ.

ಆತ್ಮ ನಿರ್ಭರತೆ ಇದೊಂದು ಅವಶ್ಯಕ ಹಾಗೂ ಅತ್ಯಂತ ಅರ್ಥಪೂರ್ಣವಾದ ಸಂಕಲ್ಪವೇ. ಆದರೆ ಇಪ್ಪತ್ತೊಂದನೇ ಶತಮಾನದಲ್ಲಿಯ ಡಿಜಿಟಲ್ ಕನೆಕ್ಟಿವಿಟಿಯಿಂದ ಒಂದಾಗಿ ಮತ್ತು ಚಿಕ್ಕದಾಗಿಬಿಟ್ಟಿರುವ ಇಂದಿನ ಜಗತ್ತಿನಲ್ಲಿ ಯಾವ ರಾಷ್ಟ್ರವೂ ತನ್ನೆಲ್ಲ ಮಹತ್ವದ ಅಗತ್ಯಗಳನ್ನು ತನ್ನದೇ ಆದ ಸಾಧನ ಮತ್ತು ಪ್ರಯತ್ನಗಳಿಂದ ಈಡೇರಿಸಿಕೊಳ್ಳಲು ಸಾಧ್ಯವಿಲ್ಲ. ಇದರ ಅತ್ಯುತ್ತಮ ಉದಾಹರಣೆ ಕರೋನಾ ವೈರಸ್ ನಿಲ್ಲಿಸಲು ಪರಿಣಾಮಕಾರಿ ವ್ಯಾಕ್ಸಿನ್ ನಿರ್ಮಾಣದ ಕಾರ್ಯ. ಜಾಗತಿಕ ಮಟ್ಟದ ಸಹಕಾರವಿಲ್ಲದೇ ವ್ಯಾಕ್ಸಿನ್ ನಿರ್ಮಾಣವೂ ಅಸಾಧ್ಯ ಹಾಗೂ ಅದು ತಯಾರಾದ ನಂತರ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೆ ಮುಕ್ತಟಿಯಾಗಿ ವಿತರಿಸುವ ಕಾರ್ಯವೂ ಅಸಾಧ್ಯ. ಇದರರ್ಥ ಮುಂಬರುವ ವರ್ಷಗಳಲ್ಲಿ ಆತ್ಮನಿರ್ಭರತೆಯ ಸಮರ್ಥ ಧೋರಣೆಯೂ ಅಗತ್ಯ ಹಾಗೂ ಅದರ ಜೊತೆಗೆಯೇ ರಾಷ್ಟ್ರ-ರಾಷ್ಟ್ರಗಳ ನಡುವೆ ಸಹಕಾರವೂ ಅಗತ್ಯ. ಅಂದರೆ ಗ್ಲೋಬಲೈಸೇಶನ್‌ಅನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಅದನ್ನು ಸುಧಾರಿಸಿ ಅದರಲ್ಲಿಯ ವಿಷಮತೆ-ಅನ್ಯಾಯಗಳನ್ನು ದೂರಗೊಳಿಸಿ ಮಾನವಕಲ್ಯಾಣಕ್ಕೆ ಪೋಷಕವಾದ ಹೊಸ ಗ್ಲೋಬಲೈಸೇಶನ್‌ಗಾಗಿ ನಾವು ಹೋರಾಡಬೇಕಾಗಿದೆ. ಈ ಹೊಸ ಗ್ಲೋಬಲೈಸೇಶನ್‌ಅನ್ನು ಸರಿಯಾಗಿ ಮುಂದೆ ಸಾಗಿಸಲು ಒಂದು ಹೊಸ ಪ್ರಜಾಪ್ರಭುತ್ವವಾದಿ ಜಾಗತಿಕ ಶಾಸನ ರಚನೆ(ಡೆಮಾಕ್ರೆಟಿಕ್ ಗ್ಲೋಬಲ್ ಗವರ್ನೆನ್ಸ್ ಸ್ಟ್ರಕ್ಚರ್) ಬಗ್ಗೆ ಪ್ರಯತ್ನಶೀಲವಾಗಬೇಕಾಗಿದೆ.

**ಕಲಿಯಬೇಕಾದ ಅತೀ ಮಹತ್ವದ ಪಾಠ : ಸಮಾಜವಾದದ ಪುನರ್ಜನ್ಮ**

ಕರೋನ ಸಂಕಟದಿಂದ ಉದ್ಭವಿಸಿದ ಈ ಎಲ್ಲ ವಿಶೇಷವಾದ ಸಮಸ್ಯೆಗಳನ್ನು ಹಾಗೂ ಪರಿಸ್ಥಿತಿಗಳನ್ನು ನೋಡಿದಾಗ ಭಾರತ ಮತ್ತು ಇತರೆ ಜಗತ್ತು ಯಾವ ಪಾಠಗಳನ್ನು ಕಲಿಯಬೇಕು ಎಂಬುದು ತಿಳಿಯುತ್ತದೆ.

ಮೊದಲನೆಯದಾಗಿ ಗಂಭೀರವಾದ ಆರ್ಥಿಕ ಸಾಮಾಜಿಕ ವಿಷಮತೆ-ಅನ್ಯಾಯಗಳನ್ನು ಹೀಗೆಯೇ ಮುಂದುವರಿಸಿದರೆ ಕರೋನಾದಂತಹ ಯಾವ ಸಂಕಟವನ್ನೂ ನಾವು ಸಮರ್ಥವಾಗಿ ಎದುರಿಸಲು ಸಾಧ್ಯವಿಲ್ಲ ಅಂದರೆ ಸಮಾಜವಾದ (ಸೋಶಿಯಲಿಸಂ)ವೇ ಭಾರತಕ್ಕೇ-ಜಗತ್ತಿಗೆ ತಾರಕ. ಬಂಡವಾಳಶಾಹಿ(ಕ್ಯಾಪಿಟಲಿಸಂ) ಬಹುಸಂಖ್ಯ ಜನರ ಸಮಸ್ಯೆಗಳಿಗೆ ಉತ್ತರವಲ್ಲ-ಅದೇ ಸಮಸ್ಯೆಗಳಿಗೆ ಮೂಲ-ಎಂಬ ಮಾತು ನಿರ್ವಿವಾದ ರೀತಿಯಲ್ಲಿ ಸ್ಪಷ್ಟವಾಗತೊಡಗಿದೆ. ಆದ್ದರಿಂದ ಒಂದು ಹೊಸ ತರಹದಲ್ಲಿ, ಹಿಂದೆ ಆದ ತಪ್ಪು-ದೋಷಗಳನ್ನು ಸರಿಮಾಡಿ, ಸಮಾಜವಾದವನ್ನು ರಾಷ್ಟ್ರೀಯ-ಜಾಗತಿಕ ಪರ್ಯಾಯ ಎಂದು ಮುಂದೆ ತರಬೇಕಾಗಿದೆ. ಈ ಪ್ರಯತ್ನಗಳಲ್ಲಿ ಮಹಾತ್ಮ ಗಾಂಧಿಯವರ ಸಮಾಜವಾದದ ಕುರಿತು ವಿಚಾರಗಳು ಅತ್ಯಂತ ಉಪಯುಕ್ತ.

ಎರಡು: ಕರೋನಾ ನಮ್ಮ ಶತ್ರುವಲ್ಲ. ಅದೇ ರೀತಿ ಮಹಾರೋಗದ ವಿರುದ್ಧದ ಹೋರಾಟದಲ್ಲಿ ದೇಶದ ಒಳಗಲಿ, ದೇಶದ ಹೊರಗಾಗಲಿ ನಮಗೆ ಯಾವ ಶತ್ರುವೂ ಇಲ್ಲ. ನಮ್ಮ ದೇಶದಲ್ಲಿಯ ಕಮ್ಯೂನಲ್ ಶಕ್ತಿಗಳು ತಬ್ಲಿಘಿ ಜಮಾತ್‌ನ ಹೆಸರಿನಲ್ಲಿ ಮುಸ್ಲಿಂ ವಿರೋಧಿ ವಾತಾವರಣ ನಿರ್ಮಿಸುವ ಹೊಲಸು ಕೆಲಸ ನಡೆಸಿದವು. ಅದು ಅತ್ಯಂತ ಖಂಡನೀಯ. ಈ ರಾಷ್ಟ್ರವಿರೋಧಿ ಮಾನವತಾ ವಿರೋಧಿ ಶಕ್ತಿಗಳ ವಿರುದ್ಧ ನಮ್ಮ ಸಂಘರ್ಷ ಇನ್ನೂ ತೀವ್ರವಾಗಬೇಕು.

ಮೂರು: ಮುಂಬರುವ ಸಮಯದಲ್ಲಿ ಸಂಕುಚಿತ ರಾಷ್ಟ್ರವಾದ ಅಮೇರಿಕ, ಚೀನಾ ಹಾಗೂ ಭಾರತದಂಥ ದೇಶಗಳಲ್ಲಿ ಕೂಡ ಬೆಳೆಯುವ ಸಾಧ್ಯತೆ ಇದೆ. ಇದು ವಿಶ್ವಶಾಂತಿಗೆ, ವಿಶ್ವಕಲ್ಯಾಣಕ್ಕೆ ಮಹಾಘಾತಕ. ಇಪ್ಪತ್ತೊಂದನೇ ಶತಮಾನದ ಅವಶ್ಯಕತೆ-ಬೇಡಿಕೆ ಎಂದರೆ, ವಿಶ್ವ ಬಾಂಧವತೆ ಮತ್ತು ಅತ್ಯಧಿಕ ಅಂತರರಾಷ್ಟ್ರೀಯ ಸಹಕಾರ.

ನಾಲ್ಕು: ಕರೋನಾ ಸಂಕಟದಿಂದಾಗಿ ಸುಮಾರು ಎಲ್ಲ ರಾಷ್ಟ್ರಗಳಲ್ಲಿ-ಭಾರತದಲ್ಲಂತೂ ನಿಶ್ಚಿತವಾಗಿ-ಸಾರ್ವಜನಿಕ ಆರೋಗ್ಯ ವ್ಯವಸ್ಥೆ (ಪಬ್ಲಿಕ್ ಹೆಲ್ತ್ ಸಿಸ್ಟಮ್)ಯನ್ನು ಸರಿಗೊಳಿಸುವ ಅವಶ್ಯಕತೆ ತುರ್ತಾಗಿ ಮುಂದೆ ಬಂದಿದೆ. ನಿಜವಾಗಿ ನೋಡಿದರೆ ಕರೋನಾದಿಂದ ಉಂಟಾದ ಮೃತ್ಯುವಿನ ಪ್ರಮಾಣ ಮಲೇರಿಯಾ, ಡಯೇರಿಯಾ, ಕುಪೋಷಣೆ, ದೂಷಿತ ನೀರು ಹಾಗೂ ಪರಿಸರ ಮಾಲಿನ್ಯ ಇವುಗಳಿಂದಾಗಿ ಉಂಟಾಗುವ ಸಾವಿನ ಪ್ರಮಾಣಕ್ಕಿಂತ ಬಹಳ ಕಡಿಮೆಯಾಗಿದೆ. ಆದರೆ ವ್ಯತ್ಯಾಸವೆಂದರೆ ಈ ರೋಗಗಳು ಬಡವರ ರೋಗಗಳು. ಕರೋನಾ ಶ್ರೀಮಂತರಿಗೂ ಬರಬಹುದಾದ ಸಾಂಕ್ರಾಮಿಕ ರೋಗ. ಆದ್ದರಿಂದ ಸರಕಾರ-ಸಮಾಜಗಳ ಗಮನ ಕರೋನಾದ ಕಡೆ ಕೇಂದ್ರಿತವಾಗಿದೆ. ಆದರೆ ಸಾರ್ವಜನಿಕ ಆರೋಗ್ಯದ ಎದುರು ಇರುವ ಇತರ ಭೀಕರವಾದ ಆಹ್ವಾನಗಳನ್ನು ನಾವು ಉಪೇಕ್ಷಿಸುತ್ತಾ ಹೋದರೆ ಅದೊಂದು ದೊಡ್ಡ ಅನ್ಯಾಯವೂ, ಅಪರಾಧವೂ ಆದೀತು. ಒಟ್ಟಿನಲ್ಲಿ 'ಎಲ್ಲರಿಗೂ ಆರೋಗ್ಯ' (ಹೆಲ್ತ್ ಫಾರ್ ಆಲ್) ಈ ಡಬ್ಲ್ಯೂ ಹೆಚ್ ಓ ೧೯೮೦ರಲ್ಲೇ ಘೋಷಿಸಿದ ಗುರಿಯನ್ನು ಮುಟ್ಟಬೇಕಾದರೆ ಆರೋಗ್ಯ ವ್ಯವಸ್ಥೆಯನ್ನು ಸಮಾಜವಾದದ ತಳಹದಿಯಲ್ಲಿ ಪುನರ್‌ರಚಿಸಬೇಕಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಐದು: ಹಿಂದೆ ಹೇಳಿದ ಹಾಗೆ ಡಿಜಿಟಲ್ ಕನ್ನೆಕ್ಟಿವಿಟಿಯಿಂದಾಗಿ ಇಂದು ಜಗತ್ತು ಒಂದಾಗಿದೆ, ಸಣ್ಣದಾಗಿದೆ, ಹತ್ತಿರ ಬಂದಿದೆ. ಮಾನವನ ಇತಿಹಾಸದಲ್ಲಿ ಇದು ಒಂದು ಹೊಸ ಯುಗ. ಹಿಂದೆಂದಿಗೂ ಈ ವಿಶಾಲವಾದ ಪೃಥ್ವಿಯ ಯಾವುದೇ ಮೂಲೆಯಲ್ಲಿರುವ ಜನ ಬೇರೆಲ್ಲ ಕಡೆಯ ಜನರೊಂದಿಗೆ ತಕ್ಷಣ ಮತ್ತು ಸದೈವ(೨೪*೭) ಸಂವಾದ ಸಾಧಿಸಲು ಸಾಧ್ಯವಾಗಿರಲಿಲ್ಲ. ಇದರಿಂದ ವಿಜ್ಞಾನ ಮತ್ತು ತಂತ್ರಜ್ಞಾನಗಳು ಮೂಲತಃ ಮಾನವತೆಯ ಐಕ್ಯತೆಗಾಗಿ, ಮಾನವತೆಯ ಅಪೇಕ್ಷೆಗಳನ್ನು ಈಡೇರಿಸುವುದಕ್ಕಾಗಿ ಹಾಗೂ ಮನುಷ್ಯಕುಲದ ಮುಂದಿನ ಉತ್ಕ್ರಾಂತಿಯನ್ನು ತೀವ್ರಗೊಳಿಸಲು ಹುಟ್ಟಿಕೊಂಡ ಶಕ್ತಿಗಳು ಎಂಬುದು ಸ್ಪಷ್ಟವಾಗುತ್ತದೆ.


ಕರೋನಾ ಸಂಕಟ ಹುಟ್ಟಿಕೊಂಡ ನಂತರದ ದಿಗ್ಬಂಧನೆಯ ಕಠಿಣ ಪರಿಸ್ಥಿತಿಯಲ್ಲಂತೂ ಡಿಜಿಟಲ್ ಟೆಕ್ನಾಲಜಿಗಳ ಅದ್ಭುತ ಶಕ್ತಿಯನ್ನು ಜನಸಾಮಾನ್ಯರೂ ಕೂಡ ಅನುಭವಿಸುವಂತಾಗಿ, ಸರ್ವರಿಗೂ ಅದು ಗೊತ್ತಾಗಿದೆ. ಈ ಎರಡು-ಮೂರು ತಿಂಗಳುಗಳಲ್ಲಿ 'ವರ್ಕ್ ಫ್ರಂ ಹೋಮ್, ಲರ್ನ್ ಫ್ರಂ ಹೋಮ್, ಅರ್ನ್ ಫ್ರಂ ಹೋಂ' ಇತ್ಯಾದಿ ಡಿಜಿಟಲ್ ಪರಿಹಾರಗಳ ಬಳಕೆಯನ್ನು ಕೋಟ್ಯಂತರ ಜನ ಮಾಡತೊಡಗಿದ್ದಾರೆ. ಈ ಒಲವು ಮುಂಬರುವ ಕಾಲದಲ್ಲಿ ಇನ್ನೂ ಬಲವತ್ತರವಾಗಲಿದೆ, ಸಾರ್ವತ್ರಿಕವಾಗಲಿದೆ.

ಇದರಿಂದಾಗಿ ಭವಿಷ್ಯದಲ್ಲಿಯ ಜಾಗತಿಕ ಮತ್ತು ಭಾರತದ ಆರ್ಥಿಕ ವ್ಯವಸ್ಥೆಗಳಲ್ಲಿ ಅಮೂಲಾಗ್ರ ಬದಲಾವಣೆಗಳು ಆಗಲಿವೆ. ಡಿಜಿಟಲ್ ಟೆಕ್ನಾಲಜಿಗಳ ಶಕ್ತಿ ಜನಸಾಮಾನ್ಯರ ಕೈಗಳಲ್ಲಿ ಬರುತ್ತಲಿವೆ. ಇದರಿಂದಾಗಿ ಮುಂಬರುವ ಆರ್ಥಿಕ ಪ್ರಗತಿಯೂ ಕೂಡ ಹೆಚ್ಚು ಹೆಚ್ಚು ಸರ್ವಸಮಾವೇಶಕ(ಇನ್‌ಕ್ಲೂಸಿವ್) ಆಗುವ ಸಾಧ್ಯತೆಗಳು, ಸಂಭಾವ್ಯತೆಗಳು ಹುಟ್ಟಿಕೊಂಡಿವೆ. ತಾತ್ಪರ್ಯವೆಂದರೆ, ಈ ಮುಂದೆ ಉದಯವಾಗಲಿರುವ ಹೊಸ ಸಮಾಜವಾದಿ ಭಾರತದಲ್ಲಿ ಮತ್ತು ವಿಶ್ವದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಬಹು ಮಹತ್ವದ ಕೊಡುಗೆ ಕೊಡಲಿವೆ.

ಇದರ ಒಂದು, ಎಲ್ಲರಿಗೂ ಅರಿವಾಗಬಹುದಾದ, ಉದಾಹರಣೆ ಎಂದರೆ, ಪ್ರಧಾನಮಂತ್ರಿ ಮೋದಿಯವರು ಇತ್ತೀಚಿಗೆ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಒಂದು ಸಂದರ್ಭದಲ್ಲಿ ಲೋಕಲ್ ಎಕಾನಮಿ(ಸ್ಥಾನೀಯ ಅರ್ಥವ್ಯವಸ್ಥೆ) ಬಗ್ಗೆ ಒತ್ತುಕೊಟ್ಟು ಹೇಳಿದ್ದು. ಅವರು ಮಹಾತ್ಮಾ ಗಾಂಧಿ ಅವರನ್ನು ಉಲ್ಲೇಖಿಸದಿದ್ದರೂ ಕೂಡ 'ಸ್ಥಳೀಯ ಅರ್ಥವ್ಯವಸ್ಥೆ' ಗಾಂಧಿವಾದಿ ಸಮಾಜವಾದದ ಒಂದು ಮಹತ್ವದ ತತ್ವ. ಕೇಂದ್ರೀಕರಣ-ಅಂದರೆ ವಿಕೃತೀಕರಣ- ಇಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಗುಣಧರ್ಮ. ಇದರ ತದ್ವಿರುದ್ಧವಾಗಿ ವಿಕೇಂದ್ರೀಕರಣ ಮತ್ತು ಜನಸಾಮಾನ್ಯರ ಪ್ರಬಲೀಕರಣ(ಎಂಪವರ್‌ಮೆಂಟ್), ಇವು ಗಾಂಧಿವಾದಿ ಸಮಾಜವಾದದ ಗುಣಧರ್ಮ.

ಸಮಾಜದ ಅಲ್ಪಸಂಖ್ಯೆಯ ಸುಖಾರಾಮಗಳಿಗಾಗಿ ಕೆಲಸ ಮಾಡುವ ಕೇಂದ್ರೀಕೃತ ಅರ್ಥವ್ಯವಸ್ಥೆಯನ್ನು ಸರ್ವಜನರ ಸುಖ-ಸಮೃದ್ಧಿ-ಕಲ್ಯಾಣಕ್ಕಾಗಿ ಕೆಲಸ ಮಾಡುವ ವಿಕೇಂದ್ರೀಕೃತ, ಸ್ಥಳೀಯ ಆದರೆ ವಿಶ್ವ ಅರ್ಥವ್ಯವಸ್ಥೆಯ ಅಭೇದ್ಯ ಅಂಗವಾಗಿ ಪರಸ್ಪರ ಪೋಷಕವಾಗಿ ವಿಕಸಿತಗೊಳ್ಳುವ ಹೊಸ ಅರ್ಥವ್ಯವಸ್ಥೆಯಾಗಿ ಪರಿವರ್ತಿಸುವ ಮಹತ್ಕಾರ್ಯದಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಕ್ರಾಂತಿಕಾರಿ ಪಾತ್ರ ವಹಿಸಲಿವೆ. ಆದ್ದರಿಂದ ಭಾರತದಲ್ಲಿಯ ಮತ್ತು ಜಗತ್ತಿನಲ್ಲಿಯ ಎಲ್ಲ ಪರಿವರ್ತನಾವಾದಿ ಶಕ್ತಿಗಳು ಟೆಕ್ನಾಲಜಿ ಮತ್ತು ಮಾನವೀಯ ಮೌಲ್ಯಗಳನ್ನು ಹೇಗೆ ಮೇಳವಿಸಬಹುದು ಎಂಬ ದಿಕ್ಕಿನಲ್ಲಿ ಚಿಂತನೆ ಮಾಡಬೇಕಾಗಿದೆ, ಕೃತಿಶೀಲವಾಗಬೇಕಾಗಿದೆ.

ಕೊನೆಯದಾಗಿ, ಕರೋನಾ ಸಂಕಟದಿಂದ ಉತ್ಪನ್ನಗೊಂಡ ಸಮಾಜ ಪರಿವರ್ತನೆಯ ಕಾರ್ಯಕ್ಕೆ ಬಲನೀಡುವ, ಒಂದು ಹೊಸ ಸನ್ನಿವೇಶದ ಬಗ್ಗೆ ಒಂದು ಮಾತು ಹೇಳಲೇಬೇಕು. ದೇಶದಲ್ಲಿ, ಜಗತ್ತಿನಲ್ಲಿ ದಿಗ್ಬಂಧನದಿಂದಾಗಿ ಅನೇಕಾನೇಕ ಅಡಚಣೆಗಳು ನಿರ್ಮಾಣಗೊಂಡಿವೆ. ಅಸಂಖ್ಯ ಜನ ಕಷ್ಟ ಸಹಿಸಬೇಕಾಗಿದೆ. ಹೀಗಿದ್ದರೂ ಕೂಡ ಒಂದು ಸಂತೋಷದ ಸಂಗತಿ ಎಂದರೆ ಕೋಟ್ಯಾಂತರ ಜನ ಏಕಾಂತದ ಅನುಭವ ಪಡೆದುಕೊಂಡು ಜಗತ್ತಿನ ಬಗ್ಗೆ, ಭಾರತದ ಬಗ್ಗೆ, ತಮ್ಮ ಸ್ವಂತದ ಬಗ್ಗೆ ಆತ್ಮಚಿಂತನೆ ನಡೆಸಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆದಿರುವ ಆತ್ಮಾವಲೋಕನದಲ್ಲಿ ಅತಿದೊಡ್ಡ ಸೃಜನಾತ್ಮಕ ಶಕ್ತಿ ಅಡಗಿದೆ. ಹೊಸ ಚಿಂತನೆಯಿಂದಲೇ ಅಲ್ಲವೇ ಹೊಸ ಜಗತ್ತಿನ, ಹೊಸಮನುಷ್ಯನ ನಿರ್ಮಾಣ?



**(ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಆಪ್ತ ಸಲಹಾಕಾರರಾಗಿದ್ದ ಸುಧೀಂದ್ರ ಕುಲಕರ್ಣಿಯವರು ಈಗ ಸ್ವತಂತ್ರ ಚಿಂತಕರೂ, ಲೇಖಕರೂ ಮತ್ತು ರಾಜಕೀಯ ವಿಶ್ಲೇಷಕರೂ ಆಗಿದ್ದಾರೆ)**

ಪ್ರಚಲಿತ-೨

# ನ್ಯಾಯಾಲಯಗಳು ಪ್ರಭುತ್ವದ ಪರವಾದರೆ ನ್ಯಾಯದಾನ ಇಲ್ಲವೆಂದೇ ಸರಿ

-ಅಪೂರ್ವಾನಂದ



**ಇತ್ತೀಚಿನ ದಿನಗಳಲ್ಲಿ ನಮ್ಮ ಸರ್ವೋಚ್ಚ ನ್ಯಾಯಾಲಯ ಹಲವು ತುರ್ತು ವಿಷಯಗಳಿಗೆ ಸಂಬಂಧಿಸಿದಂತೆ ನೀಡಿದ ತೀರ್ಪುಗಳು ಮತ್ತು ತಳೆದ ನಿಲುವುಗಳು ಮತ್ತು ಅವುಗಳ ಹಿಂದಿನ ಚಿಂತನಾ ವಿಧಾನ ನ್ಯಾಯಿಕ ವಲಯಗಳಲ್ಲಷ್ಟೇ ಅಲ್ಲ, ಸಾರ್ವಜನಿಕ ವಲಯಗಳಲ್ಲೂ ಚರ್ಚೆಗೆ ಗ್ರಾಸವಾಗಿವೆ. ಕಾರ್ಯಾಂಗ ಮತ್ತು ಶಾಸಕಾಂಗ ಹಾಗೂ ನ್ಯಾಯಾಂಗಗಳ ಪರಸ್ಪರ ಸಂಬಂಧ ಕುರಿತಂತೆ ಬಗ್ಗೆ ನಮ್ಮ ಸಂವಿಧಾನ ಬಹು ಎಚ್ಚರಿಕೆಯಿಂದ ರೂಪಿಸಿದ್ದ ನೀತಿ ನಿರೂಪಣೆಗೆ ಭಂಗ ಉಂಟಾಗುತ್ತಿದೆಯೇನೋ ಎಂಬ ಆತಂಕ ಕೆಲವು ವಲಯಗಳಲ್ಲಿ ವ್ಯಕ್ತವಾಗುತ್ತಿದೆ. ಇತ್ತೀಚಿನ ಹಲವು ಪ್ರಕರಣಗಳ ಮಧ್ಯೆ ಕರೋನಾ ಸಂಬಂಧವಾಗಿ ಘೋಷಿಸಲಾದ ಲಾಕ್‌ಡೌನ್‌ನಿಂದಾಗಿ ಉದ್ಭವವಾಗಿರುವ ವಲಸೆ ಕಾರ್ಮಿಕರ ಸಂಕಷ್ಟಗಳ ಪರಿಹಾರಕ್ಕಾಗಿ ಸರ್ವೋನ್ನತ ನ್ಯಾಯಾಲಯದಲ್ಲಿ ಮಾಡಲಾದ ಮನವಿಗೆ ಅಲ್ಲಿ ಸಿಕ್ಕ ಪ್ರತಿಸ್ಪಂದನ ಈ ಆತಂಕದ ಬಗ್ಗೆ ಆಳವಾಗಿ ಯೋಚಿಸುವಂತೆ ಮಾಡಿದೆ, ಈ ಬಗ್ಗೆ ಈ ಲೇಖನ-ಸಂ**

*ತಿಳುವಳಿಕೆಯಿಲ್ಲದೆ ನಾದಿದ, ಪ್ರೀತಿ ಕಾಣದೆ ಸುಟ್ಟ*
*ರುಚಿಯಿಲ್ಲದ ನ್ಯಾಯ ಕೇವಲ ಹೆಸರಿಗಷ್ಟೇ ರೊಟ್ಟಿ.*
*ಯಾರಿಗೆ ಬೇಕು ಈ ಹಳಸಿದ ನ್ಯಾಯ, ಎಲ್ಲ ಮುಗಿದ ಮೇಲೆ!*

ಹರ್ಷ್ ಮಂದರ್ ಮತ್ತು ಅಂಜಲಿ ಭಾರದ್ವಾಜ್ ಅವರು ವಲಸೆ ಕಾರ್ಮಿಕರ ಬಗ್ಗೆ ಸಲ್ಲಿಸಿದ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯವು ತಿರಸ್ಕರಿಸಿದ ಸುದ್ದಿಯನ್ನು ಓದಿದಾಗ. ಬೆರ್ಟೋಲ್ಟ್ ಬ್ರೆಕ್ಟ್‌ನ ಈ ಮೇಲಿನ ಸಾಲುಗಳು ನನಗೆ ನೆನಪಿಗೆ ಬಂದವು.

ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಣೆಯಾದ ಬಳಿಕ ಕೂಲಿಕಾರ್ಮಿಕರಿಗೆ ಉಂಟಾದ ಸಂಕಷ್ಟಗಳಿಗೆ, ಸರ್ಕಾರವು ಆರ್ಥಿಕ ಸಹಾಯ ಮಾಡಬೇಕೆಂದು ಸರ್ಕಾರಕ್ಕೆ ಸೂಚಿಸಲು ಹರ್ಷ್ ಮಂದರ್ ಮತ್ತು ಅಂಜಲಿ ಭಾರದ್ವಾಜ್ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ, ಸರ್ವೋಚ್ಚ ನ್ಯಾಯಾಲಯ ಈ ಮನವಿಯನ್ನು ಮಾನ್ಯ ಮಾಡಲು ಸಿದ್ಧವಿರಲಿಲ್ಲ. ಬದಲಾಗಿ, ನ್ಯಾಯಾಲಯವು, ಕೇಂದ್ರ ಸರ್ಕಾರವನ್ನು, ಕೇವಲ 'ಸದ್ಯದ ಪರಿಸ್ಥಿತಿಯ ವರದಿ'ಯನ್ನು ಸಲ್ಲಿಸಲು ನಿರ್ದೇಶಿಸುವಲ್ಲಿಗೆ ತೃಪ್ತಿಪಟ್ಟುಕೊಂಡಿತು.

ಹರ್ಷ್ ಮಂದರ್ ಮತ್ತು ಅಂಜಲಿ ಭಾರದ್ವಾಜ್ ಅವರು, ಕೆಲಸ ಕಳೆದುಕೊಂಡ ವಲಸೆ ಕಾರ್ಮಿಕರಿಗೆ ಸಂಬಳವನ್ನು ಕೊಡುವ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಬೇಡಿಕೆಯನ್ನಿಟ್ಟಿದ್ದರು. ಇಂಡಿಯಾ ಲೀಗಲ್ ಲೈವ್‌ನ ಪ್ರಕಾರ, "ವಲಸೆ ಕಾರ್ಮಿಕರಿಗೆ ಸರ್ಕಾರ ಆಹಾರವನ್ನು ಪೂರೈಕೆ ಮಾಡುತ್ತಿದ್ದರೆ, ಅವರಿಗೆ ಆಹಾರಕ್ಕಾಗಿ ಹಣ ಏಕೆ ಬೇಕು?" ಎಂಬುದಾಗಿ ಮುಖ್ಯ ನ್ಯಾಯಾಧೀಶರು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರನ್ನು ಕೇಳಿದರು. ಅದಕ್ಕವರು "ಆಶ್ರಯತಾಣಗಳಲ್ಲಿ ಅವರಿಗೆ ಕೇವಲ ಆಹಾರವನ್ನಷ್ಟೇ ನೀಡಲಾಗುತ್ತಿದೆ, ಅದೊಂದೇ ಅವರಿಗೆ ಸಾಕಾಗುವುದಿಲ್ಲ; ಊರಿನಲ್ಲಿರುವ ತಮ್ಮ ಕುಟುಂಬದವರಿಗೆ ಕಳುಹಿಸಲು ಅವರಿಗೆ ಹಣ ಬೇಕು. ನಾವು ಅವರಿಗೆ ಹಣ ನೀಡಬೇಕು." ಎಂದುತ್ತರಿಸಿದರು.

ಮುಖ್ಯ ನ್ಯಾಯಾಧೀಶರಾದ ಬೋಬ್ಡೆಯವರು ಭೂಷಣ್ ಅವರ ಈ ವಾದವನ್ನು "ಅವರಿಗೆಲ್ಲ ಆಹಾರ ಪೂರೈಕೆ ಆಗುತ್ತಿಲ್ಲವೆಂದು ಈ ಹಂತದಲ್ಲಿ ಹೇಳಲಾಗುವುದಿಲ್ಲ." ಎಂದು ತಳ್ಳಿ ಹಾಕಿದರು.

ಪ್ರಶಾಂತ್ ಭೂಷಣ್ ಅವರ ವಾದಮಂಡನೆಗೆ ಸಿಕ್ಕ ಈ ಉತ್ತರವು ಅತಿ ವಿಚಿತ್ರವಾದುದಾಗಿತ್ತು. ಕಾರ್ಮಿಕರಿಗೆ ಸರ್ಕಾರವು ಆಹಾರವನ್ನು ಪೂರೈಸುತ್ತಿರುವಾಗ, ಅವರಿಗೆ ಹಣದ ಅಗತ್ಯವೇನು ಎಂಬುದನ್ನು ವಿವೇಕಿಗಳಾದ ಮುಖ್ಯನ್ಯಾಯಾಧೀಶರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬೇಕಿತ್ತು. ಬದುಕಲು ಕೇವಲ ಆಹಾರವೊಂದೇ ಸಾಲದು ಎಂಬುದು ನ್ಯಾಯಾಧೀಶರಿಗೆ ಗೊತ್ತಿರಬೇಕಿತ್ತು.

ನ್ಯಾಯಾಧೀಶರುಗಳು ವಲಸೆ ಕಾರ್ಮಿಕರ ಸ್ಥಿತಿಗಳನ್ನು ಹಾಗೂ ಅವರನ್ನೇ ಅವಲಂಬಿಸಿದ ಕುಟುಂಬದವರು, ಅವರ ಹಣಕ್ಕಾಗಿ ಕಾಯುತ್ತಿರುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಪರಿಣತರ ಲೇಖನಗಳನ್ನು ಓದುವ ಅಗತ್ಯವೇನೂ ಇರಲಿಲ್ಲ. ತೀರಾ ಇತ್ತೀಚಿನವರೆಗೂ, ಮನಿಯಾರ್ಡರ್ ಪಾವತಿ ಮಾಡುವ ಪೋಸ್ಟ್‌ಮ್ಯಾನ್ ಹಳ್ಳಿಗಳಲ್ಲಿ ತುಂಬಾ ಬೇಕಾದ ವ್ಯಕ್ತಿಯಾಗಿದ್ದ. ತನ್ನನ್ನು ಆಶ್ರಯಿಸಿದವರಿಗೋಸ್ಕರ, ಕಾರ್ಖಾನೆಗಳಲ್ಲಿ, ಬೀದಿ ಬೀದಿಗಳಲ್ಲಿ ಕತ್ತೆಯಂತೆ ದುಡಿದು, ಇಕ್ಕಟ್ಟಾದ ಕೋಣೆಗಳಲ್ಲಿ ಮಲಗಿ, ಸಾರ್ವಜನಿಕ ಸ್ನಾನಗೃಹಗಳಲ್ಲಿ ಅಥವಾ ನಲ್ಲಿಗಳ ಕೆಳಗೆ ಮಿಂದು, ಹಣ ಉಳಿಸಿ, ಕಾರ್ಮಿಕರು ತಮ್ಮ ಮನೆಯವರಿಗೆ ತುರ್ತು ಮನಿಯಾರ್ಡರ್ ಕಳುಹಿಸುತ್ತಾರೆ.

ನಮ್ಮ ಉದಾರ ಮತ್ತು ವಿವೇಕಿಯಾದ ಸರ್ಕಾರವೇ ಈ ಕಾರ್ಮಿಕರಿಗೆ ಊಟ ನೀಡುವ ಜವಾಬ್ದಾರಿ ಹೊತ್ತಿರುವಾಗ ಕಾರ್ಮಿಕರಿಗೆ ಹಣ ಏಕೆ ಬೇಕು ಎಂಬುದು ನಮ್ಮ ನ್ಯಾಯಾಧೀಶರುಗಳ ವಾದ.

ಕರೋನಾ ಪಿಡುಗು ವಿಶ್ವಾದ್ಯಂತ ಹಬ್ಬಿರುವ ಇಂತಹ ಸಮಯದಲ್ಲಿ, ಕಾರ್ಮಿಕರಾಗಲೀ, ಅವರ ಬಂಧುಗಳಾಗಲೀ ಹೇಗೆ ಕಾಯಿಲೆ ಬೀಳಲು ಸಾಧ್ಯ ಎಂದು ಈ ನ್ಯಾಯಪೀಠದಲ್ಲಿರುವವರು ಭಾವಿಸಿದಂತಿದೆ. ಅವರಿಗೆ ಯಾವುದೇ ಔಷಧೋಪಚಾರದ ಅಗತ್ಯವಿಲ್ಲ, ಅವರ ಮಕ್ಕಳಿಗೆ ಹಾಲು ಬೇಡ; ಅಥವಾ ಅವರಿಗೆ ಹಾಲು ಕುಡಿಯುವ ಅರ್ಹತೆ ಇಲ್ಲ, ಗರ್ಭಿಣಿ ಮಹಿಳೆಯರಿಗೆ ಅಪಾರ ಕರುಣೆಯಿಂದ ಬೇಯಿಸಿ ಬಡಿಸಿದ ಕಿಚಡಿ ಬಿಟ್ಟರೆ ಇನ್ನೇನು ಬೇಕು?

ನ್ಯಾಯಾಲಯದ ತೀರ್ಪಿನ ಉತ್ತರಾರ್ಧ ಇನ್ನೂ ಹೆಚ್ಚು ಚಿಂತೆಗೀಡುಮಾಡುವಂತಹುದು. ಅದರಲ್ಲಿ ವಿವರಿಸಿರುವುದೇನೆಂದರೆ, ಈ ವಲಸೆ ಕಾರ್ಮಿಕರ ಈ ಸಮಸ್ಯೆಯ ನಿರ್ವಹಣೆಯನ್ನು ಸರ್ಕಾರದ ವಿವೇಚನೆಗೆ ಬಿಟ್ಟು, ಸರ್ಕಾರದ ಆದೇಶದಂತೆಯೇ ನಡೆದುಕೊಳ್ಳುವುದು ಸೂಕ್ತ. ನ್ಯಾಯಾಲಯವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಬಯಸುವುದಿಲ್ಲ.

"ನಾವು ಈ ವಿಷಯದಲ್ಲಿ ಪರಿಣತರಲ್ಲ, ವಿಷಯವನ್ನು ಕೂಲಂಕಷವಾಗಿ ನೋಡದ ಹೊರತು ನ್ಯಾಯಾಲಯವು ಇದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ಸರ್ಕಾರದ ವಿವೇಚನೆ ಹಾಗೂ ತೀರ್ಮಾನವನ್ನು, ನಮ್ಮ ತೀರ್ಪಿನಿಂದ ಬದಲಿಸುವ ಆಲೋಚನೆಯೂ ನಮಗಿಲ್ಲ. ಏನಾದರೂ ದೂರುಗಳಿದ್ದರೆ, ಅದನ್ನು ದಾಖಲಿಸುವ ಸಲುವಾಗಿ 'ಸಹಾಯವಾಣಿ' ಯನ್ನು ಸ್ಥಾಪಿಸಲು ಸರ್ಕಾರಕ್ಕೆ ಹೇಳುತ್ತೇವೆ."

ಇಂತಹ ಒಂದು ಸಂಕಷ್ಟದ ಸಮಯದಲ್ಲಿ, ಸರ್ಕಾರವೇ ಸಮಂಜಸದ ನ್ಯಾಯ ಒದಗಿಸಬಲ್ಲ ಅತ್ಯುತ್ತಮ ವೇದಿಕೆ ಎಂದು ನ್ಯಾಯಾಲಯ ತೀರ್ಮಾನಕ್ಕೆ ಬಂದಂತಿದೆ. ಇತ್ತೀಚಿನ ದಿನಗಳಲ್ಲಿ, ಸರ್ಕಾರದ ಮಾತಿನಂತೆಯೇ ನ್ಯಾಯಾಲಯವು ನಡೆದುಕೊಳ್ಳುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ದೆಹಲಿ, ಮುಂಬೈ ಮತ್ತು ಅಹಮದಾಬಾದ್ ನಗರಗಳಿಂದ ಲಕ್ಷೋಪಲಕ್ಷ ಕೂಲಿಕಾರ್ಮಿಕರು ಮರಳಿ ಹೋಗುತ್ತಿರುವ ಘಟನಾವಳಿಗಳು ಕೇವಲ ಸುಳ್ಳು ಸುದ್ದಿ ಎಂದು ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯನ್ನು ಅದು ನಂಬಿದೆ. ಕಾರ್ಮಿಕರು ಮರಳಿಮಣ್ಣಿಗೆ ಮರುವಲಸೆ ಹೊರಟಿರುವುದು ಜೀವನೋಪಾಯವನ್ನು ಕಳೆದುಕೊಂಡಿರುವ ಅಭದ್ರತೆಯಿಂದ ಎಂಬುದನ್ನು ನಂಬಲು ನ್ಯಾಯಾಲಯ ತಯಾರಿಲ್ಲ. ಈ ಅಭಿಪ್ರಾಯವು ಕೂಡ, ಸ್ವತಂತ್ರವಾಗಿ ಚಿಂತನೆ ಮಾಡದೇ, ಸರ್ಕಾರದ ನಿಲುವಿಗೆ ಅಂಟಿಕೊಂಡಿರುವ ಕಾರಣದಿಂದಾಗಿದೆ.

ಒಂದು ಸಮಾಧಾನಕರ ಸಂಗತಿಯೆಂದರೆ, ನ್ಯಾಯಾಲಯವು, ತನಗೆ ಈ ವಿಷಯದಲ್ಲಿ ಪರಿಣತಿ ಇಲ್ಲ ಎಂಬುದನ್ನು ಒಪ್ಪಿಕೊಂಡಿರುವುದು! ಸರಿಯಾದ ವಿಷಯ ಜ್ಞಾನವಿಲ್ಲದೆ ನ್ಯಾಯದಾನ ಮಾಡಲಾಗದು ಎಂದು ಬ್ರೆಕ್ಟ್‌ನೂ ಹೇಳುತ್ತಾನೆ. ಅಂದರೆ ಇಲ್ಲಿ ಸರ್ಕಾರವು ಎಲ್ಲರಿಗಿಂತ ಅತ್ಯಂತ ಹೆಚ್ಚು ಜ್ಞಾನವಂತ ಸಂಸ್ಥೆ ಎಂದು ನಾವು ಪರಿಗಣಿಸಬೇಕೆಂದು ನ್ಯಾಯಾಲಯ ಸೂಚಿಸುತ್ತಿದೆಯೇ? ಹಾಗಿದ್ದರೆ, ಬಡಜನರ ಜನಜೀವನದ ಅಧ್ಯಯನದ ಬಗ್ಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅರ್ಥಶಾಸ್ತ್ರಜ್ಞರ ಮತ್ತು ಸಮಾಜಶಾಸ್ತ್ರಜ್ಞರ ಬಗ್ಗೆ ಏನು ಹೇಳುವುದು?

ಈ ನ್ಯಾಯಮೂರ್ತಿಗಳು, ತಮಗೆ ಸಮಯ ಸಿಕ್ಕಾಗ, ಈ ವಲಸೆ ಕಾರ್ಮಿಕರು ಆಹಾರ ಸಾಮಗ್ರಿಗಳನ್ನು ಪಡೆಯುವಲ್ಲಿ ಎದುರಿಸುತ್ತಿರುವ ಪಡಿಪಾಟಲುಗಳ ಬಗ್ಗೆ ಅಧಿಕೃತ ಪತ್ರಿಕಾಸುದ್ದಿಗಳನ್ನು ಓದಿ ತಿಳಿದುಕೊಳ್ಳಬಹುದು. ಹಿಂದಿ ವೃತ್ತಪತ್ರಿಕೆಗಳು ಮತ್ತು ಟೀವಿ ವಾಹಿನಿಗಳು ಈ ವಿದ್ಯಮಾನ ಕುರಿತ ಸುದ್ದಿಗಳು ಜನರನ್ನು

(೧೩ನೇ ಪುಟಕ್ಕೆ

ಪ್ರಚಲಿತ-೩

# ದೆಹಲಿಯ ಮರುವಿನ್ಯಾಸ: ಒಂದು ಮೂರ್ಖ, ಆಡಂಬರದ ಯೋಜನೆ

-ರಾಮಚಂದ್ರ ಗುಹಾ

**ನವದೆಹಲಿಯ ಕೇಂದ್ರ ಭಾಗವು ಪಾಶ್ಚಿಮಾತ್ಯ ಮುಖ ಚಹರೆ ಹೊಂದಿದೆ ಎಂದು ಭಾವಿಸಿರುವ ಸದ್ಯದ ಸರ್ಕಾರ ಅದನ್ನು ಭಾರತೀಯ ಮುಖ ಚಹರೆಗೆ ಬದಲಾಯಿಸಲೆಂದು ಹೊರಟಿರುವ ಒಂದು ಬೃಹತ್ ಯೋಜನೆ ಕುರಿತಂತೆ-ಸದ್ಯದ ಆರ್ಥಿಕ ಸಂಕಷ್ಟದ ಸಂದರ್ಭದಲ್ಲೂ ಅದಕ್ಕೆ ತಡೆಯಾಜ್ಞೆ ನೀಡಕು ನಮ್ಮ ಸರ್ವೋನ್ನತ ನ್ಯಾಯಾಲಯ ನಿರಾಕರಿಸಿದೆಯಾದರೂ-ಕೆಲವು ನೈತಿಕ ಪ್ರಶ್ನೆಗಳನ್ನೆತ್ತುತ್ತದೆ ಈ ಲೇಖನ-ಸಂ.**



**ಆ**ರು ವರ್ಷಗಳ ಹಿಂದೆ *ಹಿಂದುಸ್ತಾನ್ ಟೈಮ್ಸ್* ಪತ್ರಿಕೆಯ ಅಂದಿನ ಸಂಪಾದಕರಾಗಿದ್ದವರು ತಮ್ಮ ಪತ್ರಿಕೆಗೆ ನಾನೊಂದು ಪಾಕ್ಷಿಕ ಅಂಕಣವನ್ನು ಬರೆಯಬೇಕೆಂದು ಕೋರಿದರು. ಯಾವುದೇ ರೀತಿಯಲ್ಲಿ ಕತ್ತರಿಯಾಡಿಸದೆ ಪ್ರಕಟಿಸುವುದಾದರೆ ಬರೆಯಲು ಸಿದ್ಧ ಎಂದು ನಾನು ಅದಕ್ಕೆ ಸಮ್ಮತಿಸಿದೆ. ಅಗೀಗ ನನ್ನ ಸಮ್ಮತಿಯಿಲ್ಲದೆ ನನ್ನ ಪಠ್ಯಕ್ಕೆ ಕೆಲವು ಬದಲಾವಣೆ ಮಾಡಿದರೂ, ನನ್ನ ವಾದವನ್ನೇ ಬದಲಾಯಿಸುವಂತೆ, ಅಥವಾ ನನ್ನ ಬರಹವನ್ನು ಪರಿಷ್ಕರಿಸುವಂತೆ ನನ್ನನ್ನು ಒತ್ತಾಯಿಸುವ ಪ್ರಯತ್ನಗಳು ಈವರೆಗೆ ನಡೆದಿರಲಿಲ್ಲ. *ಹಿಂದುಸ್ತಾನ್ ಟೈಮ್ಸ್* ಪತ್ರಿಕೆಯ ಏಪ್ರಿಲ್ ೧೯ ರ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾಗಬೇಕಿದ್ದ ನನ್ನ ಅಂಕಣವನ್ನು ಪ್ರಕಟಿಸಲು ಅದು ನಿರಾಕರಿಸಿದಾಗ, ಅದನ್ನು ಯಾವುದೇ ಬದಲಾವಣೆ ಇಲ್ಲದೇ ಪ್ರಕಟಿಸಿದ್ದಕ್ಕಾಗಿ 'ವೈರ್' ಪತ್ರಿಕೆಗೆ ಕೃತಜ್ಞನಾಗಿದ್ದೇನೆ. ಕಳೆದ ತಿಂಗಳು *ನ್ಯೂಸ್‌ಲಾಂಡ್ರಿ* ಜಾಲತಾಣದಲ್ಲಿ ತಮ್ಮ ಎರಡು ಕಂತಿನ ಲೇಖನ ಪ್ರಕಟಿಸಿರುವ ಲೇಖಕಿ ಅಲ್ಪನಾ ಕಿಶೋರ್ ಅವರು, ನವದೆಹಲಿಯ (ಇಂಡಿಯಾ ಗೇಟ್‌ನಿಂದ ರಾಷ್ಟ್ರಪತಿ ಭವನದವರೆಗಿನ) ಕೇಂದ್ರಭಾಗದ ವಿಸ್ತೃತ ವಲಯವನ್ನು ಮರುವಿನ್ಯಾಸಗೊಳಿಸುವ ಯೋಜನೆಯನ್ನು ವಿಮರ್ಶಾತ್ಮಕ ಪರಿಶೀಲನೆಗೆ ಒಳಪಡಿಸಿದ್ದಾರೆ. ಮೊದಲನೆಯ ಭಾಗದಲ್ಲಿ, ರಾಜಧಾನಿಯ ಮಾರಕ ವಾಯು ಮಾಲಿನ್ಯದ ಸಮಸ್ಯೆಯನ್ನು ಅಥವಾ ಕುಸಿಯುತ್ತಿರುವ ಜನರ ಜೀವಿತಾವಧಿಗೆ ಸಂಬಂಧಿಸಿದ ಸಮಸ್ಯೆಯನ್ನು ಸರಿಪಡಿಸುವುದಕ್ಕಿಂತ ನಗರದ ಈ ಮರುವಿನ್ಯಾಸಗೊಳಿಸುವ ಯೋಜನೆಗೆ ಹೆಚ್ಚಿನ ಪ್ರಾಧಾನ್ಯತೆ ಏಕೆ ಎಂಬ ಪ್ರಶ್ನೆಯನ್ನು ಎತ್ತುತ್ತಾರೆ.

ಈ ಪ್ರಶ್ನೆಗೆ ಉತ್ತರಿಸುತ್ತಾ ಕಿಶೋರ್ ಅವರು ಈ ಯೋಜನೆಯಲ್ಲಿಯ ಒಂದು ಪ್ರಮುಖ ಅಂಶದ ಬಗೆಗೆ ಗಮನ ಸೆಳೆಯುತ್ತಾರೆ: ಅದು ರಾಜಪಥ್ ಮಾರ್ಗದಲ್ಲಿ ಪ್ರಧಾನ ಮಂತ್ರಿಗೆ ಒಂದು ಹೊಸ ಭವ್ಯ ಬಂಗಲೆ ನಿರ್ಮಿಸುವ ವಿಚಾರ. "ಈ ಬಗೆಯ ವಿಷಯಲೋಲುಪತೆ ಸರ್ವಾಧಿಕಾರ ಇರುವಲ್ಲಿ ಸಾಮಾನ್ಯ. ಆದರೆ ಅದು ಒಂದು ಗಣರಾಜ್ಯಕ್ಕೆ ತಕ್ಕುದಲ್ಲ." ಎನ್ನುತ್ತಾರೆ. ದೆಹಲಿಯನ್ನು ಲಂಡನ್ ಅಥವಾ ಬರ್ಲಿನ್‌ಗಳಂತೆ ಒಂದು ಜನತಾಂತ್ರಿಕ ದೇಶದ ರಾಜಧಾನಿ ಎಂದು ಭಾವಿಸಿದರೆ, ಆಗ ದೆಹಲಿಯ ತುರ್ತು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಮುಂಚೆ, ಅಂದರೆ ಪ್ರತಿದಿನ ಸಂಭವಿಸುವ ೮೦ ಸಾವುಗಳಿಗೆ ಮತ್ತು ಇದರಲ್ಲಿನ ಶೇ.೪೫ ಅಕಾಲಿಕ ಸಾವುಗಳಿಗೆ ಕಾರಣಗಳನ್ನು ಹುಡುಕಿ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ಮುಂಚೆ, ಪ್ರಧಾನ ಮಂತ್ರಿಗೆ ಎರಡನೆಯ ಬಂಗಲೆಯನ್ನು ನಿರ್ಮಿಸುವುದಕ್ಕಾಗಿ ನೂರಾರು ಕೋಟಿ ಖರ್ಚು ಮಾಡುವುದು ಸಾಮಾನ್ಯ ಜನರ ಹಿತವನ್ನು ಕಡೆಗಣಿಸಿ, ಆಢ್ಯ ಗಣ್ಯವರ್ಗವನ್ನು ಪೋಷಿಸುವ ಒಂದು ಅಸೂಕ್ಷ್ಮತೆ ಎಂದು ಕಿಶೋರ್ ವಾದಿಸುತ್ತಾರೆ. ಹಾಗಲ್ಲದೆ ನಾವು ಪ್ರಜೆಗಳು, ನಿಷ್ಕ್ರಿಯ ಪ್ರೇಕ್ಷಕರಾಗಿರುವ ಬೀಜಿಂಗ್, ಪ್ಯಾಂಗಾಂಗ್, ಮಾಸ್ಕೋಗಳ ಸಾಲಿನಲ್ಲಿದ್ದರೆ ಮಾತ್ರ ಇದು ಸಹಜವೆನ್ನಿಸಿಕೊಳ್ಳುತ್ತದೆ ಎಂದೂ ಅವರು ಕುಟುಕುತ್ತಾರೆ.

ಕಿಶೋರ್ ಅವರ ಲೇಖನದ ಎರಡನೇ ಭಾಗವು ಈ ಯೋಜನೆಯು ಮಂಜೂರಾಗಿರುವ ಪ್ರಕ್ರಿಯೆಯನ್ನು ವಿಶ್ಲೇಷಿಸುತ್ತದೆ. ಇದು ಯೋಜನೆಯು ಗುಪ್ತವಾಗಿ ಮತ್ತು ತಲೆಕೆಳಗು ತಂತ್ರಗಳಿಂದ ಪ್ರಧಾನಮಂತ್ರಿಗೆ ಆಪ್ತವಾಗಿರುವ ಗುಜರಾತ್ ಮೂಲದ ವಾಸ್ತುಶಿಲ್ಪ ಸಂಸ್ಥೆಗೆ ದೊರೆಯುವಂತೆ ನೋಡಿಕೊಳ್ಳಲಾಗಿರುವ ಪರಿಯನ್ನು ವಿವರಿಸುತ್ತದೆ. ಈ ಸಂಸ್ಥೆಯ ಹಿಂದಿನ ಎಲ್ಲ 'ಯಶಸ್ಸೂ' ಸೂಕ್ತ ವಿಧಾನ, ಪರಿಣಾಮಗಳ ಪರಿಶೀಲನೆ, ಸಾರ್ವಜನಿಕ ಸಲಹೆ ಮತ್ತು ಉತ್ತಮವಾದ ಸ್ಥಾಪಿತ ಜಾಗತಿಕ ರೂಢಿಗಳಂತಹ ಎಲ್ಲ 'ಅಡ್ಡಿಗಳನ್ನೂ' ಜಾಣತನದಿಂದ ನಿವಾರಣೆ ಮಾಡಿಕೊಂಡಿದ್ದರಿಂದ ಬಂದಿದೆ. ಒಟ್ಟಾರೆ ಸಂಸ್ಥೆಯ ಹಿಂದಿನ ದಾಖಲೆಯನ್ನು 'ನಾಗರೀಕರ ಬಗೆಗಿನ ಸ್ವಭಾವ ಸಹಜ ಸತತ ಅನಾದರಣೆಯ ಸಾಕಾರ ರೂಪ' ಎಂದು ಗುರುತಿಸಬಹುದು.

ಎರಡು ಭಾಗಗಳ ತಮ್ಮ ಈ ಲೇಖನವನ್ನು ಸಮಾಪ್ತಗೊಳಿಸುತ್ತಾ ಕಿಶೋರ್ ಅವರು, "ಒಂದು ಸಾಮಾನ್ಯ ಹಿನ್ನೆಲೆಯಿಂದ ಬಂದ ಪ್ರಧಾನಿ, ರಾಜ್‌ಪಥ್‌ದಲ್ಲಿಯ ಬಂಗಲೆಗಾಗಿ ಹಂಬಲಿಸುವುದು, ಅದೂ ತಮ್ಮ ವೈಯಕ್ತಿಕ ಹಿರಿಮೆ ಮತ್ತು ಪೂರ್ವಾರ್ಜಿತದ ಬಗೆಗಿನ ತಮ್ಮ ದೃಷ್ಟಿಯಿಂದ, ಒಂದು ಬಹು ದೊಡ್ಡ ವಿಪರ್ಯಾಸವಾಗಿದೆ" ಎನ್ನುತ್ತಾರೆ. "ಟ್ರಂಪ್ ಆದರೂ ತಮಗಾಗಿ ಮಾಲ್‌ನಲ್ಲಿ ಎರಡನೆಯ ಬಂಗಲೆಗಾಗಿ ಆಜ್ಞೆ ಮಾಡಬಹುದೇ?" ಎಂದು ಪ್ರಶ್ನಿಸುತ್ತಾರೆ. ಅವರು ಮುಂದುವರಿದು 'ಅದು ತಮ್ಮ ಹೆಸರನ್ನು ಕಸೂತಿ ಹಾಕಿದ ೧೦ ಲಕ್ಷ ಬೆಲೆಯ ಸೂಟ್ ಹಾಕಿಕೊಂಡ ಮುಜುಗರದ ನೆನಪುಗಳನ್ನು ಮತ್ತೆ ತರುತ್ತದಲ್ಲದೇ ಈ ಸಲದ ಆಡಂಬರದ ಹೊರೆಯನ್ನು ತೆರಿಗೆದಾರ ಹೊರಬೇಕಿದೆ' ಎನ್ನುತ್ತಾರೆ.

ಕಿಶೋರ್ ಅವರ ಲೇಖನದಲ್ಲಿ ಕೋವಿಡ್-೧೯ ರ ಬಗೆಗೆ ಪ್ರಸ್ತಾಪವಿಲ್ಲ; ಈ ಸಂಕಷ್ಟದ ಆಯಾಮಗಳು ತಿಳಿದುಬರುವುದಕ್ಕೆ ಮೊದಲೇ ಅವರು ಈ ಲೇಖನವನ್ನು ಬರೆದಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ. ಪ್ರಾಸಂಗಿಕವಾಗಿ ನಾನು ಈ ಸಂಕಷ್ಟದ ವಿಷಯಕ್ಕೆ ಬರುತ್ತೇನೆ. ಅದಕ್ಕೆ ಮೊದಲು ನಾನು ಕಿಶೋರ್ ಅವರ ಕಾಳಜಿಯಲ್ಲಿ ಸಂಪೂರ್ಣವಾಗಿ ಭಾಗಿಯಾಗುತ್ತೇನೆ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. ವ್ಯಾಪಕವಾದ ಸಾರ್ವಜನಿಕ ಚರ್ಚೆಯಿಲ್ಲದೆ, ಅಥವಾ ವಾಸ್ತುವಿನ್ಯಾಸ ಮತ್ತು ನಗರಯೋಜನೆಯ ಕ್ಷೇತ್ರದ ಪರಿಣತರ ಸಲಹೆಗಳೂ ಇಲ್ಲದೆ ಈ ಯೋಜನೆಯನ್ನು ಅಂಗೀಕರಿಸಲಾಗಿದೆ.

ವಾಸ್ತವದಲ್ಲಿ ಅಹ್ಮದಾಬಾದ್‌ನಲ್ಲಿ ಈ ವಾಸ್ತುವಿನ್ಯಾಸ ಸಂಸ್ಥೆಯ ಕಾರ್ಯವೈಖರಿಯನ್ನು ಕಣ್ಣಾರೆ ಕಂಡಿರುವುದರಿಂದ ನಾನು ಈ ಬಗ್ಗೆ ಹೆಚ್ಚಿನ ಆತಂಕ ಹೊಂದಿದ್ದೇನೆ. ಏಕೆಂದರೆ ಈ ಸಂಸ್ಥೆಗೆ ಇತಿಹಾಸ ಅಥವಾ ಪರಂಪರೆಯ ಬಗ್ಗೆ ಯಾವುದೇ ಕಾಳಜಿ ಇಲ್ಲ. ಈ ಸಂಸ್ಥೆ ನಿರ್ಮಿಸಿರುವ ಅಹ್ಮದಾಬಾದ್ ಭಾರತೀಯ ಸಂಸ್ಥೆಯ (Indian Institute of Ahmadabad) ಎರಡನೆಯ ಕ್ಯಾಂಪಸ್‌ನ ವಿನ್ಯಾಸ ಇದಕ್ಕೊಂದು ನಿದರ್ಶನ. ಮೂಲ IIM-A ಕ್ಯಾಂಪಸ್, ಲೂಯಿಸ್ ಖಾನ್ ಅವರಿಂದ ವಿನ್ಯಾಸಗೊಳಿಸಲ್ಪಟ್ಟಿದ್ದು, ಅದು ಕೆಂಪು ಇಟ್ಟಿಗೆ, ತೆರೆದ ಕಿಟಕಿಗಳು, ಮತ್ತು ಅಂಗಳಗಳನ್ನು ಸಾಂಪ್ರದಾಯಿಕ ಮತ್ತು ಆಧುನಿಕ ರೂಢಿಗಳ ಮೂಲಕ ಸುಂದರವಾಗಿ ಬೆಸೆಯುತ್ತದೆ. ಅದನ್ನು ನೋಡುವುದು, ಅಲ್ಲಿ ನಡೆದಾಡುವುದು, ಅಧ್ಯಯನ ಮಾಡುವುದು ಮತ್ತು ಬೋಧಿಸುವುದು ಒಂದು ಸಂತೋಷ ನೀಡುತ್ತದೆ. ಆದರೆ ಅದರ ನಂತರ ನಿರ್ಮಿಸಲ್ಪಟ್ಟ ಕಟ್ಟಡಗಳು ನಿರುತ್ಸಾಹದ ನಿರ್ಜೀವ, ಸಂಪೂರ್ಣ ಕಾಂಕ್ರೀಟ್ ಕಟ್ಟಡಗಳು. ಅಲ್ಲಿಗೆ ಸ್ಥಳಾಂತರಿಸಲ್ಪಟ್ಟ ಕಛೇರಿಗಳು ಹಳೆಯ ಕಟ್ಟಡಕ್ಕೆ ಮರಳಿ ಹೋಗಲು ಸದಾ ಹಂಬಲಿಸುತ್ತವೆ.

ಈ ಯೋಜನೆಯ ಬಗೆಗಿನ, ಪ್ರಧಾನಮಂತ್ರಿಗಳ ತಮ್ಮದೇ ಆದ ಸಮರ್ಥನೆ ಏನೆಂದರೆ, ಭಾರತದ ಸ್ವಾತಂತ್ರ್ಯದ ೭೫ನೆಯ ವರ್ಷಾಚರಣೆ ಸಂದರ್ಭದಲ್ಲಿ ಅದೊಂದು ವೈಯಕ್ತಿಕವಲ್ಲದ ರಾಷ್ಟ್ರೀಯ ಮೈಲಿಗಲ್ಲಿನ ಗುರುತಾಗಬೇಕು ಎಂಬುದು. ಇದು ಜನರನ್ನು ಯಾಮಾರಿಸುವ ಮಾತು. ಏಕೆಂದರೆ ಹಿಂದಿನ ಪ್ರಧಾನಮಂತ್ರಿಗಳ ಕಾಲದಲ್ಲಿ ನಡೆದ ಇಂತಹ ವರ್ಷಾಚರಣೆಗಳು ಈ ಬಗೆಯ ದುಂದುವೆಚ್ಚವನ್ನು ಒಳಗೊಂಡಿರಲಿಲ್ಲ. ಸ್ವಾತಂತ್ರ್ಯದ ೨೫ ನೆಯ ಮತ್ತು ೫೦ನೆಯ ವರ್ಷಾಚರಣೆಗಳನ್ನು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವ ಮೂಲಕ ಸೂಕ್ತ ರೀತಿಯಲ್ಲಿ ನಡೆಸಲಾಗಿದೆ. ಇಂದಿರಾ ಗಾಂಧಿ ಮತ್ತು ಐ.ಕೆ.ಗುಜ್ರಾಲ್ ಅವರಿಗೆ ಯಾವುದು ಸೂಕ್ತವಾಗಿತ್ತೋ ಅದು ಮೋದಿಯವರಿಗೆ ಸೂಕ್ತವಲ್ಲ ಎಂಬುದು ಸ್ಪಷ್ಟ. ನನ್ನ ಮನಸ್ಸಿಗೆ ದೆಹಲಿಯ

**(೧೩ನೇ ಪುಟಕ್ಕೆ**

ಪ್ರಚಲಿತ-೪

# ಕೃಷಿ ಬದುಕಿನ ಬಿಕ್ಕಟ್ಟು : ಕೆಲ ಆಲೋಚನೆಗಳು

-ಮಲ್ಲಿಕಾರ್ಜುನ ಹೊಸಪಾಳ್ಯ



ಭಾರತದ ಕೃಷಿ ವಲಯ ಇತ್ತೀಚಿನ ವರ್ಷಗಳಲ್ಲಿ ಸದಾ ಬಿಕ್ಕಟ್ಟಿನಲ್ಲಿರುವ ವಲಯ. ದೇಶದ ಶೇಕಡಾ ಐವತ್ತಕ್ಕೂ ಹೆಚ್ಚುಜನ ಇದರಲ್ಲಿ ತೊಡಗಿದ್ದರೂ, ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಅದರ ಪಾಲು ತೀರಾ ನಗಣ್ಯ. ನಮ್ಮ ಆರ್ಥಿಕತೆ ಹೆಚ್ಚೆಚ್ಚು ನಗರೀಕರಣ ಮತ್ತು ಕೈಗಾರಿಕೀಕರಣದತ್ತ ಚಲಿಸುತ್ತಿರುವುದಾದರೂ, ಕೃಷಿ ವಲಯದ ಸುಧಾರಣೆಗೆ ಸರ್ಕಾರ ನೀಡುತ್ತಿರುವ ವಿಶೇಷ-ಪ್ರೋತ್ಸಾಹಗಳೇನೂ ಕಡಿಮೆ ಇಲ್ಲ. ಆದರೂ ರೈತರ ಆತ್ಮಹತ್ಯೆಯ ಸರಣಿ ನಿಲ್ಲದೆ ಮುಂದುವರೆದಿದೆ. ಇದಕ್ಕೇನು ಕಾರಣ? ಈ ಪ್ರಶ್ನೆಯ ಮೂಲಕ್ಕೆ ಹೋಗಿ ಅದನ್ನು ಹಲವು ದಿಕ್ಕುಗಳಿಂದ ಮುಖಾಮುಖೀ ಮಾಡಿಕೊಂಡು ಚಿಂತಿಸಿರುವ ಲೇಖನ ಇದು.-ಸಂ

**ನ**ಮ್ಮ ಕುಟುಂಬದ ಬೇಸಾಯದೊಂದಿಗೇ ಈ ಲೇಖನವನ್ನು ಆರಂಭಿಸಲು ಬಯಸುತ್ತೇನೆ.

೧೯೯೬ರ ನನ್ನ ನೆನಪು ಇನ್ನೂ ಹಸಿಯಾಗಿದೆ. ಕಡ್ಲೆಗಿಡಗಳ ಹೊಲದಲ್ಲಿ ಕಳೆ ತೆಗೆಯಲು ೧೦ ಜನ ಹೆಣ್ಣಾಳುಗಳನ್ನು ಕರೆದಿದ್ದೆವು. ಆದರೆ ಮಾರನೆ ದಿನ ಕೆಲಸಕ್ಕೆ ೧೫ಕ್ಕೂ ಹೆಚ್ಚು ಜನ ಬಂದಿದ್ದರು. ನಾವು ಬೇಡ ಎಂದರೆ ಇತರರು ಅವರ ಮನೆಯಲ್ಲಿ ಕಷ್ಟ ಇದೆ ಬರಲಿ ಬಿಡಿ ಎಂದು ಸಮಜಾಯಿಷಿ ನೀಡಿದರು. ನಮಗೂ ಪರಿಸ್ಥಿತಿ ಅರ್ಥವಾಯಿತು. ಆಗ ಒಂದಾಳಿಗೆ ಐದು ರುಪಾಯಿ ಕೂಲಿ. ತುಂಬಾ ಸಲ ಹೀಗೇ ನಡೆಯುತ್ತಿತ್ತು.

ಆದರೆ ಕಳೆದ ವರ್ಷ (೨೦೧೯) ಸೇವಂತಿಗೆ ಹೂವು ಕೊಯ್ಯಲು ಎಷ್ಟು ಗೋಗರೆದರೂ ಆಳುಗಳು ಬರಲಿಲ್ಲ. ಅರ್ಧಕ್ಕರ್ಧ ಹೂವು ಹಾಳಾಯಿತು. ಇದು ನಮ್ಮೊಬ್ಬರ ಸಮಸ್ಯೆಯಾಗಲೀ ಅಥವಾ ನಮ್ಮೂರಿನ ಸಮಸ್ಯೆಯಾಗಲೀ ಅಲ್ಲ. ರಾಜ್ಯದ ಎಲ್ಲಾ ಭಾಗಗಳಲ್ಲೂ ಕೃಷಿ ಕೆಲಸಗಾರರ ಕೊರತೆ ಇದೆ.

ಶತಮಾನಗಳಿಂದ ಕೃಷಿಕರ ಬದುಕು ಒಂದು ರೀತಿಯ ಸರಳ ರೇಖೆಯಂತೆ ಸಾಗುತ್ತಿತ್ತು. ಸ್ಥಳೀಯ ಸಂಪನ್ಮೂಲಗಳ ಬಳಕೆ, ಕಡಿಮೆ ವೆಚ್ಚದಿಂದಾಗಿ ಕೃಷಿ ಭಾರ ಎನಿಸಿರಲಿಲ್ಲ. ಆದರೆ ಕಳೆದ ಮುಕ್ಕಾಲು ಶತಮಾನದಲ್ಲಿ ಮೇಲೆ ಹೇಳಿದ ಕಾರ್ಮಿಕರ ಸಮಸ್ಯೆಯಂತಹ ಹಲವು ಪಲ್ಲಟಗಳು ನಮ್ಮ ಕೃಷಿರಂಗದಲ್ಲಿ ಆಗಿಹೋಗಿವೆ. ಅದರಲ್ಲಿಯೂ ಈ ಅವಧಿಯಲ್ಲಿ ಆದ ಮೂರು ಪ್ರಮುಖ ಮೈಲಿಗಲ್ಲುಗಳು ಕೃಷಿರಂಗದಲ್ಲಿ ಅಪಾರ ಏರು-ಪೇರುಗಳನ್ನು ತಂದೊಡ್ಡಿದವು. ಮೊದಲನೆಯದು; ಸ್ವಾತಂತ್ರ್ಯಾನಂತರದ 'ಕೈಗಾರಿಕೀಕರಣ ಇಲ್ಲವೇ ವಿನಾಶ' ಎಂಬ ನೀತಿ. ಎರಡನೆಯದು; ೧೯೬೦ರಲ್ಲಿ ಪರಿಚಯಿಸಲ್ಪಟ್ಟ ಹಸಿರುಕ್ರಾಂತಿ. ಮೂರನೆಯದು; ೯೦ರ ದಶಕದಲ್ಲಿ ನಾವು ಅಳವಡಿಸಿಕೊಂಡ ಜಾಗತೀಕರಣ ನೀತಿ.

ಕುವೆಂಪು ಅವರು ಒಂದು ಮಾತು ಹೇಳುತ್ತಾರೆ, ಏನೆಂದರೆ, "ನಮ್ಮ ರಾಷ್ಟ್ರವನ್ನು ಏಕಾಏಕಿ ಅಭಿವೃದ್ಧಿಹೊಂದಿದ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು. ತರುವಾಯ ಸ್ವದೇಶದ ಮತ್ತು ವಿದೇಶದ ಕೆಲವು ರಾಜಕೀಯ ಮತ್ತು ಆರ್ಥಿಕ ಪ್ರಾಜ್ಞರು ಕೊಟ್ಟ ಎಚ್ಚರಿಕೆಯನ್ನೂ ನಾವು ಲೆಕ್ಕಿಸಲಿಲ್ಲ, ಪ್ರತಿಗಾಮಿ ಸೂಚನೆಗಳೆಂದು ಅವನ್ನು ತಿರಸ್ಕರಿಸಿದೆವು" ಎಂದು. ಇದು ನೂರಕ್ಕೆ ನೂರರಷ್ಟು ನಿಜ. ಇದೊಂದು ರೀತಿ ಅಕ್ಕ-ಪಕ್ಕದ ಮನೆಯವರು ಐಶಾರಾಮಿ ವಸ್ತುಗಳನ್ನು ಖರೀದಿಸಲು ಪೈಪೋಟಿಗೆ ಬಿದ್ದಂತೆ.(ಈ ಹೇಳಿಕೆಯನ್ನು ಕುಪ್ಪಳಿಯ ಹೇಮಾವತಿ ಸಭಾಂಗಣದ ಕಾರಿಡಾರಿನಲ್ಲಿ ಕೆತ್ತಲಾಗಿದೆ)

ಸ್ವಾತಂತ್ರ್ಯ ಬಂದ ಸಮಯದಲ್ಲಿ ಆಹಾರದ ಕೊರತೆ ಇದ್ದುದು ನಿಜ. ಆದರೆ ಅದಕ್ಕೆ ನಮ್ಮಲ್ಲಿಯೇ ಇದ್ದ ಅಥವಾ ಇರಬಹುದಾದ ಪರಿಹಾರಗಳನ್ನು ಹುಡುಕುವ ಹಾಗೂ ಪರಿಗಣಿಸುವ ಗೋಜಿಗೇ ಹೋಗಲಿಲ್ಲ. ಅಲ್ಲದೆ ಆಹಾರದ ಕೊರತೆಯನ್ನು ಏಕಮುಖವಾಗಿ ನೋಡಲಾಯಿತು ಮತ್ತು ಅದನ್ನೇ ಬಹುದೊಡ್ಡ ಸಮಸ್ಯೆ ಎಂಬಂತೆ ಬಿಂಬಿಸಲಾಯಿತು. ಆಹಾರವೆಂದರೆ ಅನ್ನ, ಚಪಾತಿ, ದಾಲ್, ರೋಟಿ ಎಂದಷ್ಟೇ ಪರಿಗಣಿಸಿದ್ದರ ಅಪಾಯವಿದು.

ಇದರ ಮುಂದುವರಿಕೆಯಾಗಿ ೧೯೬೦ರಲ್ಲಿ ಪಂಜಾಬಿನಲ್ಲಿ ಆರಂಭವಾಗಿ ಆನಂತರ ಇಡೀ ದೇಶಕ್ಕೆ ವ್ಯಾಪಿಸಿದ ಹಸಿರು ಕ್ರಾಂತಿ, ಅದರ ಭಾಗವಾಗಿ ಪರಿಚಯಿಸಲ್ಪಟ್ಟ ಸುಧಾರಿತ ಬೀಜಗಳು, ರಸವಿಷಗಳು ಹಾಗೂ ಟ್ರಾಕ್ಟರ್, ಟಿಲ್ಲರ್ ಇತ್ಯಾದಿ ಯಂತ್ರಗಳು ನಮ್ಮ ಆಹಾರ ಕೊರತೆಯನ್ನು ತಾತ್ಕಾಲಿಕವಾಗಿ ಪರಿಹರಿಸಿದಂತೆ ಕಂಡರೂ ದೀರ್ಘಾವಧಿಯಲ್ಲಿ ಕೃಷಿಕರ ಬದುಕಿನ ಮೇಲೆ ಪರಿಹರಿಸಲಾಗದಂತಹ ಕಗ್ಗಂಟಾಗಿ ಪರಿಣಮಿಸಿದವು. "ಹೆಚ್ಚು ಗೊಬ್ಬರ, ಹೆಚ್ಚು



ನೀರು, ಹೆಚ್ಚು ಉತ್ಪಾದನೆ" ಎಂಬುದು ದಶಕಗಳ ಕಾಲ ನಮ್ಮ ಘೋಷಣೆಯಾಗಿತ್ತು.

ಆಗ, ಅಂದರೆ ೧೯೬೦ಕ್ಕಿಂತ ಮುಂಚೆ ಅಥವಾ ಹಸಿರುಕ್ರಾಂತಿಗಿಂತ ಮುಂಚೆ ನಮ್ಮ ರೈತರು ಬಳಸುತ್ತಿದ್ದ ದೇಸೀ ಭತ್ತ, ಗೋಧಿ, ಜೋಳ, ಸಿರಿಧಾನ್ಯಗಳು, ತರಕಾರಿ ತಳಿಗಳು ಕಡಿಮೆ ಉತ್ಪಾದಕತೆ ಮತ್ತು ಕಡಿಮೆ ಇಳುವರಿ ಕೊಡುತ್ತಿದ್ದವು ಎಂಬ ನಂಬಿಕೆ ಸಾಮಾನ್ಯವಾಗಿ ಇತ್ತು. ಸ್ವಲ್ಪಮಟ್ಟಿಗೆ ಅದು ನಿಜವೂ ಹೌದು. ಆದರೆ ಆ ಕಾಲಕ್ಕೇ ಅತ್ಯಧಿಕ ಇಳುವರಿ ಕೊಡುವ ತಳಿಗಳೂ ಇದ್ದವು. ಆ ರೀತಿ ದೇಸೀ ತಳಿ ಹಾಗೂ ಸ್ಥಳೀಯ ಲಭ್ಯ ಸಂಪನ್ಮೂಲಗಳನ್ನೇ ಬಳಸಿ ಹೆಚ್ಚು ಇಳುವರಿ ಪಡೆದ ರೈತರಿಗೆ ಕೇಂದ್ರ ಸರ್ಕಾರವೇ ಗುರುತಿಸಿ ಸನ್ಮಾನವನ್ನೂ ಮಾಡಿತ್ತು. ಕೆಲವು ಉದಾಹರಣೆ ನೋಡುವುದಾದರೆ;

೧೯೫೦-೫೨ರ ಅವಧಿಯಲ್ಲಿ ಕರ್ನಾಟಕದ ಮಡಿಕೇರಿಯ ಜೆ.ಸಿ.ಸಂಗಯ್ಯ ಎಂಬುವರು 'ಕರಿಬಿಳಿಯ' ಎಂಬ ದೇಸೀ ಭತ್ತದ ತಳಿ ಬೆಳೆದು ಹೆಕ್ಟೇರ್ ಒಂದಕ್ಕೆ ೧೨.೮ ಟನ್ ಇಳುವರಿ ಪಡೆದಿದ್ದರು. ಅಂದರೆ ಎಕರೆಗೆ ೫೧ ಕ್ವಿಂಟಾಲ್. ಭಾರತದ ರಾಷ್ಟ್ರಪತಿಗಳೇ ಇವರಿಗೆ ಪ್ರಗತಿಪರ ರೈತರೆಂದು ಸನ್ಮಾನ ಮಾಡಿದ್ದರು. ಪ್ರಸ್ತುತ ಹೈಬ್ರಿಡ್ ತಳಿ ಹಾಕಿ ಸಾಕಷ್ಟು ನೀರು ಕೊಟ್ಟು, ರಸಗೊಬ್ಬರ ಸುರಿದು, ಕಾರ್ಕೋಟಕ ಕೀಟ/ರೋಗನಾಶಕಗಳನ್ನು ಸಿಂಪಡಿಸಿದರೂ ರಾಜ್ಯದಲ್ಲಿನ ಭತ್ತದ ಸರಾಸರಿ ಇಳುವರಿ ೪೦ ಕ್ವಿಂಟಾಲ್ ದಾಟುವುದಿಲ್ಲ.

ಮೇಲಿನ ಸಂಗಯ್ಯ ಅವರದು ಆಕಸ್ಮಿಕ ಉದಾಹರಣೆ ಎಂದು ಉದಾಸೀನ ಮಾಡಬಹುದು. ಆದರೆ ಅಂತಹುದೇ ಮತ್ತಷ್ಟು ಪ್ರಕರಣಗಳಿವೆ;

೧೭೬೨-೬೬ರ ಅವಧಿಯಲ್ಲಿ ತಮಿಳುನಾಡಿನ ೧೩೦ ಹಳ್ಳಿಗಳಲ್ಲಿ ಹೆಕ್ಟೇರ್‌ಗೆ ೧೨.೫ ಟನ್ ಭತ್ತದ ಇಳುವರಿ ಪಡೆದ ದಾಖಲೆಗಳಿವೆ. ಅಂದರೆ ಎಕರೆಗೆ ೫೦ ಕ್ವಿಂಟಾಲ್ ಆಯಿತು. ಅದೇ ರೀತಿ ೧೯೪೯-೫೦ರಲ್ಲಿ ಪಶ್ಚಿಮ ಬಂಗಾಳದ ಮಿಡ್ನಾಪುರ, ಜೋಗೇಶ್ ಪಾಣಿ ಪ್ರದೇಶಗಳಲ್ಲಿ ಮಳೆ ಆಶ್ರಿತದಲ್ಲಿಯೇ 'ಅಭಿಮಾನ್' ಎಂಬ ದೇಸೀ ಭತ್ತದ ತಳಿ ಹಾಕಿದ ರೈತರು ಹೆಕ್ಟೇರ್‌ಗೆ ೭ ಟನ್-ಅರ್ಥಾತ್ ಎಕರೆಗೆ ೨೫ ಕ್ವಿಂಟಾಲ್ ಇಳುವರಿ ಪಡೆದ ದಾಖಲೆಗಳಿವೆ. ಕರ್ನಾಟಕದ ಮಲೆನಾಡಿನ ಮಳೆ ಆಶ್ರಿತ ಪ್ರದೇಶಗಳಲ್ಲಿ ಇಂದಿಗೂ ೨೦ ಕ್ವಿಂಟಾಲ್ ದಾಟುವುದಿಲ್ಲ.

ಅಂದರೆ ಸ್ವಾತಂತ್ರ್ಯ ಬರುವ ಮುನ್ನವೇ ನಮ್ಮಲ್ಲಿ ಹೆಚ್ಚು ಇಳುವರಿ ಕೊಡುವ ಅನೇಕ ದೇಸೀ ತಳಿಗಳನ್ನು ರೈತರು ಬೆಳೆಯುತ್ತಿದ್ದರು. ಹೆಚ್ಚು ಇಳುವರಿ ಜೊತೆಗೆ ಅವು ರೋಗ/ಕೀಟ ನಿರೋಧಕ ಗುಣ ಹೊಂದಿದ್ದವು, ದೇಸೀ ತಳಿಗಳಲ್ಲಿ ಸಹಜವಾಗಿಯೇ ಒಳ್ಳೆಯ ರುಚಿ ಹಾಗೂ ಪೌಷ್ಟಿಕಾಂಶಗಳು ಹೆಚ್ಚಿದ್ದವು. ಇವುಗಳನ್ನು ಬೆಳೆಯುವ ವೆಚ್ಚವೂ ಕಡಿಮೆಯಾಗಿತ್ತು.

ನಮ್ಮ ಆಗಿನ ಹೊಸ ಸರ್ಕಾರ ಇಂತಹ ತಳಿಗಳ ಬಗ್ಗೆ, ಅವುಗಳ ಸಂಗ್ರಹ, ತಳಿ ಶುದ್ಧತೆ, ತಳಿ ಆಯ್ಕೆಯ ಕಡೆ ಗಮನವನ್ನೇ ನೀಡಲಿಲ್ಲ. ಸಂವಹನ ಸಾಧನಗಳ ಕೊರತೆಯಿಂದಾಗಿ ಆಗ ಇವು ರೈತರಿಂದ ರೈತರಿಗೆ ತಲುಪುವ ಅವಕಾಶವೂ ಕಡಿಮೆ

ಇತ್ತು. ಮನಸ್ಸು ಮಾಡಿದ್ದರೆ ಸರ್ಕಾರವು ಈ ಕೆಲಸವನ್ನು ಸುಲಭವಾಗಿ ಮಾಡಬಹುದಿತ್ತು. ಆದರೆ ಕುವೆಂಪು ಹೇಳಿದಂತೆ ಸರ್ಕಾರದ ಗಮನವೆಲ್ಲಾ ಪಾಶ್ಚಾತ್ಯ ದೇಶಗಳ ಅಧಿಕ ಇಳುವರಿ ಕೊಡುವ ತಳಿಗಳು ಹಾಗೂ ಆಧುನಿಕ ಕೃಷಿ ಪದ್ಧತಿಯ ಕಡೆಗೇ ಇದ್ದಿತು. ಅಲ್ಲಿಂದ ಬಂದಿದ್ದೇ ಶ್ರೇಷ್ಠ ಎಂಬ ಮನೋಭಾವ.

ಮೊದಲು ಗಿಡ್ಡ ಗೋಧಿ ತಳಿಯೊಂದಿಗೆ ಆರಂಭವಾದ ಹೈಬ್ರಿಡ್ ತಳಿಗಳ ಪ್ರವೇಶ ನಂತರ ಭತ್ತ, ತರಕಾರಿ, ಜೋಳ, ಸಜ್ಜೆ ಮುಂತಾದ ಎಲ್ಲಾ ಬೆಳೆಗಳಿಗೂ ವ್ಯಾಪಿಸಿತು. ಈ ತಳಿಗಳ ಗುಣವೆಂದರೆ ಅವು ತಾನೇ ತಾನಾಗಿ ಹೆಚ್ಚು ಇಳುವರಿ ನೀಡುವುದಿಲ್ಲ. ಹೆಚ್ಚು ನೀರು, ಹೆಚ್ಚು ರಸಗೊಬ್ಬರ ಹಾಗೂ ರಸವಿಷಗಳನ್ನು ಸಕಾಲಕ್ಕೆ ಕೊಟ್ಟರೆ ಮಾತ್ರ ಪರಿಣಾಮಕಾರಿ. ಹಾಗಾಗಿ ರೈತರು ಕೇವಲ ಹೊಸ ತಳಿ ಬೀಜ ತಂದರೆ ಸಾಕಾಗುತ್ತಿರಲಿಲ್ಲ, ಜೊತೆಗೆ ಉಳಿದೆಲ್ಲವನ್ನೂ ಖರೀದಿಸಲೇಬೇಕಿತ್ತು. ಈ ಸುಳಿಯಲ್ಲಿ ನಮ್ಮ ರೈತರು ಸುಲಭವಾಗಿ ಸಿಕ್ಕಿಕೊಂಡರು.

ಮತ್ತೊಂದು ಬಿಕ್ಕಟ್ಟು ಬೆಳೆ ವೈವಿಧ್ಯತೆಯ ನಾಶ.

ಒಂದೇ ತಾಕಿನಲ್ಲಿ ಹತ್ತಾರು ಬೆಳೆಗಳನ್ನು ಹಾಕುತ್ತಿದ್ದ ಶ್ರಮಾಧಾರಿತ ನಮ್ಮ ಕೃಷಿ ಪದ್ಧತಿಯ ಜಾಗದಲ್ಲಿ ಏಕಬೆಳೆಗಳು ವ್ಯಾಪಿಸಿದವು. ಇದು ಮತ್ತೊಂದು ಸಮಸ್ಯೆಗೆ ಮೂಲ. ಬಹುಬೆಳೆ ಅಥವಾ ಅಕ್ಕಡಿ ಬೆಳೆ ಹಾಕುತ್ತಿದ್ದಾಗ ಕೃಷಿ ಕುಟುಂಬಗಳು ಬಹುತೇಕ ಸ್ವಾವಲಂಬಿಯಾಗಿದ್ದವು. ಅಕ್ಕಿ, ರಾಗಿ, ಬೇಳೆಗಳು, ಎಣ್ಣೆ, ಮಸಾಲೆ ಪದಾರ್ಥಗಳು, ಹಣ್ಣುಗಳು, ತರಕಾರಿ, ಸೊಪ್ಪು, ಜಾನುವಾರುಗಳಿಗೆ ಹಸಿ ಮತ್ತು ಒಣ ಮೇವು ಇತ್ಯಾದಿ ಎಲ್ಲವೂ ಪೂರೈಸುತ್ತಿದ್ದ ಹೊಲವು ಬರೀ ರಾಗಿ ಅಥವಾ ಭತ್ತ ಅಥವಾ ಮೆಕ್ಕೆಜೋಳ ಇಲ್ಲವೇ ಕಬ್ಬು ಇಂತಹ ಒಂದೇ ಬೆಳೆಗೆ ಸೀಮಿತವಾಯಿತು. ಮೊದ-ಮೊದಲು ದೊಡ್ಡ ರಾಶಿಗಳು ಬಿದ್ದವು. ರೈತರಿಗೂ ಖುಷಿ. ಆದರೆ ಯಾವಾಗ "ಅಜ್ಜಿ ನೂತಿದ್ದೆಲ್ಲಾ ಅಜ್ಜನ ಉಡುದಾರಕ್ಕೆ" ಎಂಬಂತಾಯಿತೋ-ಅಂದರೆ ಅಕ್ಕಿ ಅಥವಾ ರಾಗಿ ಒಂದನ್ನು ಬಿಟ್ಟು ಮಿಕ್ಕಿದ್ದೆಲ್ಲವನ್ನೂ ಕೊಳ್ಳಬೇಕಾದಾಗ ಕೈಸಾಲ ಮಾಡಬೇಕಾದ ಸ್ಥಿತಿ.

ಇಷ್ಟೆಲ್ಲಾ ಆಗುವ ಹೊತ್ತಿಗೆ ದಶಕಗಳ ಕಾಲ ರಸವಿಷಗಳನ್ನು ಉಂಡ ಮಣ್ಣು ಮತ್ತು ಆ ಆಹಾರವನ್ನು ತಿಂದ ಮನುಷ್ಯರ ದೇಹಗಳು ರೋಗಗಳ ಗೂಡಾದವು. ಬರೆದರೆ ಅದೇ ಮತ್ತೊಂದು ವೃತ್ತಾಂತ.

ಈ ಏಕಬೆಳೆ ಮತ್ತು ಅಕ್ಕಡಿ ಬೇಸಾಯದ ಬಗ್ಗೆ, ಅದರಿಂದ ಬರುವ ನಿವ್ವಳ ಮತ್ತು ಒಟ್ಟು ಆದಾಯದ ಬಗ್ಗೆ ಹಲವು ರೈತರ ಜೊತೆ ಮಾತಾಡಿದ್ದೇನೆ, ಪ್ರಾತ್ಯಕ್ಷಿಕೆಗಳನ್ನು ಮಾಡಿದ್ದೇನೆ, ಸ್ವತಃ ನಮ್ಮ ಜಮೀನಿನಲ್ಲಿಯೂ ಪ್ರತ್ಯಕ್ಷ ಕಂಡಿದ್ದೇನೆ. ಈ ಅನುಭವದ ಆಧಾರದ ಮೇಲೆ ಒಂದು ಎಕರೆ ರಾಗಿಯ ಉದಾಹರಣೆಯನ್ನು ನೀಡುತ್ತೇನೆ.

ಒಂದು ಎಕರೆಯಲ್ಲಿ ಕೇವಲ ರಾಗಿಯನ್ನಷ್ಟೇ ಏಕ ಬೆಳೆಯಾಗಿ ಬಿತ್ತಿದರೆ ಅಂದಾಜು ೧೦ ಕ್ವಿಂಟಾಲ್ ಇಳುವರಿ ಬರುತ್ತದೆ. ಆದರೆ ಅದೇ ಒಂದು ಎಕರೆಯಲ್ಲಿ ರಾಗಿಯೊಂದಿಗೆ ನಮ್ಮ ಪೂರ್ವಿಕರು ಹಾಕುವಂತೆ ಅಕ್ಕಡಿ ಬೆಳೆ ಹಾಕಿದರೆ-ಅರ್ಥಾತ್ ರಾಗಿ ಮುಖ್ಯ ಬೆಳೆಯಾಗಿ ಹಾಕಿ ೬ ಅಥವಾ ೮ ಸಾಲಿಗೊಂದು ಸಾಲಿನಂತೆ ಅವರೆ, ಅಲಸಂದೆ, ಜೋಳ, ತೊಗರಿಗಳನ್ನು ಬಿತ್ತಿ, ಬದುಗಳ ಪಕ್ಕ ಹುರುಳಿ, ಹುಚ್ಚೆಳ್ಳು, ಹರಳು ಬಿತ್ತಿ, ರಾಗಿಯೊಂದಿಗೆ ಒಂದು ಹಿಡಿ ಸಾಸಿವೆ ಮಿಶ್ರ ಮಾಡಿ ಹಾಕಿದರೆ, ೭ ಕ್ವಿಂಟಾಲ್ ರಾಗಿ, ತಲಾ ೫೦ ಸೇರು ಅವರೆ, ಅಲಸಂದೆ, ಜೋಳ, ತೊಗರಿ, ಹುರುಳಿ ಮತ್ತು ಹರಳು ಇಳುವರಿ ಸಿಗುತ್ತದೆ. ಹಾಗೆಯೇ ೧೦ ಸೇರು ಹುಚ್ಚೆಳ್ಳು ಮತ್ತು ೫ ಸೇರಿನಷ್ಟು ಸಾಸಿವೆಯೂ ಸಿಗುತ್ತದೆ.

ಏಕಬೆಳೆ ತಾಕಿನಲ್ಲಿ ಬಂದ ೧೦ ಕ್ವಿಂಟಾಲ್‌ಗೆ ತಲಾ ೩ ಸಾವಿರದಂತೆ ೩೦ ಸಾವಿರ ರುಪಾಯಿ ಆದಾಯ ಬರುತ್ತದೆ. ಅದೇ ಅಕ್ಕಡಿ ಬೆಳೆಯಲ್ಲಿ ರಾಗಿಗೆ ೨೧ ಸಾವಿರ, ಇತರೆ ಎಲ್ಲಾ ಬೆಳೆಗಳಿಗೂ ಸರಾಸರಿ ಒಂದೂವರೆ ಸಾವಿರದಂತೆ ೧೨ ಸಾವಿರ ಆದಾಯ ಬರುತ್ತದೆ. ಅಂದರೆ ಒಟ್ಟು ೩೩ ಸಾವಿರ ಆಯಿತು. ಇಲ್ಲಿ ನಾನು ಖರ್ಚಿನ ಸುದ್ದಿಗೆ ಹೋಗಿಲ್ಲ. ಮಿಶ್ರಬೆಳೆಯಲ್ಲಿ ಸಿಗಬಹುದಾದ ವಿವಿಧ ರೀತಿಯ ಮೇವನ್ನೂ ಸಹ ಲೆಕ್ಕ ಹಾಕಿಲ್ಲ. ಅದನ್ನೂ ಲೆಕ್ಕ ಹಿಡಿದರೆ ಅಕ್ಕಡಿ ಬೇಸಾಯದಲ್ಲಿ ಇನ್ನೂ ಎರಡು ಸಾವಿರ ಹೆಚ್ಚೇ ಆದಾಯ ಸಿಗುತ್ತದೆ.

ಈಗ ಹೇಳಿ ಏಕಬೆಳೆ ಎಂಬ ಬರೀ ಮಾತಿನ, ಜಾಹೀರಾತಿನ ಮಾಯಾಜಾಲದಲ್ಲಿ ನಾವು ಕಳೆದುಕೊಂಡಿದೆಷ್ಟು. ೧೦ ಕ್ವಿಂಟಾಲಿನ ಒಂದೇ ದೊಡ್ಡ ರಾಶಿಯನ್ನು ನೋಡಿ ಮೋಸ ಹೋದೆವು ಅಥವಾ ಮೋಸ ಮಾಡಲಾಯಿತು. ಅದೇ ಸಮಯಕ್ಕೆ ಸುಮಾರು ಎತ್ತರದ ರಾಗಿ ರಾಶಿ ಪಕ್ಕದಲ್ಲಿದ್ದ ಹತ್ತಾರು ಸಣ್ಣ-ಸಣ್ಣ ರಾಶಿಗಳನ್ನು ಹಾಗೂ ಅವುಗಳು ಕೊಡುತ್ತಿದ್ದ ಆಹಾರ ಭದ್ರತೆ, ಪೌಷ್ಟಿಕತೆ, ಸ್ವಾವಲಂಬನೆ ಹಾಗೂ ಮಣ್ಣಿನ ಫಲವತ್ತತೆಯನ್ನು ಸಾರಾಸಗಟು ಮರೆಮಾಚಲಾಯಿತು.

ಅರ್ಥಶಾಸ್ತ್ರಜ್ಞರು ಮತ್ತು ರಾಜಕೀಯ ವಕ್ತಾರರು ಹಾಗೂ ಅವರ ಮಾತುಗಳನ್ನೇ ಬಿತ್ತರಿಸುವ ಅಧಿಕಾರಶಾಹಿಯು ನೀಡುವ ಅಂಕಿ-ಅಂಶಗಳು ಎಂಥಾ ಪೊಳ್ಳು ಎಂದರೆ, ಇದನ್ನು ಸರಳವಾಗಿ ಅರ್ಥ ಮಾಡಿಸುವ ಒಂದು ಝಲಕ್ ನೋಡಿ.

ತಮ್ಮದೇ ಆದ ದೇಸೀ ವಿಧಾನದಲ್ಲಿ ೫ ರುಪಾಯಿ ಖರ್ಚು ಮಾಡಿ ೭ ರುಪಾಯಿ ಆದಾಯ ಪಡೆಯುತ್ತಿದ್ದರು ನಮ್ಮ ರೈತರು. ಅವರಿಗೆ ಆಧುನಿಕ ಕೃಷಿಯನ್ನು ಪರಿಚಯಿಸಲಾಯಿತು. ಆಗ ಅವರ ಆದಾಯ ೧೦ ರುಪಾಯಿಗಳಿಗೇರಿತು. ಅಂದರೆ ಶೇಕಡ ೩೦ರಷ್ಟು ಹೆಚ್ಚಳ. ಇದನ್ನೇ ಎಲ್ಲರೂ ದೊಡ್ಡ ಸಾಧನೆ ಎಂಬಂತೆ ಬಿಂಬಿಸಿಬಿಟ್ಟರು. ಅದೇ ಸಮಯಕ್ಕೆ ಆ ರೈತರ ಖರ್ಚು ೯ ರುಪಾಯಿ ಆಗಿತ್ತು. ಅದರ ಬಗ್ಗೆ ಯಾರೂ ಮಾತಾಡಲಿಲ್ಲ. ಈ ೪ ರುಪಾಯಿ ಹೆಚ್ಚುವರಿ ಖರ್ಚು ಹೊಂದಿಸಲು ಆತ ಸಾಲದ ದಾರಿ ಹಿಡಿಯಬೇಕಾಯಿತು. ೨ ರುಪಾಯಿ ನಿವ್ವಳ ಲಾಭ ಬರುವ ಕಡೆ ಒಂದು ರುಪಾಯಿಗಿಳಿದಿದ್ದನ್ನೂ ಹಾಗೇ ಮುಚ್ಚಿ ಹಾಕಿದೆವು.

ನಮ್ಮ ಕೃಷಿ ಚರಿತ್ರೆಯನ್ನು ಒಮ್ಮೆ ಅವಲೋಕಿಸಿದರೆ ಮೇಲಿನ ಲೆಕ್ಕಾಚಾರ ಇನ್ನಷ್ಟು ಸ್ಪಷ್ಟವಾಗುತ್ತದೆ.

ಗುಹೆಗಳಲ್ಲಿ ವಾಸಿಸುತ್ತಾ ಬೇಟೆಯಾಡುತ್ತಿದ್ದ ಮನುಷ್ಯ ಬೀಜಗಳನ್ನು ಬಿತ್ತಿ ಬೆಳೆದು ಕುಟ್ಟಿ ಬೀಸಿ ತಿನ್ನಲು ಶುರು ಮಾಡಿದ್ದು ಸುಮಾರು ೧೦ ಸಾವಿರ ವರ್ಷಗಳ ಹಿಂದೆ. ಹಾಗೆ ವಿಕಾಸವಾಗುತ್ತಾ ಆಯಾ ಪ್ರದೇಶ, ವಾತಾವರಣಕ್ಕನುಗುಣವಾಗಿ ಬೆಳೆಗಳು, ತಳಿಗಳು, ಬೆಳೆ ವಿಧಾನಗಳು, ಆಹಾರ ಪದ್ಧತಿಗಳು ಬಳಕೆಗೆ ಬಂದವು. ೧೯೬೦ರ ಹಸಿರುಕ್ರಾಂತಿವರೆಗೂ ಇದು ತುಸು ಹೆಚ್ಚು-ಕಡಿಮೆ ಒಂದೇ ರೀತಿ ನಡೆಯುತ್ತಿತ್ತು. ೬೦ರ ದಶಕದಲ್ಲಿ ಆಧುನಿಕ ಕೃಷಿ ಕಾಲಿಟ್ಟಿತು, ಯಂತ್ರಗಳು ಬಂದವು. ೧೯೮೦ರಲ್ಲಿ ಕೊಳವೆಬಾವಿಗಳ ಸದ್ದು ಶುರುವಾಯಿತು. ೧೯೯೦ರ ಆಸು-ಪಾಸು ಜಾಗತೀಕರಣ, ಖಾಸಗೀಕರಣ ಹಾಗೂ ಮುಕ್ತ ಮಾರುಕಟ್ಟೆ ಬಂದಿತು. ೯೦ರ ದಶಕದ ಕೊನೆಯಲ್ಲಿ ರೈತರ ಆತ್ಮಹತ್ಯೆಗಳು ಆರಂಭವಾದವು.


ಈವತ್ತಿನ ಇಡೀ ಕೃಷಿ ಬಿಕ್ಕಟ್ಟಿನ ಮೂಲ ಬೇರುಗಳು ಇಲ್ಲಿನ ಈ ಕ್ರೋನಾಲಜಿಯಲ್ಲಿವೆ. ಇದಕ್ಕೆ ಸರ್ಕಾರ ಎಷ್ಟು ಕಾರಣವೋ, ನಮ್ಮ ರೈತರೂ ಅಷ್ಟೇ ಕಾರಣ. ಅವರ ವಿಪರೀತ ಸರ್ಕಾರದ ಮೇಲಿನ ಅವಲಂಬನೆ, ಸ್ವಾಭಿಮಾನದ ಪೊರೆ ಕಳಚಿ ದೇಹೀ ಗುಣ ಬೆಳೆಸಿಕೊಂಡಿದ್ದು, ಯೋಜನಾಬದ್ಧವಲ್ಲದ ಕೃಷಿ, ಗೊತ್ತು ಗುರಿ ಇಲ್ಲದ ಬೆಳೆ ಅನುಕರಣೆ, ಬದಲಾವಣೆಗಳನ್ನು ಗ್ರಹಿಸದ ಹಾಗೂ ಬೇಗ ಒಗ್ಗಿಕೊಳ್ಳದ ಗುಣ ಈ ಬಿಕ್ಕಟ್ಟುಗಳನ್ನು ಮತ್ತಷ್ಟು ಹೆಚ್ಚಿಸಿವೆ. ಮೊದಲು ನಾವು ಅವರಿಗೆ ತೊಡಿಸಿರುವ ಬೆನ್ನೆಲುಬು, ನೇಗಿಲಯೋಗಿ, ಅನ್ನದಾತ ಎಂಬಿತ್ಯಾದಿ ಭಾವನಾತ್ಮಕ ಹಾಗೂ ಬಾಯುಪಚಾರದ ಕಿರೀಟಗಳನ್ನು ಕಳಚಬೇಕಿದೆ.

ಹಾಗಾದರೆ ಪರ್ಯಾಯಗಳೇನು?

ಕೃಷಿ ವೆಚ್ಚ ತಗ್ಗಿಸುವುದೇ ತಕ್ಷಣಕ್ಕೆ ಕಾಣುತ್ತಿರುವ ಹಾಗೂ ಸಾಧ್ಯವಾಗಬಹುದಾದ ಪರ್ಯಾಯ ಎಂದೆನಿಸುತ್ತದೆ. ಮಧ್ಯವರ್ತಿಗಳನ್ನು ದೂರವಿಡುವುದು, ಕನಿಷ್ಠ ಬೆಂಬಲ ಬೆಲೆ ಕೊಡುವುದು, ಸಾಲ ಮನ್ನಾ, ರೈತರ ಅಕೌಂಟಿಗೆ ವರ್ಷಕ್ಕೆ ಇಂತಿಷ್ಟು ಹಣ ಜಮಾವಣೆ, ನೇರ ಮಾರಾಟ ಮುಂತಾದುವೆಲ್ಲಾ ಆಗದಹೋಗದ ಭಾಷಣದ ಭರವಸೆಗಳೇ ಆಗಿವೆ. ಅವು ಸ್ವಲ್ಪ ಮಟ್ಟಿಗೆ ನೆರವಾಗಬಹುದು. ಆದರೆ ಮೂಲ ಸಮಸ್ಯೆ ಹಾಗೇ ಇರುತ್ತದೆ. ಅದಕ್ಕಾಗಿ ರೈತರು ತಾವು ಹೆಚ್ಚು ಖರ್ಚು ಮಾಡುವ ಬಾಬ್ತುಗಳಾದ ಬೀಜ, ರಸಗೊಬ್ಬರ, ಕೀಟ/ರೋಗ/ಕಳೆ ನಾಶಕಗಳು, ಕೊಳವೆಬಾವಿ ತೆಗೆಸುವುದು, ಪಕ್ಕದವರೊಂದಿಗೆ ಸ್ಪರ್ಧೆಗೆ ಬಿದ್ದು ಮಾಡುವ ಕೌಟುಂಬಿಕ ವೆಚ್ಚಗಳನ್ನು ಕಡಿಮೆ ಮಾಡಿಕೊಳ್ಳುವುದು ಮುಂತಾದ ಕ್ರಮಗಳು ಈ ಬಿಕ್ಕಟ್ಟುಗಳಿಂದ ಹೊರಬರುವ ಪರಿಣಾಮಕಾರಿ ಮಾರ್ಗ ಎನಿಸುತ್ತದೆ.

ಅಲ್ಲದೆ ರಸಗೊಬ್ಬರದಷ್ಟೇ ಸಾರಯುಕ್ತವಾದ ಎರೆಗೊಬ್ಬರ, ಜೀವಾಮೃತದಂತಹ ಸರಳ ಉಪಾಯಗಳಿವೆ. ಕೀಟ ನಿಯಂತ್ರಣಕ್ಕೆ ಬೇವಿನ ಬೀಜದ ಕಷಾಯದಂತಹ ಖಚಿತ ಪರಿಹಾರಗಳಿವೆ. ಬೀಜದಿಂದ ಬರುವ ರೋಗಗಳನ್ನು ತಡೆಗಟ್ಟಲು ಉಪ್ಪಿನ ದ್ರಾವಣ ಅಥವಾ ಗಂಜಲ ಮಿಶ್ರಿತ ನೀರಿನಲ್ಲಿ ಬೀಜ ನೆನೆಸುವಂತಹ ಸರಳಾತಿಸರಳ ವಿಧಾನಗಳಿವೆ. ಹುಡುಕುತ್ತಾ ಹೋದರೆ ಇಂತಹ ನೂರಾರು ವಿಧಾನಗಳಿವೆ. ನಂಬಿಕೆಯಿಟ್ಟು ಬಳಸಬೇಕಷ್ಟೇ. ಇವನ್ನು ಬಳಸದಿರುವುದಕ್ಕೆ ಯಾವುದೇ ಸಬೂಬುಗಳಿಲ್ಲ. ಯಾವ ಸರ್ಕಾರದ ನೆರವೂ ಬೇಕಿಲ್ಲ.

***(೧೬ ಮತ್ತು ೧೭ನೇ ನವಂಬರ್ ೨೦೧೯ರಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದೊಂದಿಗೆ ನಡೆದಿದ್ದ 'ಪರ್ಯಾಯ ಅಭಿವೃದ್ಧಿ ಮಾದರಿ' ಕುರಿತ ಕಾರ್ಯಾಗಾರದಲ್ಲಿ ಮಂಡಿಸಿದ ವಿಚಾರ ಗುಚ್ಛ)***



**(ತುಮಕೂರಿನ ಮಲ್ಲಿಕಾರ್ಜುನ ಹೊಸಪಾಳ್ಯ ಪತ್ರಿಕಾವೃತ್ತಿಯ ಶಿಕ್ಷಣ ಪಡೆದಿದ್ದರೂ, ಲೋಕಾನುಭವದ ಮೂಲಕ ಜಲತಜ್ಞರೆಂದು ಹೆಸರಾಗಿದ್ದು ಸದ್ಯ ಹೊಸಪೇಟೆಯಲ್ಲಿ ಬ್ಯಾಂಕೊಂದಕ್ಕೆ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಲಹಾಕಾರರಾಗಿದ್ದಾರೆ)**

ಒಂದು ಪ್ರಬಂಧ

# ಇಲ್ಲದ ನದಿಯ ಹುಡುಕುತ್ತಾ, ಏನೇನೋ ನೆನೆಯುತ್ತಾ...

–ಜಿ ವಿ ಆನಂದಮೂರ್ತಿ

**'ನದಿಯೊಂದರ ಉಳಿವು ಮನುಷ್ಯ ನಾಗರಿಕತೆಯ ಅಸ್ಮಿತೆಯ ಆಕರ. ಹರಿಯುವ ನದಿಯ ನಾಶ ಎಂದರೆ, ಅದು ಜೀವಜಾಲ ಸರಪಳಿಯ ಒಂದು ಕೊಂಡಿಯ ನಾಶ. ಅಲ್ಲಿಗೆ ಈ ಕೊಂಡಿಯನ್ನು ಅವಲಂಬಿಸಿರುವ ಸಾವಿರಾರು ಜೀವಿಗಳು ಜಗತ್ತಿನಿಂದ ಕಣ್ಮರೆಯಾಗುತ್ತವೆ. ಭವಿಷ್ಯದ ಜನಾಂಗಕ್ಕೆ ನೀರು ಎನ್ನುವುದೇ ಆಚರಿಸಿ, ಆರಾಧಿಸಿ ಅನುಭವಿಸಬೇಕಾದ ಪವಿತ್ರ ಧರ್ಮವಾಗಿಬಿಡುತ್ತದೆ. ಈ ಮಣ್ಣಿನ ಮನೋಲೋಕವನ್ನು ಬಲ್ಲವರು ಜೀವಜಗತ್ತಿಗೆ ಉಸುರಿನಷ್ಟೇ ಅಗತ್ಯವಾದ ಜಲದ ಪ್ರಾಮುಖ್ಯತೆಯನ್ನು ಕುರಿತು ಇಂದಿನ ವಿವೇಕಹೀನ ಸಮಾಜಕ್ಕೆ ಮತ್ತೆ ಮತ್ತೆ ಹೇಳುವಂತಾಗಿದೆ.'**



ಚಿತ್ರ: ಗುಜ್ಜಾರ್

**ದೊ**ಡ್ಡದೋ ಅಥವಾ ಚಿಕ್ಕದೋ ಇರಬಹುದು! ಪ್ರತಿಯೊಂದು ಕೆರೆಯೂ ತನ್ನನ್ನು ಪೋಷಿಸಿದ ಹಳ್ಳಿಯೊಂದಿಗೆ ಕರುಳುಬಳ್ಳಿಯ ಸಂಬಂಧ ಹೊಂದಿರುತ್ತದೆ. ಕೆರೆ ಬಯಲಿನಲ್ಲಿರುವ ಗದ್ದೆಗಳು, ಎಲೆಯಂಬು, ಅಡಕೆ ತೋಟ, ಕಪಿಲೆ ಬಾವಿ ಹಾಗೂ ಹೂವಿನ ತೋಟಗಳು ನಮ್ಮ ಭಾಗದಲ್ಲಿ ಕಂಡುಬರುವ ಸಾಮಾನ್ಯ ಚಿತ್ರಗಳು. ಕೆರೆ ಕೋಡಿ ಬಿದ್ದಾಗ ಹಳ್ಳಿಯವರೆಲ್ಲಾ ಸೇರಿ ಮಾಡುವ ಸಾಮೂಹಿಕ ಆಚರಣೆ 'ಕೋಡಿ ಪೂಜೆ', ಹರಕೆ ಹೊತ್ತ ಕುಟುಂಬದವರು ಕೆರೆಯಲ್ಲಿ 'ಗಂಗಮ್ಮ'ನನ್ನು ಪೂಜಿಸುವುದು, ಕೆರೆಯಿಂದ ಗಡಿಗೆಯಲ್ಲಿ ಗಂಗಮ್ಮನನ್ನು ತರುವ ಶಾಸ್ತ್ರದೊಂದಿಗೆ ಆರಂಭವಾಗುವ ಮದುವೆಯ ಮಂಗಳ ಕಾರ್ಯಗಳು... ಹೀಗೆ ಕೆರೆ ಸಂಬಂಧಿಯಾದ ಕೆಲವು ಆಚರಣೆಗಳು ನಮ್ಮ ಭಾಗದಲ್ಲಿ ಈಗಲೂ ಉಳಿದುಬಂದಿವೆ. ಮಳೆಗಾಲದಲ್ಲಿ ನಮ್ಮ ನೆರೆಹೊರೆಯ ಹಳ್ಳಿಯ ರೈತರು ಪರಸ್ಪರ ಭೇಟಿಯಾದಾಗ 'ಮೊನ್ನೆ ಮಳೆಯಾಯಿತಂತೆ! ಕೆರೆಗೆ ನೀರು ಬಂತೆ?', 'ರಾತ್ರಿ ಮಳೆಬಂದು ಅರಗೆರೆ ಆಗ್ಯೈತೆ', 'ಕೆರೆ ಕೋಡಿಬಿತ್ತಾ?', 'ಮಳೆ ಬಂದು ದನ–ಕರುಗಳಿಗೆ ಮೂರು ತಿಂಗಳಿಗೆ ಆಗೋವಷ್ಟು ನೀರು ಬಂದೋ'... ಕೆರೆಗಳನ್ನೇ ಕೇಂದ್ರಮಾಡಿಕೊಂಡ ಇಂತಹ ಮಾತುಗಳಿಂದಲೇ ನಮ್ಮ ಜನರ ದೈನಂದಿನ ಮಾತುಕತೆಗಳು ಆರಂಭವಾಗುತ್ತಿದ್ದವು. ಹೀಗೆ ಕೆರೆಗಳು ನಮ್ಮ ಉಸಿರಾಟದೊಂದಿಗೆ ಬೆರೆತುಹೋಗಿವೆ. ನದಿಯ ಮುಖವನ್ನೇ ಕಂಡರಿಯದ ನಮ್ಮ ಪಾಲಿಗೆ ಕೆರೆಗಳೇ ದೈವ.

ಗತದ ದಿನಗಳಲ್ಲಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತಿದ್ದ ನದಿಗಳೂ ಇದ್ದವು. ನಮ್ಮ ಕಿವಿಗೆ ಆಗಾಗ್ಗೆ ತಾಕುತ್ತಿದ್ದ ಎರಡು ನದಿಗಳ ಹೆಸರೆಂದರೆ, ದೇವರಾಯನ ದುರ್ಗದ ಬೆಟ್ಟದ ಜೋಪಲಿನಲ್ಲಿ ಹುಟ್ಟಿ ಹಲವಾರು ಹಳ್ಳಿಗಳನ್ನು ದಾಟಿಕೊಂಡು, ಕೆಲವಾರು ಕೆರೆಗಳನ್ನು ತೋಯಿಸಿ ಪಶ್ಚಿಮ ಮುಖದೆಡೆಗೆ ಹರಿಯುತ್ತಿದ್ದ 'ಜಯಮಂಗಲಿ' ನದಿ. ಇನ್ನೊಂದು ಕೊರಟಗೆರೆಯ ಪ್ರಸಿದ್ಧವಾದ ಸಿದ್ದರಬೆಟ್ಟದ ತಪ್ಪಲಿನ ಕುರಂಕೋಟೆಯಲ್ಲಿ ಹುಟ್ಟಿ ಪೂರ್ವಭಾಗಕ್ಕೆ ಮತ್ತು ಪಶ್ಚಿಮ ದಿಕ್ಕಿಗೊಂದು ಹೀಗೆ ಎರಡು ಕವಲುಗಳಾಗಿ ಹರಿಯುತ್ತಿದ್ದ 'ಸುವರ್ಣಮುಖಿ' ನದಿ. ಈ ಅಕ್ಕತಂಗಿಯರಿಬ್ಬರೂ ಕೃಷ್ಣಾ ನದಿಯ ಕಿರು ಸೋದರಿಯರು.

ಈ ಎರಡೂ ನದಿಗಳು ಮಳೆಗಾಲವನ್ನು ದಾಟಿ ಸಣ್ಣಗೆ ಬಾಗುತ್ತಾ ಹರಿಯುತ್ತಿದ್ದ ದಿನಗಳನ್ನು ತಮ್ಮ ಬಾಲ್ಯದ ಕಣ್ಣುಗಳಲ್ಲಿ ಕಂಡವರು ಇಂದಿಗೂ ಇದ್ದಾರೆ. 'ಸುವರ್ಣಮುಖಿ' ನದಿ ಹರಿಯುತ್ತಿದ್ದುದನ್ನು ಈಗಲೂ ತಮ್ಮ ಕಣ್ಣುಗಳಲ್ಲಿ ತುಂಬಿಕೊಂಡಿದ್ದ ಹೊಲತಾಳು ಗ್ರಾಮಕ್ಕೆ ತಾಗಿಕೊಂಡೇ ಇದ್ದ 'ಸೂಳೆ ಕಲ್ಲು ಬೆಟ್ಟ'ದ ಬುಡದಲ್ಲಿ, ಕೊಂಬೆಗೆ ಕೊಂಬೆ, ರೆಂಬೆಗೆ ರೆಂಬೆಯಂತೆ ಎತ್ತರಕ್ಕೆ ಬೆಳೆದು ನಿಂತಿದ್ದ ಆ ಭಾಗದ ಹಿರಿಯನಂತೆ ಕಂಡ ಜಾಲಾರ ಮರವೊಂದನ್ನು ಮಾತನಾಡಿಸಿದೆ. 'ಇದೇ ಸುವರ್ಣಮುಖಿ' ನದಿಯ ದಡದಲ್ಲೆ ನಾನು ಹುಟ್ಟಿ ಬೆಳೆದಿದ್ದು. ನನ್ನ ಅಸಂಖ್ಯ ಒಡಹುಟ್ಟಿಲ್ಲಾ ಈ ನದಿಯ ಪಾತ್ರದಲ್ಲೇ ಇತ್ತು. ಈ ಹೊಳೆಯಿಂದಾಗಿ ನಮ್ಮ ಸುತ್ತಲಿನ ಕಾಡು, ಕುರಂಕೋಟೆ, ಹೊಲತಾಳು, ಅಮ್ಮನ ಬೆಟ್ಟ, ಬಿಕ್ಕೆಗುಟ್ಟೆ ಎಲ್ಲವೂ ಹಸುರಿನಿಂದ ಕಂಗೊಳಿಸುತ್ತಿತ್ತು. ನಮ್ಮ ಆಸುಪಾಸಿನಲ್ಲೇ ಮೈತಳೆದಿದ್ದ ತೋಟಗಳು, ಗಿಡ್ಡಣ್ಣಪ್ಪನ ಕಲ್ಯಾಣಿ. ಕೆರೆ–ಕಟ್ಟೆಗಳು ಎಂತಹ ಬೇಸಗೆಯಲ್ಲೂ ಒಣಗುತ್ತಿರಲಿಲ್ಲ! ಎಲ್ಲರನ್ನೂ ತಬ್ಬಿಕೊಂಡಿದ್ದ ನಮ್ಮ ಭಾಗದ ಏಕೈಕ ನದಿ 'ಸುವರ್ಣಮುಖಿ' ಹರಿಯುವುದನ್ನು ನಿಲ್ಲಿಸಿ ಈಗ್ಗೆ ಸುಮಾರು ನಲ್ವತ್ತು ವರ್ಷಗಳ ಮೇಲಾಯಿತು! ಈಗ ನಮಗೆಲ್ಲಾ ಹಿರಿಕನಂತಿದ್ದ ನದಿಯೂ ಇಲ್ಲ! ಅದು ಹರಿಯುತ್ತಿದ್ದ ಜಾಡೂ ಇಲ್ಲ! ಇದರಿಂದಾಗಿ ನಮ್ಮ ಭಾಗದ ಕೆರೆ–ಕಟ್ಟೆಗಳೆಲ್ಲಾ ಒಡಬತ್ತಲಾದವು. ನನ್ನ ಕಣ್ಣೆದುರಿಗೇ ಇದ್ದ ಬಿಕ್ಕೆಗುಟ್ಟೆಯ ಬಂಡೆಗಳನ್ನು ಎಂಜಲು ಕಾಸಿಗೆ ಕೆಲವು ಕೇಡಿಗರು ಮರಳಿನ ಗುಡ್ಡೆಯಂತೆ ಕರಗಿಸಿದರು. ಇದರ ಬೆನ್ನಿಗೇ ನಮ್ಮ ಸಂತತಿಯೂ ಕಡಿಮೆಯಾಗುತ್ತಾ ಬಂದಿತು. ನದಿಯಿಲ್ಲದ ಈ ದುರ್ದಿನಗಳಲ್ಲಿ ಅಲ್ಲೊಬ್ಬರು; ಇಲ್ಲೊಬ್ಬರಂತೆ ನಾವು ಉಳಿದಿದ್ದೇವೆ. 'ಇನ್ನು ನಮ್ಮ ವಂಸ ನಮಗೇ ಕೊನೆಗೊಳ್ಳಬಹುದು ಅನಿಸಿದೆ!' ಎಂದು ಬಹುದೊಡ್ಡದನ್ನು ಕಳೆದುಕೊಳ್ಳುವ ರೀತಿಯಲ್ಲಿ ಮಾತನಾಡಿತು. ಅದರ ಮಾತಿನಲ್ಲಿ ನೋವಿತ್ತು, ವಿಷಾದವೂ ಇತ್ತು. ತಮ್ಮ ಕಣ್ಣಮುಂದೆಯೇ ಹರಿದ ನದಿಯನ್ನು ಇಲ್ಲವಾಗಿಸಿದ ಕಣ್ಣಿಗೆ ಕಾಣದ ಶತ್ರುವಿನ ಬಗ್ಗೆ ಅಸಹನೆಯೂ ಇತ್ತು! ಯಾರು ಕಣ್ಣಿಗೆ ಕಾಣದ ಆ ಶತ್ರು?

ಈ ಪ್ರಶ್ನೆ ಎಂದೋ ಕೇಳಿದ ಜನಪದ ತತ್ವಪದವೊಂದನ್ನು ನನ್ನ ಸ್ಮೃತಿಪಟಲಕ್ಕೆ ತಂದಿತು:

**ಹೊಸದೊಂದು ಮೀನು ಬಂದು**
**ಗಟಗಟನೆ ಕುಡಿದು ಕೆರೆಯ ಬಯಲು ಮಾಡಿತು!**
**ಏನು ಬೆರಗು ನೋಡು ಬಾರಯ್ಯಾ**

**ಆಕಾಶಕ್ಕೆ ಅಂಟಿದ್ದಲ್ಲ**
**ಅವನಿ ಮೇಲೆ ಇದ್ದುದ್ದಲ್ಲ**
**ನಟ್ಟ ನಡುವೆ ಇದ್ದದ್ದು ಏನಯ್ಯಾ**
**ಏನು ಬೆರಗು ನೋಡು ಬಾರಯ್ಯಾ.**

ಹೀಗೆ ಮಳೆಗಾಲದ ಒಂದು ದಿನ ನದಿಯೊಂದರ ಜಾಡು ಹುಡುಕುತ್ತಾ ಸಿದ್ದರಬೆಟ್ಟದ ಕಡೆಗೆ, ಕುತೂಹಲಭರಿತ ಪಯಣಿಗರಾಗಿ ನಾವು ನಡೆದೆವು. 'ನದಿ ಮೂಲ ಮತ್ತು ಋಷಿ ಮೂಲ ಹುಡುಕಬಾರದು!' ಎನ್ನುವ ಆರ್ಷೇಯ ವಾಣಿಯೊಂದಿದೆ. ಎರಡರ ಮೂಲವೂ ನಮ್ಮ ಪೂರ್ವನಿಗದಿತ ಪಾವಿತ್ರ್ಯದ ಕಲ್ಪನೆಗಳನ್ನು ಭಗ್ನಗೊಳಿಸುವಂತಹವು. ಆದ್ದರಿಂದ ಇವುಗಳ ಮೂಲವನ್ನು ಹಾಗೆಯೇ ಬಿಟ್ಟು; ಅವುಗಳಿಂದಾದ ಲೌಕಿಕ ಫಲಿತಗಳನ್ನು ಪಡೆಯುವುದೇ ವಾಸಿ ಎನ್ನುವ ವಿವೇಕವೊಂದು ಈ ಮಾತಿನ ಹಿನ್ನೆಲೆಯಲ್ಲಿದೆ ಎಂದು ಭಾವಿಸಲು ಸಾಧ್ಯವಿದೆ. ಹಾಗೆಯೇ 'ನದಿಗೆ ಸಾವಿಲ್ಲ' ಎನ್ನುವ ನಂಬಿಕೆಯ ಮಾತೂ ನಮ್ಮಲ್ಲಿದೆ. ನಂಬಿಕೆಗಳು ಇರಬೇಕೆನ್ನುವುದಾದರೆ, ಇಂತಹ ನಂಬಿಕೆಗಳೇ ನಮಗಿರಲಿ! ಹೌದು ಹೊರಲೋಕದಲ್ಲಿ ತಣ್ಣಗೆ ಹರಿಯುವ ನದಿಯೊಂದು, ಪ್ರೀತಿ, ಕರುಣೆ, ಔದಾರ್ಯದ ರೂಪದಲ್ಲಿ ನಮ್ಮೊಳಗೂ ಸದಾ ಹರಿಯುತ್ತಿರುತ್ತದೆ ಎನ್ನುವುದನ್ನು ಅಷ್ಟು ಲಘುವಾಗಿ ತಳ್ಳಿಹಾಕಲು ಸಾಧ್ಯವೆ? ಮಾನವನ ಕರ್ತೃತ್ವ ಶಕ್ತಿಯನ್ನು ಚಿಗುರುವಂತೆ ಮಾಡುವ ನದಿಯೊಂದನ್ನು ಕೇವಲ ಅದರ ಭೌತಿಕ ರೂಪವನ್ನು ಆಧರಿಸಿ ಬರಿ 'ನದಿ' ಎಂದು ಕರೆಯುವುದು ಅದರ ಬಹಮುಖಿ ಅರ್ಥಗಳಿಗೆ, ವಿಕಾಸಕ್ಕೆ, ಪೋಷಣೆಗೆ ಎಳೆದ ಮಿತಿಯಾಗುತ್ತದೆ. ಪಂಡಿತ ರಾಹುಲ ಸಾಂಕೃತ್ಯಾಯನ ಅವರು 'ವೋಲ್ಗಾ' ಮತ್ತು 'ಗಂಗಾ' ಎಂಬ ಎರಡು ನದಿಗಳ ದಡದಲ್ಲಿ ವಿಕಾಸಗೊಂಡ ಮಾನವನ ಚರಿತ್ರೆಯನ್ನು ತಮ್ಮ 'ವೋಲ್ಗಾ–ಗಂಗಾ' ಕೃತಿಯಲ್ಲಿ ನಿರೂಪಿಸಿರುವುದು ಈಗಾಗಲೇ ನಮ್ಮ ಕನ್ನಡದ ಓದಿನಲ್ಲಿದೆ. ಇದನ್ನು ನೆನಪಿಗೆ ತಂದುಕೊಂಡರೆ ಸಾಕು, ನದಿಗಳ ಮಹತ್ವ ನಮಗೆ ತಿಳಿಯುತ್ತದೆ.

ಬಹುದಿನಗಳಿಂದ ನನ್ನೊಳಗೇ ಕೊರೆಯುತ್ತಿದ್ದ ಕುತೂಹಲದಿಂದ ಸುವರ್ಣಮುಖಿ ನದಿ ಉಳಿಸಿಹೋದ ನೀರಮೇಲಿನ ಹೆಜ್ಜೆಗಳನ್ನು ನೋಡುವ ಸಲುವಾಗಿ ಆ ನದಿಯ ಮೂಲದತ್ತ ನನ್ನ ಗೆಳೆಯರೊಂದಿಗೆ ನಡೆದೆ. ಇದೊಂದು ಯಾತನಾಮಯ ಶೋಧನೆ. ಇಲ್ಲದ ನದಿಯ ಹುಡುಕುತ್ತಾ ಅದರ ಪರಂಪರೆಯೊಂದಿಗೆ, ವರ್ತಮಾನದ ಮಣ್ಣಿನೊಂದಿಗೆ ಸಂಬಂಧವನ್ನು ಮರು

ಬೆಸೆಯಲು ಸಾಧ್ಯವಾಗಬಹುದೇ? ಎನ್ನುವ ಸಣ್ಣ ಆಶಾವಾದದಿಂದ ಪ್ರೇರಿತರಾಗಿ ಪರಿಸರ ಸ್ನೇಹಿಯೂ, ಹೆಚ್ಚು ಸುರಕ್ಷಿತವೂ ಮತ್ತು ಚೇತೋಹಾರಿಯೂ ಆದ ನಡಿಗೆಯನ್ನೇ ನಾವು ಆಶ್ರಯಿಸಿದೆವು. ನನ್ನ ಜೊತೆಯಲ್ಲಿದ್ದ ಸ್ನೇಹಿತರೆಲ್ಲಾ ಕಣ್ಮರೆಯಾಗಿದ್ದ ನದಿಯ ಪುನರುತ್ಥಾನದ ಬಗ್ಗೆ ಕನಸು ಕಾಣತೊಡಗಿದರು. 'ನಾವು ಮಾಡಬೇಕಾದುದೆಲ್ಲಾ ಪ್ರಕೃತಿಗೆ ನೆರವಾಗಬೇಕಿರುವುದು' ಎಂದು ಹೇಳಿರುವ ಮಹರ್ಷಿ ಟಾಲ್‌ಸ್ಟಾಯ್ ಅವರ ಮಾತು ನಮ್ಮ ಕಣ್ಣುಗಳಿಗೆ ದಾರಿದೀಪವಾಗಿತ್ತು.

ನದಿ ನಡೆದ ದಾರಿಯನ್ನು ಹುಡುಕುತ್ತಾ ಹೊರಟಾಗ ನಮಗೆ ತಿಳಿದದ್ದು ಏನೆಂದರೆ; ನದಿಗಳು ನಾವು ಕಲ್ಪಿಸಿಕೊಂಡ, ನೋಡಿ ಕಣ್ಣುತುಂಬಿಕೊಂಡ ರೀತಿಯಲ್ಲಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂಬುದು. ಸಿದ್ದರಬೆಟ್ಟದ ತುದಿಯಿಂದ (ಇದಕ್ಕೆ 'ಸುವರ್ಣಗಿರಿ' ಎಂಬ ಇನ್ನೊಂದು ಹೆಸರೂ ಇದೆ) ಪೂರ್ವ ದಿಕ್ಕಿಗೆ ಹಾಗೂ ದಕ್ಷಿಣಕ್ಕೆ ನೂರಾರು ಕವಲುಗಳಾಗಿ ನೀರಿನ ಎಳೆಗಳು ಇಳಿಯುತ್ತವೆ. ಹೀಗೆ ದಕ್ಷಿಣಕ್ಕೆ ಇಳಿದ ನೀರಿನ ಜಾಡು ಸಿದಿಲುಗಳ (ಎರಡು ಬಂಡೆಗಳ ನಡುವಿನ ಜಾಗ) ನಡುವೆ ತಣ್ಣಗೆ ಹರಿಯುತ್ತಾ, ಮರ–ಗಿಡಗಳ ನಡುವೆ ಜಿನುಗುತ್ತಾ ಬೆಟ್ಟದ ತಪ್ಪಲಿನಲ್ಲಿ ಕೂಡಿಕೊಂಡು, ಹಳ್ಳವೊಂದರ ನಡುವೆ ಕಂಡೂ ಕಾಣದಂತಿರುವ ತಲಪುರಿಕೆಗೆ ಬಂದು ಸೇರಿಕೊಳ್ಳುತ್ತದೆ. ಮಣ್ಣಿನ ಹಳ್ಳದ ನಡುವೆ ಪ್ರಕೃತಿಯ ವರದಿಂದ ಹುಟ್ಟು ಪಡೆದಿದ್ದ ಆ ಪುಟ್ಟ ತಲಪುರಿಕೆಯನ್ನು ನಾವೆಲ್ಲಾ ಒಮ್ಮೆ ನೋಡಿದೆವು. ಆಳದಲ್ಲಿ ತಿಳಿನೀರು ಬಳುಕುತ್ತಿತ್ತು. ಅದನ್ನೇ ದಿಟ್ಟಿಸಿದಾಗ ತಾಯಿಯ ಮಡಿಲಿನಲ್ಲಿ ಆಡುತ್ತಿರುವ ಎಳೆಯ ಮಗುವನ್ನು ನೋಡಿದಂತಾಯಿತು. ಬಂಗಾರದ ಬಣ್ಣದ ಅದರ ಮುಖದಲ್ಲಿ ಎಂದಿಗೂ ಮಾಸದ ಅಚ್ಚರಿ ಹಾಗೂ ನಗುವನ್ನು ನೋಡಿ ಆನಂದಿಸಿದೆವು. ಆಗ ತಾನೆ ಅಲ್ಲಿ ಯಾರೋ ಹೆಣ್ಣುಮಕ್ಕಳು ಗಂಗಮ್ಮನ ಪೂಜೆಮಾಡಿ ಹೋಗಿದ್ದರು ಎನ್ನುವುದಕ್ಕೆ ಕುರುಹಿನಂತೆ ವಿಳೆದೆಲೆ ಮೇಲೆ ಬಳುಕುತ್ತಾ ಉರಿಯುತ್ತಿದ್ದ ಕರ್ಪೂರವೊಂದು 'ನೀರಿನೊಳಗಣ ಜ್ಯೋತಿಯಂತೆ' ಮೇಲೆ ತೇಲುತ್ತಿತ್ತು. ಹಸುರು ಬಳೆ, ಹಸುರು ರವಿಕೆ, ಅರಿಶಿನ–ಕುಂಕುಮ ಬಳಿದಿದ್ದ ಎರಡು ಬೆಣಚುಕಲ್ಲು, ಅಕ್ಷತೆ, ತೊಟ್ಟು ಮುರಿದ ಬಾಳೆಹಣ್ಣು, ಒಡೆದ ಕಾಯಿ, ಬೆಲ್ಲದೊಡನೆ ಬೆರೆತಿದ್ದ ನೆನೆಗಡಲೆ ಮತ್ತು ನೆನೆಯಕ್ಕಿ, ಗಾಳಿಯೊಂದಿಗೆ ಹದವಾಗಿ ಬೆರೆಯುತ್ತಿದ್ದ ಊದುಬತ್ತಿಯ ಪರಿಮಳ ಎಲ್ಲವೂ ಅಲ್ಲಿಗೊಂದು ದೈವಿಕತೆಯ ವಾತಾವರಣವನ್ನು ಸೃಷ್ಟಿ ಮಾಡಿದ್ದವು. ಈ ಎಲ್ಲ ವಿವರಗಳನ್ನೂ ಜೋಡಿಸಿ ನೋಡಿದರೆ, ನದಿಗಳೆಂದರೆ ಅದು 'ನಿಸರ್ಗದ ದೇವರು' ಎಂಬುದು ಮನವರಿಕೆಯಾಗುತ್ತದೆ.

ಹೀಗೆ ಒಂದೆಡೆ ಕಲೆತ ನೀರು ಪ್ರಕೃತಿಯ ಕರುಣೆಯಿಂದ ಬಂಗಾರದ ಬಣ್ಣ ತಳೆದು, ಜಾಡಿನಲ್ಲಿ ನಿರಂತರವಾಗಿ ಹರಿಯತೊಡಗುತ್ತದೆ. ಕೊರಟಗೆರೆಯ ವ್ಯಾಪ್ತಿಯಲ್ಲಿ ಸುಮಾರು ಮುವತ್ತನಾಲ್ಕು ಕಿ.ಮೀ.ನಷ್ಟು ಹರಿಯುವ ಈ ನದಿಯನ್ನು ನಮ್ಮ ಜನ 'ಸುವರ್ಣಮುಖಿ' ಎಂದು ಕರೆದರು. ಎಂತಹ ಸುಂದರವಾದ ಹೆಸರು! ಇದೇ ರೀತಿ ಬೆಟ್ಟ, ನದಿ ಹಾಗೂ ನಮ್ಮ ಸುತ್ತಿನ ಹಳ್ಳಿಗಳಿಗೆ ಅರ್ಥಪೂರ್ಣ ಹೆಸರನಿಟ್ಟಿರುವ ನಮ್ಮ ಜನಪದರ ಸೃಷ್ಟಿಶೀಲತೆ ಅದ್ಭುತವಾದದ್ದು ಎಂದು ನನಗನಿಸಿತು.

ಹೀಗೆ ಪಶ್ಚಿಮ ದಿಕ್ಕಿಗೆ ಹೊರಟ 'ಸುವರ್ಣಮುಖಿ' ನದಿ ಮುಂದೆ ಸೂಳೆಕೆರೆ, ಬೂಗಲಗುಟ್ಟೆ ಕೆರೆಗಳನ್ನು ದಾಟಿಕೊಂಡು ಸಿರಾದ ಬಳಿ ವೇದಾವತಿ ನದಿಯನ್ನು ಜೊತೆಯಲ್ಲಿ ಕರೆದುಕೊಂಡು ತನ್ನ ಪಯಣವನ್ನು ಮುಂದುವರೆಸುತ್ತದೆ. ಹಾಗೆಯೇ ಪೂರ್ವದಿಕ್ಕಿನೆಡೆಗೆ ಹರಿವ ಇದೇ ನದಿಯ ಇನ್ನೊಂದು ಧಾರೆ ದೇವರಾಯನ ದುರ್ಗದಿಂದ ಬರುವ 'ಜಯಮಂಗಲಿ' ನದಿಯನ್ನು ಕೂಡಿಕೊಂಡು ಮಧುಗಿರಿ ದಾಟಿ ಕೃಷ್ಣಾ ನದಿ ಕೊಳ್ಳದವರೆಗೂ ಸಾಗುತ್ತದೆ. ಇದು 'ಸುವರ್ಣಮುಖಿ' ನದಿ ಪಾತ್ರ. ಸುಮ್ಮನೆ ಕುತೂಹಲಕ್ಕೆ ಹಾಗೆಯೇ ಗಮನಿಸಿ; ಕೆಲವು ಅಪವಾದಗಳನ್ನು ಹೊರತುಪಡಿಸಿ, ನಮ್ಮ ನದಿಗಳಿಗೆ ಇರುವ ಹೆಸರುಗಳೆಲ್ಲಾ ಬಹುಪಾಲು ಹೆಣ್ಣಿನ ಹೆಸರಿನವೇ! ಇದರಲ್ಲಿ ಆಶ್ಚರ್ಯವೇನೂ ಇಲ್ಲ ಎಂದು ನನಗನಿಸಿದೆ. ಜೀವ ಸಂತತಿಯನ್ನು ಸೃಷ್ಟಿಸುವುದು ಮತ್ತು ಪೋಷಿಸುವುದು ಎರಡರಲ್ಲಿಯೂ ಕಂಡುಬರುವ ದೈವಿಕ ಗುಣ. ಹೆಣ್ಣು ಹುಟ್ಟಿ ಬೆಳೆದದ್ದು ಒಂದು ಕಡೆಯಾದರೆ, ಕೊನೆಗೆ ತನ್ನ ಸಂಗಾತಿಯನ್ನು ಕೂಡಿಕೊಳ್ಳುವುದು ಎಲ್ಲೋ ಇರುವ ಇನ್ನೊಂದು ಪರಿಸರದಲ್ಲಿ! ಹಾಗೆಯೇ ನದಿ ಕೂಡ! ಎಲ್ಲೋ ಹುಟ್ಟಿ ಎಲ್ಲೋ ಕೂಡಿಕೊಳ್ಳುತ್ತದೆ. ಆದ್ದರಿಂದ ಹೆಣ್ಣು ಮತ್ತು ನದಿಗೆ ಇರುವ ಗುಣ ಒಂದೇ ಎಂದು ನಾನು ತಿಳಿದಿದ್ದೇನೆ.


ತೊರೆಯ ಉಸುಕಿನಲ್ಲಿ ಅಳಿಸಿಹೋದ ಹೆಜ್ಜೆಗುರುತುಗಳನ್ನು ಹುಡುಕುತ್ತಾ ಹೋದವರ ಸ್ಥಿತಿಯಂತಾಗಿತ್ತು ನಮ್ಮ ಪಾಡು ಆ ಬಟ್ಟಬಯಲಿನಲ್ಲಿ! ಏಕೆಂದರೆ ಈಗ ಅಲ್ಲಿ ನದಿ ಹರಿಯುತ್ತಿತ್ತು ಎನ್ನುವುದಕ್ಕೆ ಯಾವುದೇ ಕುರುಹುಗಳಿರಲಿಲ್ಲ! ಅಲ್ಲಿ ಹರಿಯುತ್ತಿದ್ದ ನೀರಿನ ಜಾಡೂ ಕೂಡ ಮಾಯವಾಗಿದೆ. ಈ ನದಿಯ ಒರತೆ ಬತ್ತಿ ಎಷ್ಟೋ ವರ್ಷಗಳಾಗಿವೆ. ತಾನು ಪೊರೆದ ಮನುಷ್ಯ ನಾಗರಿಕತೆ ಸೃಷ್ಟಿಮಾಡಿದ ಎಲ್ಲಾ ಅಸ್ವಸ್ಥತೆಗಳಿಂದ ಪಾರಾಗಿ ನಿತ್ಯನೂತನವಾಗಿ ಹರಿಯುವ ತನ್ನ ಅದಮ್ಯ ಛಲವನ್ನು ಈ ನದಿ ಇಂದು ಕಳೆದುಕೊಂಡಿದೆ. ಸಾವು ಬದುಕಿನ ನಡುವೆ ಹೋರಾಡಿ, ಕೊನೆಗೆ ಕೈಸೋತು ಮಣ್ಣಿಗೆ ಉದುರಿದ ಹಣ್ಣೆಲೆಯಂತೆ ಈ ನದಿ ನಮಗೆ ಕಂಡಿತು. ನೀರಿನ ದೇವತೆಯನ್ನು ಭೂಮಿಯ ಮೇಲೆ ಕಾಪಾಡಿಕೊಳ್ಳುವಲ್ಲಿ ನಾವು ಹೀನಾಯವಾಗಿ ಸೋತಿದ್ದೇವೆ ಎನಿಸಿತು.

ನದಿಯೊಂದರ ಉಳಿವು ಮನುಷ್ಯ ನಾಗರಿಕತೆಯ ಅಸ್ಮಿತೆಯ ಆಕರ. ಹರಿಯುವ ನದಿಯ ನಾಶ ಎಂದರೆ, ಅದು 'ಜೀವಜಾಲ ಸರಪಳಿಯ ಒಂದು ಕೊಂಡಿಯ ನಾಶ. ಅಲ್ಲಿಗೆ ಈ ಕೊಂಡಿಯನ್ನು ಅವಲಂಬಿಸಿರುವ ಸಾವಿರಾರು ಜೀವಿಗಳು ಜಗತ್ತಿನಿಂದ ಕಣ್ಮರೆಯಾಗುತ್ತವೆ. ಭವಿಷ್ಯದ ಜನಾಂಗಕ್ಕೆ 'ನೀರು' ಎನ್ನುವುದೇ ಆಚರಿಸಿ, ಆರಾಧಿಸಿ ಅನುಭವಿಸಬೇಕಾದ ಪವಿತ್ರ ಧರ್ಮವಾಗಿಬಿಡುತ್ತದೆ. ಈ ಮಣ್ಣಿನ ಮನೋಲೋಕವನ್ನು ಬಲ್ಲವರು ಜೀವಜಗತ್ತಿಗೆ ಉಸುರಿನಷ್ಟೇ ಅಗತ್ಯವಾದ ಜಲದ ಪ್ರಾಮುಖ್ಯತೆಯನ್ನು ಕುರಿತು ಇಂದಿನ ವಿವೇಕಹೀನ ಸಮಾಜಕ್ಕೆ ಮತ್ತೆ ಮತ್ತೆ ಹೇಳುವಂತಾಗಿದೆ. 'ಜಲ'ವನ್ನು ತಮ್ಮ ಸಂಸ್ಕೃತಿಯ ಕೇಂದ್ರವನ್ನಾಗಿ ಮಾಡಿಕೊಂಡಿರುವ ನೂರಾರು ದ್ರಾವಿಡ ಮೂಲ ಬುಡಕಟ್ಟುಗಳು ನಮ್ಮ ನಡುವೆ ಈಗಲೂ ಇವೆ. ಈ ಬುಡಕಟ್ಟುಗಳಲ್ಲಿರುವ ವಿವೇಕ, ನಮ್ಮ ಇಂದಿನ ಸಮಾಜಕ್ಕೆ 'ಪಥ್ಯ'ವಾಗಬೇಕಾದ ಅಗತ್ಯವೂ ಇದೆ ಎಂದು ಆ ಬಯಲಿನಲ್ಲಿ ನಮಗನಿಸಿತು. ರಾಜಾಸ್ಥಾನದ ಮಣ್ಣಿನಲ್ಲಿ ಹಿಂಗಿಹೋಗಿದ್ದ ಐದು ನದಿಗಳಿಗೆ ಪುನರ್ಜನ್ಮ ನೀಡಿ, ಅವು ಮತ್ತೆ ಭೂಮಿಯ ಮೇಲೆ ಹರಿಯುವಂತೆ ಮಾಡಿದ 'ಜಲಚಿಕಿತ್ಸಕ' ರಾಜೇಂದ್ರ ಸಿಂಗ್ ನದಿಗಳನ್ನು ಕುರಿತು 'ನದಿ ಮತ್ತು ನಾರಿಯನ್ನು ಗೌರವಿಸುವುದನ್ನು ಕಲಿತಾಗ ನಾಡು ಜಲಸುಭಿಕ್ಷ ನಾಡಾಗುತ್ತದೆ' ಎನ್ನುವ ದಾರ್ಶನಿಕ ಮಾತನ್ನು ನಾವಿಂದು 'ದೇವರವಾಣಿ'ಯಂತೆ ನಿತ್ಯವೂ ಸ್ಮರಿಸುತ್ತಾ ಆಚರಣೆಗೆ ತರಬೇಕಿದೆ.

ನದಿ ಮುಖ್ಯವಾಗಿ ನಮಗೆ ಎರಡು ಸಂಗತಿಗಳನ್ನು ಸದಾ ನೆನಪಿಸುತ್ತಿರುತ್ತದೆ. ಮೊದಲನೆಯದು: ಸಮಾಜಶಾಸ್ತ್ರಜ್ಞರು ಹೇಳುವಂತೆ ನದಿಗಳು ಮಾನವನ ನಾಗರಿಕತೆಯ ತೊಟ್ಟಿಲು. ಎರಡನೆಯದು: ಸಮಾಜಶಾಸ್ತ್ರಜ್ಞರ ಈ ಮಾತಿನ ತುದಿಗೆ ಚರಿತ್ರೆಯಿಂದ ಆಯ್ದ ಇನ್ನೊಂದು ಸಂಗತಿಯನ್ನು ಜೋಡಣೆ ಮಾಡಿ ಹೇಳುವುದಾದರೆ; 'ಮನುಕುಲ ಎಂದಿಗೂ ಮರೆಯಲಾಗದ ಶ್ರೇಷ್ಠ ವ್ಯಕ್ತಿಯನ್ನು ನೀಡಿದ ಹಿರಿಮೆಯೂ ಕೂಡ ಎರಡು ನದಿಗಳಿಗೆ ಸಲ್ಲುತ್ತದೆ'. ಮಹಾಕರುಣೆ, ಕ್ಷಮೆ ಮತ್ತು ದಯೆಯ ಮೂಲಕ ಜಗತ್ತಿನ ಹೃದಯವನ್ನು ಗೆದ್ದ ಬುದ್ದದೇವನೆ ಆ ಶ್ರೇಷ್ಠ ವ್ಯಕ್ತಿ. ಶಾಕ್ಯ ಮತ್ತು ಕೋಲಿಯ ಬುಡಕಟ್ಟುಗಳಿದ್ದ ಪ್ರದೇಶಗಳ ನಡುವೆ ಹರಿಯುತ್ತಿದ್ದ 'ರೋಹಿಣಿ' ನದಿಯ ನೀರಿಗಾಗಿ ಈ ಎರಡೂ ಬುಡಕಟ್ಟುಗಳ ನಡುವೆ ಆಗಾಗ್ಗೆ ದೊಡ್ಡ ಕಾದಾಟವೇ ನಡೆಯುತ್ತಿತ್ತು. ಸಿದ್ಧಾರ್ಥ ತನ್ನ ಬಾಲ್ಯದಲ್ಲಿ ಇದನ್ನು ಸದಾ ನೋಡುತ್ತಿದ್ದ. ರಾಗದ್ವೇಷದಿಂದ ಪ್ರೇರಿತರಾಗಿ ಒಬ್ಬರೊನ್ನೊಬ್ಬರು ಕಡಿದಾಡುವ ಮಾನವರ ಕ್ರೌರ್ಯವನ್ನು ಕಣ್ಣಾರೆ ಕಂಡು ಸಿದ್ಧಾರ್ಥ ತನ್ನೊಳಗೆ ವ್ಯಾಕುಲಗೊಳ್ಳುತ್ತಿದ್ದ. ಬಾಲ್ಯದಿಂದಲೇ ಹಿಂಸೆಯ ಬಗ್ಗೆ ಅವನ ಮನಸ್ಸಿನೊಳಗೆ ತಿರಸ್ಕಾರ ಬೆಳೆಯತೊಡಗಿತು. ಎಳವೆಯಿಂದಲೇ ವೈರಾಗ್ಯದತ್ತ ಅವನ ಮನಸ್ಸು ವಾಲತೊಡಗಿತು. ಹೀಗೆ ಎಳೆಯ ಸಿದ್ಧಾರ್ಥನ ಮನಸ್ಸಿನೊಳಗೆ ಅಹಿಂಸೆ, ಅನುಕಂಪ ಮತ್ತು ಜೀವಕಾರುಣ್ಯದ ಬೀಜ ಬಿತ್ತಿದ್ದು 'ರೋಹಿಣಿ' ಎನ್ನುವ ನದಿ. ಮುಂದೆ ಸಿದ್ಧಾರ್ಥನಿಗೆ ಅರಿವು ಮೈದೊರಿದ್ದು (ಜ್ಞಾನೋದಯ) ಗಯಾ ಪಟ್ಟಣದ ಬಳಿ ಹರಿಯುತ್ತಿದ್ದ 'ನೈರಂಜನ' ಎಂಬ ನದಿಯ ಪ್ರಶಾಂತ ತೀರದಲ್ಲಿದ್ದ ಅರಳೀಮರದ ಕೆಳಗೆ. ಹೀಗೆ 'ರೋಹಿಣಿ' ಮತ್ತು 'ನೈರಂಜನ' ಈ ಎರಡು ನದಿಗಳು ಬುದ್ದದೇವನ ಜೀವಿತದಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ನಿರಂತರ ಚಲನಶೀಲತೆ ಮತ್ತು ಜೀವಂತಿಕೆಯ ರೂಪಕದಂತಿರುವ ಈ ನದಿಗಳನ್ನು ನೋಡಿದ ಬುದ್ದದೇವ 'ಬದಲಾವಣೆ ಜಗತ್ತಿನ ನಿಯಮ' ಎಂದು ಹೇಳಿದ. 'ಹೊಳೆ ನೀರು ಮತ್ತು ಮರದ ನೆರಳು' ಯಾವಾಗಲೂ ಒಳಿತನ್ನೇ ನೀಡುತ್ತದೆ. ಹೀಗೆ ನದಿಗಳು ಮತ್ತು ವೃಕ್ಷದ ನೆರಳು ರೂಪಿಸಿದ ಮನಸ್ಸು ಬುದ್ದದೇವನದು.

ನಿರಂತರ ಹರಿಯುವುದು. ಗಾಳಿ, ಬೆಳಕು, ಗಿಡ–ಮರಗಳು ಹೀಗೆ ಇಡೀ ಜೀವಜಗತ್ತು ಚೈತನ್ಯದಿಂದ ಹಾಗೂ ಸಾಮರಸ್ಯದಿಂದ ಇರುವಂತೆ ಮತ್ತು ಭೂಮಿಯಲ್ಲಿ ಅಂತರ್ಜಲ ಸದಾ ಹೆಪ್ಪುಗಟ್ಟಿರುವಂತೆ ನೋಡಿಕೊಳ್ಳುವುದು ನದಿಯೊಂದರ ಜೀವಂತಿಕೆಯ ಪರಮೋಚ್ಚ ಸಂಕೇತ. ಇದನ್ನೇ ನಾವು 'ಜಲದ ಕರುಣೆ' ಎಂದು ಕರೆಯುವುದು. ಇದೆಲ್ಲದರ ಸಣ್ಣ ಮೊತ್ತವಾಗಿ,

'....ಜಲವೇ ಸಕಲ ಕುಲಕ್ಕೆ ತಾಯಲ್ಲವೇ?' ಎನ್ನುವುದು ಮನುಕುಲದ ದಿನನಿತ್ಯದ ಪ್ರಾರ್ಥನೆಯಾಗಲಿ ಎಂದು ಪ್ರಾರ್ಥಿಸುತ್ತಾ....



**(ತುಮಕೂರಿನ ನಿವಾಸಿಗಳಾದ ಜಿ.ವಿ. ಆನಂದಮೂರ್ತಿ ಪ.ಪೂ. ಕಾಲೇಜಿನ ನಿವೃತ್ತ ಕನ್ನಡ ಅಧ್ಯಾಪಕರಾಗಿದ್ದು, ಕವಿ, ಕಥೆಗಾರ ಹಾಗೂ ಲಲಿತ ಪ್ರಬಂಧಕಾರರಾಗಿಯೂ ಹೆಸರು ಮಾಡಿದ್ದಾರೆ)**

# ನವಿಲುಗರಿ

## ಒಂದು ಪ್ರೀತಿಯ ಹಾಡು..




ಇದನ್ನು ಹಾಡುವಾಗ ಆಲಿಸುವಾಗ
ಹೃದಯ ನಿರ್ಮಲವಾಗಿರುತ್ತದೆ
ಲಯಬದ್ಧವಾಗಿರುತ್ತದೆ
ಗುಡುಗು ಮಿಂಚುಗಳ ಬಾನಿನ
ನಿರ್ಮೌನ ಒಳಗೊಂದು
ಮಾತನ್ನು ಕಲಿಸುತ್ತದೆ]


ಅಡಿಕೆ ಮರಕ್ಕೆ ಸುತ್ತಿಕೊಂಡಿರುವ
ಎಲೆ ಗೋಪುರ ಬಳ್ಳಿ
ಹಸಿರು ಮುಕ್ಕಳಿಸುವಾಗ
ಕಣ್ತುಂಬಿಕೊಳ್ಳಲೇನು ಬರ?
ಕಿಟಕಿಯ ಸರಳು ಮನೆಯಾಚೆಗೂ
ನೋಟ ಕಲ್ಪಿಸಿದೆ
ಅಲ್ಲಿ ಗಿಡ ಮರ ಆಕಾಶಗಳಿಗಷ್ಟೇ ಸ

ನಲ್ಲ_ನಲ್ಲೆ ಪ್ರೀತಿಸುವುದೆಂದರೆ
ಮೈ ಮುಟ್ಟಿಕೊಳ್ಳುವುದಷ್ಟೇ ಅಲ್ಲ
ಮನಸ್ಸು ಮುಟ್ಟುವುದು
ಮುಟ್ಟಿದ ಮನದಲ್ಲಿ ಪ್ರಕೃತಿಯ
ತೂಗು ತೊಟ್ಟಿಲಿರುತ್ತದೆ
ಆಹಾ! ತೊಟ್ಟಿಲಲ್ಲೊಂದು ಮಗುವಿ
ಈ ಕನಸನ್ನು ತೂಗೋಣ
ಬೆಳೆಸೋಣ
ತಂದೆ_ತಾಯಿಯ ಜವಾಬ್ದಾರಿ
ನಿರಂತರ

**–ಆರ್. ಜ್ಯೋತಿ**



ಚಿತ್ರ: [illegible]



## ಆಡದೇ ಉಳಿದ ಮಾತುಗಳನು



ಆಡದೇ ಉಳಿದ ಮಾತುಗಳನು
ಒಟ್ಟು ಮಾಡಿ ಇಗೋ / ನಿನ್ನೆದುರಿಡುವೆ .
ನಿನಗೆಂದೇ ಆಡ ಬಯಸಿದ್ದ ಮಾತುಗಳು
ಇಗೋ ಹೇಗೆ ಮೌನ ವಹಿಸಿವೆ !
ಋತು ವಸಂತವೇ ಆದಂತಿವೆ
ಗಾಢ ಗಮಲೇ ! /
ಎಲ್ಲ ಕಾಲದ ಸೌಂದರ್ಯ ರೂಪವೇ
ಉಳಿಯದಿರು ನನ್ನೊಳಗೆ .
ಬುವಿಯ ಬೆಡಗನು
ನೀನೇನೆ ತೊಟ್ಟು
ಮೆರೆಯುತಿಹೆ !
ನೋಡು ಈ ಬೇಯುವ ಹೃದಯವನು
ಗಮನ ಕೊಟ್ಟು .
ಯಾರು ಬಲ್ಲರು ಮುಂದಾಗುವುದನು ?
ಪೂರ್ವದಿ ನಾನೇನು ? ನೀನೇನು ?
ಈ ಚಣಕೆ ಜೀವ ತುಂಬುವೆ ನಾನು
ನೀನೂನು .
ಹಸಿರು ವೃಕ್ಷಗಳಂತೆ ಬೆಳೆದು ನಿಂತಿದ್ದೇವೆ !
ಕೊಟ್ಟ ಎಲೆಗಳು ತುಂಬು ಕನಸು !

**–ಕೆ.ಪಿ. ಮೃತ್ಯುಂಜಯ**

---

## ಒಂದು ಅತಿ ಸಣ್ಣ ಕಥೆ

# ಹಸಿವು



**ಶೆ**ಟ್ಟರ ಅಂಗಡಿ, ರಾತ್ರಿ ೯ ಗಂಟೆ ಸಮಯ.

"ಇದರಾಗ ಒಂದು ಕಿಲೋ ನುಚ್ಚು ಬರೋದಿಲ್ಲ" ಏಳೆಂಟು ವರ್ಷದ ಹುಡುಗಿಗೆ ಅವಳು ಕೊಟ್ಟ ಹದಿನೈದು ರೂಪಾಯಿ ಹಿಂದಿರುಗಿಸುತ್ತಾ ಶೆಟ್ಟರು ಹೇಳಿದರು.

ಅಂಗಡಿಯ ಮುಂದೆ ಸಿಗರೇಟು ಸೇದುತ್ತಿದ್ದ ಯುವಕನನ್ನು ದಾಟಿ ವ್ಯಯ್ಯಾರದಿಂದ ಬಂದ ಮಧ್ಯವಯಸ್ಕ ಮಹಿಳೆಯೊಬ್ಬಳು ಮೆಟ್ಟಿಲೇರುತ್ತ "ಪಾವು ಕಿಲೋ ಹೋಳಿಗೆ ಹಿಟ್ಟು ಕೊಡ್ರಿ" ಎಂದು ನುಲಿಯುತ್ತಾ ನಿಂತಳು. ಮರುಕ್ಷಣವೇ ಚಿಂದಿ ತೊಟ್ಟ ಹುಡುಗಿಯನ್ನು ಕಂಡು ಮುಖ ಸಿಂಡರಿಸಿ ಅವಳಿಂದ ದೂರ ಸರಿದಳು. ಅವಳ ಮಾದಕ ದೃಷ್ಟಿ ನೋಡಿಯೂ ನೋಡದಂತೆ ಆ ಯುವಕನ ಮೇಲೆ ಹಾಯುತ್ತಿತ್ತು. ಯುವಕ ಅದನ್ನು ಗಮನಿಸಿ ಹೆಮ್ಮೆಯಿಂದ ಬೀಗಿದ.

ಚಾಕೊಲೇಟ್ ಡಬ್ಬಿಯತ್ತ ಆಸೆಯಿಂದ ದಿಟ್ಟಿಸುತ್ತಿದ್ದ ಹುಡುಗಿ ತಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳದ್ದನ್ನು ಕಂಡು "ಏ! ಹೇಳಿದ್ದು ಕೇಳಿಸ್ಲಿಲ್ಲಾ? ಇನ್ನೂ ಐದು ರೂಪಾಯಿ ತಗೊಂಡು ಬಾ ಹೋಗು" ಎಂದು ಜೋರು ಮಾಡಲು ಹುಡುಗಿ ಹೊರಟು ಹೋಯಿತು.

ಹೋಳಿಗೆ ಹಿಟ್ಟು ಕಟ್ಟಿ ಕೊಡುವಷ್ಟೂ ಹೊತ್ತು ವೈಯಾರಿ ಶೆಟ್ಟರ ಜೊತೆ ಅದೂ–ಇದೂ ಮಾತನಾಡುತ್ತಾ ಪರೋಕ್ಷವಾಗಿ ಯುವಕನೊಡನೆ ಕಣ್ಣ ನೋಟದಲ್ಲಿಯೇ ಸರಸ–ಸಲ್ಲಾಪ ಮುಂದುವರೆಸಿದ್ದಳು.

ಈ ನಡುವೆ ಹುಡುಗಿಯೊಡನೆ ಮರಳಿದ ತಾಯಿ "ಅಲ್ರೀ ಸಾವ್ಕರ್ರ! ನಿನ್ನೀ ಮಟಾ ಇದಸ್ ರೇಟಿಗೆ ಒಂದು ಕಿಲೋ ನುಚ್ಚು ಕೊಟ್ಟಿದ್ರಲ್ರಿ! ಒಮ್ಮೆ ಇವತ್ಯಾಕ ಹೆಚ್ಚಾಗೇತ್ರಿ?"

ಶೆಟ್ಟರು – " ನೋಡು ಮಲ್ಲವ್ವ! ರೇಟ್ ಹೆಚ್ಚಾಗಿ ೩–೪ ದಿನ ಆತು. ಏನೋ ಬಡ ಹೆಣ್ಣುಮಗಳು ಅಂತ ಒಂದೆರೆಡು ದಿನ ನೀ ಕೊಟ್ಟಷ್ಟು ರೊಕ್ಕ ತಗೊಂಡು ಒಂದು ಕಿಲೋ ಕೊಡತ್ತಿದ್ದೆ. ಹಂಗಂತ ಎಷ್ಟು ದಿನ ಅಂತ ನಾ ಲುಕ್ಸಾನು ಮಾಡ್ಕೊಳ್ಲಿ. ಅದಕ್ಕ ಇನ್ನೂ ಐದು ರೂಪಾಯಿ ಕೊಟ್ರ ಅಷ್ಟ ನುಚ್ಚು ಸಿಕ್ಕೈತಿ. ಇಲ್ಲಾಂದ್ರ ಇಲ್ಲ".

ಈ ಮಧ್ಯೆ ಯುವಕ "ನೀವು ಮಹೇಶನ ಕಸಿನ್ ಅಲ್ಲೇನ್ರಿ?" ಎಂದು ವಯ್ಯಾರಿಗೆ ಕಾಳು ಹಾಕುವುದನ್ನು ಮುಂದುವರೆಸಿದನು.

ವಯ್ಯಾರಿ– ಅಲ್ರೀ! ಆದ್ರಸ್ ನಿಮ್ಮನ್ನ ಎಲ್ಲೋ ನೋಡೇನ್ರಿ"

ಯುವಕ ಇಷ್ಟು ಪರಿಚಯ ಸಾಕು ಅನ್ನುವಂತೆ ಮಾತು ಮುಂದುವರೆಸುತ್ತಾ ಅವಳೊಡನೆ ಹೆಜ್ಜೆ ಹಾಕಿದನು.

ಮಲ್ಲವ್ವ ಏನೂ ಉತ್ತರಿಸದೇ ಇದ್ದುದನ್ನು ಕಂಡು ಶೆಟ್ಟರು "ಈಗ ಏನು ಮಾಡ್ತಿ" ಎಂದು ಕೇಳಿದರು.

ಮಲ್ಲವ್ವ ಸುದೀರ್ಘವಾಗಿ ಯೋಚಿಸಿ, ಕೆಳದನಿಯಲ್ಲಿ ಹೇಳಿದಳು "ಅರ್ಧ ಕಿಲೋ ನುಚ್ಚು ಕೊಡ್ರಿ, ಉಳಿದಿದ್ದರಾಗ ಈಕಿಗೆ ಒಂದು ಚಾಕ್ಲೇಟ್ ಕೊಡ್ರಿ".

**–ಸೋಮಶೇಖರ ಹಿರೇಮಠ**

(ರೇಖಾ ಚಿತ್ರ: **ಗುಜ್ಜಾರ್**)

**ಚಂದಾ (ರೂ. ೩೫೦/- ಈ ಮಾರ್ಚ್‌ನಿಂದ ೨೦೨೧ರ ಸೆಪ್ಟಂ.ವರೆಗೆ) ಕಳಿಸಲು ಬ್ಯಾಂಕ್ ವಿವರ:**

**ಕರೆಂಟ್ ಅಕೌಂಟ್ ನಂ. ೬೪೧೧೦೩೫೮೩೩೦ ಬ್ಯಾಕ್: ಎಸ್.ಬಿ.ಐ.ನ ಶಿವಮೊಗ್ಗದ ಗೀತಾಕೃಪಾ ಶಾಖೆ IFSC : SBIN 0040444**
**ಚಂದಾ ಕಳಿಸಿದ ನಂತರ ವಿಳಾಸ ತಿಳಿಸಿ ಖಚಿತಪಡಿಸಬೇಕು.**
**ಸಂಪರ್ಕ ಸಂಖ್ಯೆ: ೯೪೮೧೩೫೧೦೭೯**
**ಲಭ್ಯ ಹಳೆಯ ಸಂಚಿಕೆಗಳಿಗೆ ತಲಾ ರೂ.೧೦/-**

**೬ನೇ ಪುಟದಿಂದ)**

ಖಿನ್ನಗೊಳಿಸುವ ನಕಾರಾತ್ಮಕ ಸುದ್ದಿಗಳೆಂದು ಪರಿಗಣಿಸಿ, ಈ ವಲಸೆ ಕಾರ್ಮಿಕರ ದಾರುಣ ಸ್ಥಿತಿಯನ್ನು ತೋರಿಸಲು ನಿರಾಕರಿಸಿವೆ. ನ್ಯಾಯಾಲಯ ಸಹ ಇದೇ ಹಾದಿಯನ್ನು ಹಿಡಿದಂತಿದೆ.

ನ್ಯಾಯಾಲಯ ತನ್ನ ತೀರ್ಪಿನಲ್ಲಿ, ವಿಷಯ–ಪರಿಣತಿಯ ಅಂಶವನ್ನು ಉಲ್ಲೇಖಿಸಿರುವುದು ಕುತೂಹಲಕರವಾಗಿದೆ. ನಾವು ಇದೇ ನ್ಯಾಯಾಲಯ. ಬಾಬರಿಮಸೀದಿಯ ನಿವೇಶನ ತಕರಾರಿನ ವಿಷಯದಲ್ಲಿ ನ್ಯಾಯದಾನ ವಿಧಾನದಲ್ಲಿ ಅಳವಡಿಸಿಕೊಂಡ ಸಮನ್ವಯ ತಂತ್ರವನ್ನು ನೋಡಿದ್ದೇವೆ. ಹಾಗೇ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಸರ್ಕಾರ ತಗೆದುಕೊಂಡಿರುವ ಕ್ರಮಗಳ ಬಗೆಗೆ ತಳೆದ ನಿಲುವುಗಳನ್ನೂ ನೋಡಿದ್ದೇವೆ.. ಈ ವಿಷಯಗಳಲ್ಲಿ ಪರಿಣತರ ಅಭಿಪ್ರಾಯವನ್ನು ಕೇಳುವ ಆಸಕ್ತಿಯನ್ನು ನ್ಯಾಯಾಲಯವು ತೋರಿಲ್ಲ. ನ್ಯಾಯಾಲಯವು, ಸರ್ಕಾರವೊಂದೇ ಜ್ಞಾನ ಮತ್ತು ವಿವೇಕಗಳ ಭಂಡಾರ ಎಂದು ಪರಿಭಾವಿಸಿದಂತಿದೆ.

ನ್ಯಾಯ, ನ್ಯಾಯವಾಗಬೇಕಾದರೆ, ಅದು ದುರ್ಬಲರ ಪರವಾಗಿರಬೇಕು. ಸರ್ಕಾರವೇ ಎದುರುವಾದಿಯ ಸ್ಥಾನದಲ್ಲಿದ್ದಾಗ, ನ್ಯಾಯ ಬೇಡುವ ವಾದಿಯ ಸ್ಥಾನದಲ್ಲಿರುವ ಜನರು ದುರ್ಬಲರಾಗಿರುತ್ತಾರೆ. ಅಂತಹ ಸಂದರ್ಭಗಳಲ್ಲಿ, ನ್ಯಾಯದ ತಕ್ಕಡಿಯು ದುರ್ಬಲರ ಪರವಾಗಿ ವಾಲಬೇಕು. ಅವರಿಗೋಸ್ಕರ ಅದು ತುಡಿಯಬೇಕು. ಅಸಮಾನತೆಯಿಂದುಂಟಾದ ಸಂಕಷ್ಟಗಳನ್ನು ಯಾರು ಅನುಭವಿಸುತ್ತಿರುತ್ತಾರೋ, ಅವರ ಬಗೆಗಿನ ಪ್ರೀತಿ–ಕಾಳಜಿರಹಿತವಾದ ನಡೆ ನ್ಯಾಯವೆನಿಸುವುದಿಲ್ಲ.

ನ್ಯಾಯದಾನವೆಂಬುದು, ಒಂದು ಸಾರಿ ಕೊಟ್ಟು ಮುಗಿಸಿಬಿಡುವ ಕೆಲಸವಲ್ಲ. ಅದು ಪ್ರತಿನಿತ್ಯದ ಪ್ರತಿನಿಮಿಷದ ವಿಷಯ.

ಬ್ರೆಕ್ಟ್ ಇನ್ನೊಂದೆಡೆ ಹೀಗೆ ಹೇಳಿದ್ದಾನೆ:

***"ಅಕಾಲದಲ್ಲಿ ಸುರಿವ ಮಳೆಯಂತೆ, ದುರ್ವಿಧಿಗಳು ಒಂದರ ಮೇಲೊಂದು ಮಳೆಯಂತೆ ಅಪ್ಪಳಿಸತೊಡಗಿದಾಗ ಯಾರೂ "ಓ ನಿಲ್ಲು!" ಎಂದು ಕೂಗುವುದಿಲ್ಲ. ದುಷ್ಕೃತ್ಯಗಳು ಒಂದರ ಹಿಂದೆ ಒಂದು ಸಾಲುಸಾಲಾಗಿ ನಡೆದಾಗ, ಅವು ಯಾರ ಕಣ್ಣಿಗೂ ಕಾಣುವುದಿಲ್ಲ. ಯಾತನೆಯು ಸಹಿಸಲಸಾಧ್ಯವಾದಾಗ, ರೋದನವು ಕೇಳುವುದಿಲ್ಲ. ಕಣ್ಣೀರೂ ಸಹ ಅಕಾಲ ಮಳೆಯಂತೆ ಸುರಿದು ಹೋಗುತ್ತದೆ."***

ಹೃದಯವಂತರಾದ ಹರ್ಷ್ ಮಂದರ್ ಹಾಗೂ ಅಂಜಲಿ ಭಾರದ್ವಾಜ್ 'ಓ ನಿಲ್ಲಿಸಿ' ಎಂದು ಕೂಗುತ್ತಾ ನ್ಯಾಯಕ್ಕಾಗಿ ನ್ಯಾಯಾಲಯಕ್ಕೆ ಧಾವಿಸಿದ್ದರು. ನ್ಯಾಯಾಲಯಕ್ಕೆ ವಸ್ತುಸ್ಥಿತಿ ಏನೆಂಬುದು ತಿಳಿದಿದೆ. ಆದರೆ ಅದು ಏನನ್ನೂ ಮಾಡದಿರುವುದನ್ನೇ ಆಯ್ಕೆ ಮಾಡಿಕೊಂಡಿದೆ.

ನ್ಯಾಯಾಲಯಗಳು ಇರುವುದು ಜನರಿಗಾಗಿಯೇ ಅಲ್ಲವೇ? ಅದರೆ ಅದು ಸರ್ಕಾರದ ಪರವಾಗಿ ನಿಂತಿದೆ. ಸತ್ಯದ ಪಥದಲ್ಲಿ ಶಕ್ತಿ ತುಂಬುವಂತಹ ಸಾಮರ್ಥ್ಯ ಇರುವುದು ನ್ಯಾಯಕ್ಕೆ ಮಾತ್ರ ಸಾಧ್ಯ. ಈ ಪಥದಲ್ಲಿ ನ್ಯಾಯಾಲಯ ವಿಫಲವಾದರೆ, ಅದು ನ್ಯಾಯವಲ್ಲ.

ಪುನಃ ಕವಿವಾಣಿಗೆ ಮರಳುವುದಾದರೆ:

*ರೊಟ್ಟಿ ಎಷ್ಟು ಬೇಕು ಅಷ್ಟೇ ನ್ಯಾಯವೂ ಬೇಕು*  
***ಅದಕಿಂತ ಹೆಚ್ಚು ಬೇಕು, ಹೆಜ್ಜೆ ಹೆಜ್ಜೆಗೂ ಬೇಕು***  
***ಹಗಲಿರುಳು, ದುಡಿಯುವಾಗಲೂ ಬಿಡುವಿನಲ್ಲಿ ಇರುವಾಗಲೂ,***  
***ಕಡುಕಷ್ಟಕಾಲದಲ್ಲೂ, ಸುಖ–ಸಂತೋಷದಲ್ಲಿರುವಾಗಲೂ***  
***ಸಾಕಷ್ಟು ಬೇಕು,***  
***ಇಡಿಯಾಗಿ ಬಿಡಿಯಾಗಿ ಬಾಳಿ ಬದುಕುವಷ್ಟು ಬೇಕು.***  
***ಈ ರೊಟ್ಟಿ–ನ್ಯಾಯ ಬೇಕು, ಇರಬೇಕು.***  
***ಇದೇ ಅತಿ ಅವಶ್ಯವಾದದ್ದು...***  
***ಹೇಳಿ ಗೆಳೆಯರೇ ಇದನ್ನು ಯಾರು ಬೇಯಿಸಬೇಕು?***  
***ದಿನವಿಡೀ ರೊಟ್ಟಿ ಬಡಿದು ಬೇಯಿಸುವವರೇ....***  
***ಅಂದರೆ ಜನರೇ ನ್ಯಾಯವೆಂಬ ರೊಟ್ಟಿಯನ್ನು ಬೇಯಿಸಬೇಕು.***

**(ಎಡಪಂಥೀಯ ಚಿಂತಕರೆಂದು ಹೆಸರಾದ ಅಪೂರ್ವಾನಂದ ನ್ಯೂ ದೆಹಲಿ ವಿಶ್ವವಿದ್ಯಾಲಯದಲ್ಲಿ ಹಿಂದಿ ಪ್ರಾಧ್ಯಾಪಕರಾಗಿದ್ದಾರೆ)**



(ಕೃಪೆ: ***ಜನತಾ,*** ೧೯ ಏಪ್ರಿಲ್, ೨೦೨೦

ಕನ್ನಡಕ್ಕೆ: **ಕೆ. ಶ್ರೀದೇವಿ)** .

**೬ನೇ ಪುಟದಿಂದ)**

ಮರುವಿನ್ಯಾಸವು ಕಮ್ಯೂನಿಸ್ಟರ ಜೀವಂತ ದುಷ್ಕೃತ್ಯಗಳಿಗಿಂತ ಹೆಚ್ಚಾಗಿ ಕೆಲವು ಭಂಡ ಆಫ್ರಿಕನ್ ಸರ್ವಾಧಿಕಾರಿಗಳ ಕೃತ್ಯಗಳನ್ನು ನೆನಪಿಗೆ ತರುತ್ತದೆ. ಇವು ಐವರಿ ಕೋಸ್ಟ್‌ನ ಹೌಪೋಯೆ ಬೋಯ್ನಿ ಮತ್ತು ಕೇಂದ್ರ ಆಫ್ರಿಕನ್ ರಿಪಬ್ಲಿಕ್‌ನ ಜೀನ್ ಬೆದೆಲ್ ಅವರುಗಳು ತಮ್ಮ ಹೆಸರನ್ನು ಶಾಶ್ವತಗೊಳಿಸುವುದಕ್ಕಾಗಿ ರಚಿಸಿದ ಆಡಂಬರದ ಯೋಜನೆಗಳನ್ನು ತಮ್ಮ ದೇಶಗಳ ಮೇಲೆ ಹೇರಿದ್ದನ್ನು ನೆನಪಿಸುತ್ತವೆ.

ಕೊರೋನ ವೈರಸ್ ಸಾಂಕ್ರಾಮಿಕ ರೋಗವು ದಾಳಿಯಿಡುವುದಕ್ಕೆ ಮೊದಲೂ ಕೂಡ ರಾಷ್ಟ್ರದ ರಾಜಧಾನಿಯ ಕೇಂದ್ರ ಭಾಗದ ದುಬಾರಿ ಮರುವಿನ್ಯಾಸವು ಒಂದು ವ್ಯರ್ಥ, ವಿಷಯ ಲೋಲುಪ ಚಟುವಟಿಕೆಯಂತೆ ಕಾಣುತ್ತಿತ್ತು. ಈಗಂತೂ ಅದು ಮತ್ತೂ ಹೆಚ್ಚು. ಈ ಮೊದಲೇ ಏದುಸಿರು ಬಿಡುತ್ತಿದ್ದ ಆರ್ಥಿಕತೆಯನ್ನು ಈ ಸಾಂಕ್ರಾಮಿಕ ರೋಗವು ಆತಂಕದ ಅಂಚಿಗೆ ತಂದು ನಿಲ್ಲಿಸಿದೆ. ಸರಿಯಾದ ಪೂರ್ವತಯಾರಿಯಿಲ್ಲದ ಲಾಕ್‌ಡೌನ್ ಅಗಾಧವಾದ ಮಾನವ ಸಂಕಷ್ಟವನ್ನು ಉಂಟುಮಾಡಿದೆ. ಈಗಾಗಲೇ ಪಾಯದ ಅಂಚುಗಳಲ್ಲಿ ಬದುಕುತ್ತಿರುವ ದುಡಿಯುವ ವರ್ಗದ ಭಾರತೀಯರು ದಾರಿದ್ರ್ಯಕ್ಕೆ ತಳ್ಳಲ್ಪಟ್ಟಿದ್ದಾರೆ.

ಈಗಾಗಲೇ ಬಡವರಾಗಿದ್ದ ಕೋಟ್ಯಾಂತರ ಜನ ಭಾರತೀಯರು ಮತ್ತಷ್ಟು ಬಡತನಕ್ಕೆ ತಳ್ಳಲ್ಪಟ್ಟಿದ್ದು ಅವರಿಗೆ ಕೇಂದ್ರವು ಆರ್ಥಿಕ ಬೆಂಬಲ ನೀಡುವುದು ಬಹಳ ಅಗತ್ಯ ಎಂಬುದಾಗಿ ಎಷ್ಟೋ ಜನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ದೆಹಲಿಯ ಕೇಂದ್ರ ಭಾಗದ ಪುನರ್ವಿನ್ಯಾಸ ಯೋಜನೆಗೆ ತೆಗೆದಿಡಲಾಗಿರುವ, ೨೦ ಸಾವಿರ ಕೋಟಿ ಎಂದು ಅಂದಾಜಿಸಿದ್ದರೂ ಅದು ಇನ್ನೂ ಹೆಚ್ಚಾಗಬಹುದೆಂಬ ನಿರೀಕ್ಷೆ ಈ ಹಣವನ್ನು ಜನರ ಸಂಕಷ್ಟವನ್ನು ಕಡಿಮೆ ಮಾಡಲು ಏಕೆ ಬಳಸಬಾರದು?

ಈ ಸಂಕಷ್ಟದ ಆರ್ಥಿಕ, ಸಾಮಾಜಿಕ, ಮತ್ತು ಮಾನವೀಯ ಹೊರೆಯನ್ನು ರಾಜಕೀಯವಾಗಿ ರಾಜ್ಯಗಳು ಹೊರುತ್ತಿವೆ. ಅವುಗಳು ಹತಾಶೆಯಿಂದ ಹಣಕ್ಕಾಗಿ ಮೊರೆಯಿಡುತ್ತಿವೆ. ಅವು ಕೇಂದ್ರದಿಂದ ತಮಗೆ ಬರಬೇಕಾದ ನ್ಯಾಯಯುತ ಪಾಲಿಗಾಗಿ ಮೊರೆಯಿಡುತ್ತಿರುವುದು ಇನ್ನೂ ದೊಡ್ಡ ವಿಪರ್ಯಾಸ. ಜಿಎಸ್‌ಟಿ ತೆರಿಗೆಯ ರಾಜ್ಯಗಳ ಪಾಲು ಮುವ್ವತ್ತು ಸಾವಿರ ಕೋಟಿ ರೂಪಾಯಿಗಳು ಇನ್ನೂ ಸಂದಾಯವಾಗದೆ ಉಳಿದಿದೆ. ಕೇಂದ್ರ ಮರುವಿನ್ಯಾಸ ಯೋಜನೆಯು ಅನುಮೋದನೆಗೊಂಡು ಅದರ ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಘೋಷಣೆಯಾಗಿರುವಾಗ, ರಾಜ್ಯಗಳ ಪಾಲಿನ ಈ ಮೊತ್ತ ಇನ್ನೂ ಸಂದಾಯವಾಗದೆ ಉಳಿದಿರುವುದು ಏಕೆ?

ಆರ್ಥಿಕತೆಯು ಸುಧಾರಿಸಿಕೊಳ್ಳುವುದಕ್ಕೆ ಕನಿಷ್ಟ ಇನ್ನೂ ಒಂದು ವರ್ಷವಾದರೂ– ಬಹುಶಃ ಇನ್ನೂ ಹೆಚ್ಚು–ಬೇಕಾಗಬಹುದು. ಸಾಮಾಜಿಕ ಬಂಧವು ಪೂರ್ವಸ್ಥಿತಿಗೆ ಬರುವುದಕ್ಕೆ, ಕೋವಿಡ್ ಪ್ರಾರಂಭವಾಗುವುದಕ್ಕೆ ಮೊದಲು ನಮ್ಮ ದೇಶ ಇದ್ದ ಸ್ಥಿತಿಗೆ ಮತ್ತೆ ಬರುವುದಕ್ಕೆ ಕನಿಷ್ಠ ಐದು ಅಥವಾ ಹತ್ತು ವರ್ಷಗಳೇ ಬೇಕಾಗಬಹುದು. ಬೇರೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ನಾಯಕರುಗಳ ರಾಜಕಾರಣವು ನೈತಿಕ, ಬೌದ್ಧಿಕ ಶಕ್ತಿಯು ಆರ್ಥಿಕ, ಸಾಮಾಜಿಕ ಪುನರ್ನಿರ್ಮಾಣಕ್ಕಾಗಿ ಬಳಸಲ್ಪಡಬೇಕಾಗುವುದು.

ಈ ಸಂಕ್ರಾಮಿಕ ಪಿಡುಗು ಪ್ರಾರಂಭವಾದಾಗಿನಿಂದ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಭಾರತೀಯರು ತ್ಯಾಗ ಮಾಡಬೇಕೆಂದು ಕರೆ ಕೊಡುತ್ತಿದ್ದಾರೆ. ಸಂಘ ಜೀವಿಗಳಾಗುವುದಕ್ಕಾಗಿ ತಮ್ಮ ಸಮಯವನ್ನು, ತಮ್ಮ ಉದ್ಯೋಗಗಳನ್ನು ತಮ್ಮ ಜೀವನ ಶೈಲಿಗಳನ್ನು, ತಮ್ಮ ಮಾನವೀಯ ಸಾಂಸ್ಕೃತಿಕ ಪ್ರವೃತ್ತಿಗಳನ್ನು ತ್ಯಾಗ ಮಾಡಬೇಕೆಂದು ಕರೆ ನೀಡಿದ್ದಾರೆ. ಈಗ ದೇಶಕ್ಕಾಗಿ ಪ್ರಧಾನ ಮಂತ್ರಿಯೂ ಏನನ್ನಾದರೂ ತ್ಯಾಗ ಮಾಡಬೇಕೆಂದು ಜನ ಕೇಳಬೇಕು. ದೆಹಲಿಯ ಪುನರ್ವಿನ್ಯಾಸದ ಯೋಜನೆಯ ವಿಚಾರವೇ ಪ್ರಾರಂಭದಿಂದಲೂ ವಿವಾದಕ್ಕೊಳಗಾಗಿದೆ. ಈಗಂತೂ ಅದು ಖಂಡಿತಾ ಸಮರ್ಥನೀಯವಲ್ಲ. ಅದನ್ನು ಕೈಬಿಡಬೇಕು.

ಕೊನೆಯ ಮಾತು: ಈ ಲೇಖನಕ್ಕೆ ಅಡ್ಡಿಬಂದು ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯು ತನಗೆ ಸುರಕ್ಷಿತವೆನ್ನಿಸುವ ಇತರ ವಿಷಯಗಳ ಬಗ್ಗೆ ನಾನು ಬರೆಯುವ ಸಾಧ್ಯತೆಯನ್ನು ತೆರೆದಿಟ್ಟಿದೆ. ಆದರೆ ನಾನಂತೂ ಈ ಪತ್ರಿಕೆಯ ನನ್ನ ಅಂಕಣವನ್ನು ನಿಲ್ಲಿಸಬೇಕೆಂದು ನಿರ್ಧರಿಸಿದ್ದೇನೆ.

**(ಬೆಂಗಳೂರಿನಲ್ಲಿ ವಾಸಿಸುವ ರಾಮಚಂದ್ರ ಗುಹಾ ಪ್ರಸಿದ್ಧ ಲೇಖಕರು, ಇತಿಹಾಸಕಾರರು ಮತ್ತು ರಾಜಕೀಯ ಚಿಂತಕರು ಕೂಡಾ)**



(ಕೃಪೆ: ***ದ ವೈರ್,*** ೧೯ ಏಪ್ರಿಲ್, ೨೦೨೦

ಕನ್ನಡಕ್ಕೆ: **ಎಂ. ರಾಜು)**

# ಸಾಹಿತ್ಯ-ಧರ್ಮ-ಸಂಸ್ಕೃತಿ ಇತ್ಯಾದಿ ಕೆಲವು ಅನಿಸಿಕೆಗಳು, ನೆನಪುಗಳು

## ಕೆ.ಎಸ್. ನಿಸಾರ್ ಅಹಮದ್: ಒಂದು ನೆನಪು



'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು ಪದ್ಯದಲ್ಲಿ ಹೇಳಿಕೊಂಡರೂ, ಗದ್ಯದಲ್ಲಿ (ಅಂದರೆ ನಿಜ ಜೀವನದಲ್ಲಿ) ನಮ್ಮಂತೆಯೇ ಇದ್ದ ಕವಿ ನಿಸಾರ್ ಅಹಮದ್ ನಮ್ಮನ್ನಗಲಿದ್ದಾರೆ. ಕನ್ನಡ ಮಾತೃಭಾಷೆಯವರಷ್ಟೇ ಅದನ್ನು ಲೀಲಾಜಾಲವಾಗಿ, ಸೊಗಸಾಗಿ, ಒಂದಿಷ್ಟು ಸೃಜನಶೀಲವಾಗಿಯೂ ಬಳಸಿದ ಈ ಉರ್ದು ಮನೆಮಾತಿನ ಕವಿ ತಮ್ಮ ಪದ್ಯದಲ್ಲಿ ನಿಮ್ಮೊಡನಿದ್ದೂ ನಿಮ್ಮಂತಾಗದೆ ಎಂದು ಹೇಳಿಕೊಂಡಿರುವುದು-ಅದರ ವಿವರಗಳ ಹೊರತಾಗಿಯೂ-ಬಹುಶಃ ಅವರು ಕವಿತೆ ಬರೆಯಲು ಆರಂಭಿಸಿದಾಗ ಇದ್ದ ತಮ್ಮೊಡನೆಯ ಗೆಳೆಯರ ಗುಂಪಿನಿಂದ ದೂರವಾದುದಕ್ಕೆ ಕಾರಣವಾದ ಅವರ ಎರಡನೇ ಘಟ್ಟದ ಕಾವ್ಯದ ಸಾಮಾನ್ಯತೆಯನ್ನು ಮರೆಮಾಚಿಕೊಳ್ಳಲಿರಬಹುದು ಎಂಬ ಅನುಮಾನ ನನ್ನದು.

ಅಂದ ಮಾತ್ರಕ್ಕೆ ಅವರ ಕಾವ್ಯವೂ ಸೇರಿದಂತೆ ಅವರ ಸಾಹಿತ್ಯವನ್ನು ನಾನು ಸಾರಾಸಗಟಾಗಿ ಅಲ್ಲಗೆಳೆಯಲು ಹೊರಟಿಲ್ಲ. ನಾನು ಸದಾ ಗುಣಗುಣಿಸುವ ನಾಲ್ಕಾರು ಕನ್ನಡ ಗೀತೆಗಳಲ್ಲಿ ಅವರ 'ಜೋಗದ ಸಿರಿ ಬೆಳಕಿನಲ್ಲಿ'ಯೂ ಒಂದು. ಅವರ 'ಅಮೆರಿಕಾ ಅಮೆರಿಕಾ', 'ಮಾಸ್ತಿ', 'ಸಂಜೆ ಐದರ ಮಳೆ', 'ಮನಸು ಗಾಂಧಿ ಬಜಾರು' ಮುಂತಾದ 'ಸಂಜೆ ಐದರ ಮಳೆ' ಸಂಗ್ರಹದ ಕವನಗಳ ಆ ಕಾಲದ ಹಚ್ಚಹೊಸತನ, ಕನ್ನಡ ನುಡಿಗಟ್ಟಿಗೆ ಅವರು ಪ್ರದಾನ ಮಾಡಿದ ಹೊಸ ಲವಲವಿಕೆ ಹಾಗೂ ಬಾಗು ಬಳಕುಗಳು ಆಧುನಿಕ ಕನ್ನಡಕ್ಕೆ ಅವರು ನೀಡಿದ ಹೊಸ ಕೊಡುಗೆಗಳೇ. ಆದರೆ ನಂತರ 'ರಾಮನ್ ಸತ್ತ ಸುದ್ದಿ'ಯಂತಹ ಒಂದೆರಡು ಕವನಗಳಾಚೆ ಈ ಹಾದಿಯಲ್ಲಿ ಸುಸ್ತಾದಂತೆ ಅವರು ಹಿಡಿದ ಸುಲಭ ಜನಪ್ರಿಯತೆಯ ಹಾದಿ ಅವರ ಕಾವ್ಯ ಕನ್ನಡದ ಮಧ್ಯಮ ವರ್ಗಕ್ಕೆ ವಿರಾಮ ಕಾಲದಲ್ಲಿ ಬಾಯಿ ಮತ್ತು ಕಿವಿಗಳಿಗೆ ಮಾತ್ರ ಒದಗುವ ಸಾಹಿತ್ಯ ಸರಕಾಯಿತು. ಅದು ಅವರ ನಿಜ ಬಾಳ ಹೊಕ್ಕಳಿನಿಂದ ಹೊಮ್ಮಿದ್ದಲ್ಲ ಎಂಬುದನ್ನು ಸೂಚಿಸುತ್ತಾ ನಿಜ ಕನ್ನಡ ಕಾವ್ಯ ಚರಿತ್ರೆಯಿಂದ ಅವರು ಮರೆಯಾಗಲು ಕಾರಣವಾಯಿತೆಂದು ಹೇಳಬೇಕು.

ಇದು ಮುಂದೆ ಕ್ಯಾಸೆಟ್ ಕವಿತೆಗಳ ಮಹಾಪೂರದ ಬಾಗಿಲನ್ನೇ ತೆರೆದು ಅವರಿಗೆ ಸಾಕಷ್ಟು ಜನ ಮನ್ನಣೆ ಮತ್ತು ಲೌಕಿಕ ಯಶಸ್ಸನ್ನು ತಂದಿತಾದರೂ ಕನ್ನಡ ಕಾವ್ಯ ಸತ್ವಕ್ಕೆ ಹೊಸದೇನನ್ನೂ ನೀಡಲಿಲ್ಲ ಎಂಬುದು ಅಷ್ಟೇ ಸತ್ಯ. ಬಹುಶಃ ಈ ಅರಿವಿನ ದ್ವಂದ್ವದ ಸಂಕಟಗಳೇ ಅವರ ಸಾರ್ವಜನಿಕ ಜೀವನದ ಹಲವು ವಿಚಿತ್ರ ವರ್ತನೆಗಳಿಗೆ ಕಾರಣವೆನ್ನಬಹುದು. ಸ್ಥಾನಮಾನ-ಸನ್ಮಾನಗಳ ಹಪಾಹಪಿ, ಸೂಟು-ಬೂಟು ಟೈಗಳ ಖಯಾಲಿ, ಬರೀ ಉಸುಕು ತುಂಬಿರುವ, ತಲೆ ದಿಂಬಿಗೆ ಮಾತ್ರ ಅರ್ಹವೆನಿಸಿದ ಸ್ವಯಂ ಪ್ರಾಯೋಜಿತ ಅಭಿನಂದನಾ ಗ್ರಂಥಗಳ ಸರಣಿಯಂತಹ ಚಪಲಚೆನ್ನಿಗತನಕ್ಕೆ ಅವರನ್ನು ದೂಡಿದವು. ಆದರೆ ಷೇಕ್ಸ್‌ಪಿಯರ್‌ನ 'ಮಿಡ್‌ಸಮ್ಮರ್ ನೈಟ್ ಡ್ರೀಮ್ಸ್'ನ ಅವರ ಕನ್ನಡಾನುವಾದ ತುಂಬ ಸೊಗಸಾದದ್ದು. ಆದರೆ ನೆರೂಡಾನ ಸಾಹಿತ್ಯದ ಅನುವಾದ ಅವರ ಪಾಲಿಗೆ ತೀರಾ ಮಹತ್ವಾಕಾಂಕ್ಷೆಯದ್ದೆಂದೇ ಹೇಳಬೇಕು.

ನಿಸಾರ್ ಅಹಮದ್ ಅವರು ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಶಿವಮೊಗ್ಗದಲ್ಲಿ ನಡೆದ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆದರೆ ಸಮಕಾಲೀನ ಸಾಹಿತ್ಯ ಚರ್ಚೆಗಳಲ್ಲಿ ಇವಾವುಗಳ ಕುರುಹುಗಳೂ ಇಂದು ಉಳಿದಿಲ್ಲ ಎಂಬುದೇ ಅವರು ನಮ್ಮ ಸಾರಸ್ವತ ಲೋಕದಲ್ಲಿ ಬಂದು ಹೋದವರಷ್ಟೇ ಎನ್ನಿಸುವಂತೆ ಮಾಡಿರುವುದು.

ಕೊನೆಯದಾಗಿ: ನಿಸಾರ್ ಅಹಮದ್ ಬಾಲ್ಯದಲ್ಲಿ ನಮ್ಮ ತಂದೆಯ ವಿದ್ಯಾರ್ಥಿ. ಅದನ್ನು ನಮ್ಮ ತಂದೆ ಬಹಳ ಬಾರಿ ನೆನೆಸಿಕೊಳ್ಳುತ್ತಿದ್ದರು. ಅವರ ತಂದೆ ಹೊಸಕೋಟೆಯಲ್ಲಿ ಕಂದಾಯ ಇಲಾಖೆಯ ನೌಕರರಾಗಿದ್ದಾಗ ಅವರು ತಮ್ಮ ಈ ಮಗನನ್ನು ನಮ್ಮ ತಂದೆಯವರ ಮನೆಗೆ ಕನ್ನಡ ಕಲಿಯಲು ಪಾಠಕ್ಕೆ ಕಳಿಸುತ್ತಿದ್ದರಂತೆ. ಆಶ್ಚರ್ಯವೆಂದರೆ ಅದು ಕವಿವರ್ಯರಿಗೆ ಬಹು ಕಾಲ ನೆನಪೂ ಇತ್ತು ಎಂಬುದಕ್ಕೆ ನಾನು ೧೯೬೬ರಲ್ಲಿ ಪಿಯುಸಿ ಸೇರಲು ನಮ್ಮ ತಂದೆಯವರೊಂದಿಗೆ ಬೆಂಗಳೂರಿನ ಸರ್ಕಾರಿ ಕಾಲೇಜಿನ ಬಳಿ ಸುಳಿದಾಡುತ್ತಿದ್ದಾಗ ಅವರು ನಮ್ಮ ತಂದೆಯನ್ನು ಗುರುತಿಸಿ ನನಗೆ ಭೂಗರ್ಭಶಾಸ್ತ್ರ ಕೊಡಿಸಿ ತಮ್ಮ ಶಿಷ್ಯನನ್ನಾಗಿ ಮಾಡಬಹುದೆಂದು, ನಾವು ಮಾನ್ಯಮಾಡಲಾಗದ ಸಲಹೆ ನೀಡಿದ್ದು ಈಗ ನೆನಪಿಗೆ ಬರುತ್ತಿದೆ!

## ಮಠವೊಂದಕ್ಕೆ ಆಕಸ್ಮಿಕ ಭೇಟಿ



ಕಳೆದ ಸಂಚಿಕೆಯಲ್ಲಿ ನಾನು ಬರೆದ ನನ್ನ ಗೊಟ್ಟಿಕೆರೆ-ತುಮಕೂರು ಪ್ರವಾಸದ ಮೊದಲ ಚರಣದ ಒಂದು ವಿವರ ನೀಡಲು ಮರೆತಿದ್ದೆ. ಅದೆಂದರೆ ಶಿವಮೊಗ್ಗದಿಂದ ಹೊರಟ ನಮಗೆ ತಿಪಟೂರಿನಿಂದ ಗೊಟ್ಟಿಕೆರೆಗೆ ಇರುವ ಚಕ್ರವ್ಯೂಹದಂತಹ ಮಾರ್ಗದಲ್ಲಿ(ನೊಣವಿನ ಕೆರೆ ಬಳಿಯ ಆ ಊರಿಗೆ ಆ ಹೆಸರು ನೀಡಿರುವ ಕೆರೆಯಲ್ಲಿನ ಬೃಹತ್ ಜಲರಾಶಿ ಕಣ್ಣು ತುಂಬುವಂತಹುದು) ನಾವು ಕಳೆದುಹೋಗಬಾರದೆಂಬ ಎಚ್ಚರಿಕೆಯಿಂದ ಗೆಳೆಯ ಶಿವರಾಜು ನಮಗೆ ದಾರಿ ತೋರಿಸಲು ಅಲ್ಲಿನ ಕಿರಿಯ ಗೆಳೆಯ ಬಿ.ಎಂ. ಹರಿಪ್ರಸಾದರನ್ನು ನಿಯುಕ್ತಿಗೊಳಿಸಿದ್ದರು. ಅವರನ್ನು ಸೇರಿಕೊಳ್ಳಲು ನಾವು ಅವರಿದ್ದ ಶ್ರೀಗುರುಕುಲಾನಂದಾಶ್ರಮಕ್ಕೆ ಹೋದಾಗ, ನಮಗೆ ಅಚ್ಚರಿ ತಂದದ್ದು ಆ ಆಶ್ರಮದ ವಿಶಾಲ ಆವರಣ ಮತ್ತು ಭವ್ಯ ಕಟ್ಟಡ. ನಾನು ಕಟ್ಟಡದ ಒಳಪ್ರವೇಶಿಸತೊಡಗಿದೊಡನೆ ನನಗೆ ಬೂಟುಬಿಚ್ಚಿಯೇ ಒಳಗಡೆ ಪ್ರವೇಶ ಸಾಧ್ಯ ಎಂಬ ಸೂಚನೆ ನಮ್ಮನ್ನು ಸ್ವಾಗತಿಸಲು ಬಂದಿದ್ದ ಹರಿಪ್ರಸಾದರಿಂದಲೇ ಬಂತು. ನಾನು ಬೂಟು ಬಿಚ್ಚಿ ನಡೆಯಲಾರೆ ಎಂದು ಹೇಳಿದಾಗ ಅವರಿಗೆ ಕಸಿವಿಸಿಯಾದಂತಾಗಿ ಅವರು ಅಲ್ಲಿಂದ ಕಾಣೆಯಾದರು. ಅಷ್ಟರಲ್ಲಿ ನನ್ನ ಪತ್ನಿ ಮತ್ತು ಗೆಳೆಯ ಚಂದ್ರು ಮಠದ ಒಳಹೋಗಿಬಿಟ್ಟಿದ್ದರು. ಹೊರಗೆ ಚಿಕ್ಕ ಚೌಕಿಯಲ್ಲಿ ಒಂದು ಸ್ಟೂಲಿನ ಮೇಲೆ ನಾನೊಬ್ಬನೇ ಮಠದ ಹೊರಗಿನ ಕನಕದಾಸನಂತೆ ಕೂರಬೇಕಾಯಿತು. ಘಳಿಗೆಗಳು ಕಳೆದಂತೆ ನನಗೆ ಮುಜುಗರ-ಸಂಕಟ-ಸಿಟ್ಟು ಮುಪ್ಪುರಿಗೊಂಡು ನಾನು ವಾಪಸ್ ನನ್ನ ಕಾರಿನಲ್ಲಿ ಹೋಗಿ ಕೂರಲು ಯೋಚಿಸುತ್ತಿದ್ದಂತೆ ಕಾವಿ ತೊಟ್ಟ ಮಧ್ಯ ವಯಸ್ಸಿನ ಸೌಮ್ಯ ಮುಖದ ವ್ಯಕ್ತಿಯೊಬ್ಬರು ಇದ್ದಕ್ಕಿದ್ದಂತೆ ನನ್ನ ಬಳಿ ಬಂದು ನಸುನಕ್ಕು ನನ್ನ ಕೈ ಹಿಡಿದು ಕಟ್ಟಡದೊಳಕ್ಕೆ ನಡೆಸಿಕೊಂಡು ಹೊರಟರು.

ಈ ಕಾವಿಧಾರಿ ವ್ಯಕ್ತಿ ಈ ಗುರುಕುಲದ ಗುರುಗಳಾದ ಶ್ರೀ ಇಮ್ಮಡಿ ಕರಿಬಸವದೇಶಿಕೇಂದ್ರ ಮಹಾಸ್ವಾಮಿಗಳು. ಅವರು ನನ್ನನ್ನು ಕೈ ಹಿಡಿದು ಕರೆತಂದದ್ದು ತಮ್ಮ ತಂಪಾದ ವಿಶಾಲ ಕೊಠಡಿಗೆ. ಅಷ್ಟರಲ್ಲಿ ನನ್ನ ಪತ್ನಿ ಮತ್ತು ಗೆಳೆಯರೂ ಅಲ್ಲಿಗೆ ಬಂದರು. ಅವರ ಹಿಂದೆಯೇ ಹರಿಪ್ರಸಾದರೂ ಎಲ್ಲ ಸುಗಮವಾಗಿ ನಡೆದದ್ದರ ಬಗ್ಗೆ ಹರ್ಷಚಿತ್ತರಾಗಿ ಅಲ್ಲಿ ನಿಂತಿದ್ದರು! ಸ್ವಾಮೀಜಿ ನಮ್ಮ ಉಭಯಕುಶಲೋಪರಿ ವಿಚಾರಿಸತೊಡಗಿದಾಗ ನಾನು ಆಗ ತಾನೇ ನನಗಾದ ಮುಜುಗರವನ್ನು ಹೇಳದೆ ಬಿಡಲಿಲ್ಲ. ಪಾದರಕ್ಷೆಗಳಿಗೆ ಸಂಬಂಧಿಸಿದ ನಿಯಮ ಒಂದು ಮಿತಿಯಲ್ಲಿದ್ದು ಅಸಹಾಯಕ ಯಾತ್ರಿಕರ ಮುಜುಗರವನ್ನು ತಪ್ಪಿಸಬಹುದೆಂದು ಸೂಚಿಸಿದೆ. ಸ್ವಾಮೀಜಿ ಸುಮ್ಮನೆ ತಲೆಯಾಡಿಸಿದರು.

ಮಠದ ಸ್ವಾಮೀಜಿಯವರನ್ನು ಭೇಟಿ ಮಾಡುವ ಸಂಗತಿ ನನಗೆ ಮೊದಲೇ ಗೊತ್ತಿದ್ದರೆ ನಾನು ಆ ಕಟ್ಟಡದ ಬಳಿಯೇ ಹೋಗುತ್ತಿರಲಿಲ್ಲವೇನೋ. ಆದರೆ ಇದು ಗೊತ್ತಿದ್ದೇ, ಈ ಶಿವರಾಜು ಮತ್ತು ಹರಿಪ್ರಸಾದ್ ಸೇರಿ ನಾನು ಸ್ವಾಮಿಗಳನ್ನು ಭೇಟಿ ಮಾಡುವಂತೆ ಪಿತೂರಿ ಮಾಡಿದ್ದರು! ಆದರೆ ಸ್ವಾಮೀಜಿಯವರೊಡನೆ ಮಾತು ಮುಂದುವರೆದಂತೆ ಅವರಿಗೂ ನನ್ನನ್ನು ಭೇಟಿ ಮಾಡಿ ಮಾತಾಡುವ ಸದಾಶಯ ಇದ್ದುದು ಗೊತ್ತಾಯಿತು. ಅವರು ಹರಿಪ್ರಸಾದರ ಮೂಲಕ ನಮ್ಮ 'ಹೊಸ ಮನುಷ್ಯ'ದ ಓದುಗರಾಗಿದ್ದರು. ಹಾಗೇ ಪತ್ರಿಕೆಗೆ ಸುಮಾರು ೨೫ ಜನ ಆಯ್ದ ಓದುಗರ ಚಂದಾ ನೀಡಿ ಪ್ರೋತ್ಸಾಹಿಸುತ್ತ ಬಂದಿದ್ದರು ಕೂಡ. ಸ್ವಾಮೀಜಿ ಪತ್ರಿಕೆಗಿಂತ ಹೆಚ್ಚಾಗಿ ಪ್ರಸ್ತಾಪಿಸಿ ಮೆಚ್ಚುಗೆಯ ಮಾತನ್ನಾಡಿದ್ದು 'ಗಾಂಧಿ ಕಥನ'ದ ಬಗ್ಗೆ. ಅದನ್ನು ಪೂರ್ಣ ಓದಿದ್ದ ಅವರು 'ಇದು ನಿಮ್ಮ ತಪಸ್ಸಿನ ಫಲ' ಎಂದಾಗ, ಈ ಕೃತಿ ನಾನು ನಿರೀಕ್ಷಿಸದಿದ್ದ ಜಾಗಗಳಲ್ಲೆಲ್ಲ ಕ್ರಿಯಾಶೀಲವಾಗಿದೆ ಎಂದು ಗೊತ್ತಾಗಿ ನನ್ನ ಪ್ರಯತ್ನ ಇನ್ನಷ್ಟು ಸಾರ್ಥಕವೆನಿಸಿತು. ಅಧ್ಯಯನಶೀಲರೆಂದು ಕಂಡ ಅವರ ವಿಶೇಷ ಆಸಕ್ತಿಯ ಅಧ್ಯಯನ ಕ್ಷೇತ್ರ ಯಾವುದೆಂದು ಕೇಳಿದೆ. ಅವರು 'ಅಲ್ಲಮನ ವಚನಗಳು' ಎಂದಾಗ ನಾನು

ಆಕಸ್ಮಿಕವೇ ಆದರೂ ಬರಬೇಕಾದ ಕಡೆಯೇ ಬಂದಿದ್ದೇನೆ ಎಂಬ ಸಂತೋಷ ಉಂಟಾಯಿತು. ಈ ಮಠ ಜಾತಿ-ಧರ್ಮಗಳ ಬೇಧವಿಲ್ಲದೆ ನೂರಾರು ಜನ ಮಕ್ಕಳಿಗೆ ದಾಸೋಹ ಸಹಿತವಾದ ಶಿಕ್ಷಣ ವ್ಯವಸ್ಥೆಯನ್ನೂ ಮಾಡುತ್ತಿದೆ ಎಂದು ತಿಳಿದು ಹೆಮ್ಮೆಯೂ ಉಂಟಾಯಿತು.

ನಾವು ಹೊರಟು ನಿಂತಾಗ ಇದ್ದಕ್ಕಿದ್ದಂತೆ ನಮ್ಮ ತಂಡದ ಮೂವ್ವರಿಗೂ ಸ್ವಾಮೀಜಿಯವರಿಂದ ಹಾರಾರ್ಪಣೆ-ಫಲಪುಷ್ಪ ಹಾಗೂ ಮಂತ್ರಾಕ್ಷತೆಯ ಗೌರವಾರ್ಪಣೆಯೂ ನಡೆದಾಗ ನಾನು ಬೇಡವೆನುವ ಸ್ಥಿತಿಯಲ್ಲಿರಲಿಲ್ಲ! ನಂತರ ಹರಿಪ್ರಸಾದ್ ನಮ್ಮನ್ನೆಲ್ಲ ಮಠದ ಆವರಣದೊಳಕ್ಕೆ ಕರೆದುಕೊಂಡು ಹೋದರು. ಅಲ್ಲಿದ್ದ ಬಸವಣ್ಣನ ಪ್ರತಿಮೆಯ ಮುಂದೆ ನಮ್ಮೊಂದಿಗೆ ನಿಂತು ಚಿತ್ರ ತೆಗೆಸಿಕೊಂಡು ಅರ್ಧ ತಾಸಿಗೆ ಮುಂಚೆ ನಡೆದಿದ್ದ ಮುಜುಗರದ ನೆನಪನ್ನೆಲ್ಲ ಆಳಿಸಿ ಹಾಕಿದರು. ಎನ್‌ಸಿಸಿಯ ಉನ್ನತ ಪದವಿ ಪಡೆದು ಶಿಸ್ತಿನ ಸಿಪಾಯಿಯಾದ ಈ ಹರಿಪ್ರಸಾದರಿಗೆ ಸಂಬಂಧಿಸಿದ ಒಂದೇ ಒಂದು ಕಿರಿ ಕಿರಿ ಎಂದರೆ ಅವರಿಗೆ ಕರೆ ಮಾಡಿದಾಗಲೆಲ್ಲ ಆ ಕಡೆಯಿಂದ ಕಿವುಗಡಚಿಕ್ಕುವಂತೆ ಕೇಳುವ ಸೈನಿಕ ಪಥಸಂಚಲನದ ದೇಶಪ್ರೇಮದ ಹಾಡುಗಳು: 'ಸಾರೇ ಜಹಾನ್ ಸೆ ಅಚ್ಛಾ...', 'ಕದಂ ಕದಂ ಬಢಾಯೆಗಾ...', 'ಮೇರೆ ವತನಂ ಕೆ ಲೋಗೋಂ....' ಇತ್ಯಾದಿ. ಇದು ಮಿತಿ ಮೀರಿದ ಶಿಸ್ತು ಮತ್ತು ಕಿವಿಗಡಚಿಕ್ಕುವ ದೇಶಪ್ರೇಮ!

## ಆಕಾಶವಾಣಿಯ ಅಮೂಲ್ಯ ರತ್ನಗಳು

ಕರ್ನಾಟಕದ ವಿವಿಧ ಆಕಾಶವಾಣಿ ಕೇಂದ್ರಗಳು ತಮ್ಮ ಧ್ವನಿ ಸಂಗ್ರಹಾಲಯದಿಂದ ಹಲವಾರು ಅಮೂಲ್ಯ ಕಾರ್ಯಕ್ರಮಗಳನ್ನು 'ಯೂ-ಟ್ಯೂಬ್'ಗೆ ತುಂಬಿ ಒಂದು ಸಾರ್ಥಕ ಕೆಲಸ ಮಾಡಿವೆ. ತೊಂಬತ್ತರ ದಶಕದಲ್ಲಿ ಬಣ್ಣದ ದೂರದರ್ಶನ ಮತ್ತು ಆನಂತರ ಬಂದ ವೈವಿಧ್ಯಮಯ ಖಾಸಗಿ ಉಪಗ್ರಹ ಟಿವಿ ವಾಹಿನಿಗಳ ಹಾವಳಿ ಶುರುವಾಗುವ ಮುನ್ನ, ಆಕಾಶವಾಣಿ ಒಂದು ಸರ್ಕಾರಿ ಮಾಧ್ಯಮವಾಗಿ ಏನೆಲ್ಲ ನಿರ್ಬಂಧಗಳ ನಡುವೆಯೂ ಜನರಿಗೆ ಅವರ ನೆಮ್ಮದಿ ಕೆಡಿಸದಂತಹ ನಿರುದ್ವಿಗ್ನ ಸುದ್ದಿ, ಉದಾರವಾದಿ ಮೌಲ್ಯಗಳ ಶಿಕ್ಷಣ ಮತ್ತು ಶುದ್ಧ ಮನರಂಜನೆಯನ್ನು ಒದಗಿಸುತ್ತಿದ್ದ ಒಂದು ಸದಭಿರುಚಿಯ ಕೌಟುಂಬಿಕ ಮಾಧ್ಯಮವಾಗಿತ್ತು. ಅದು ಸುದ್ದಿ ವರದಿಯೂ ಸೇರಿದಂತೆ ಸಂಗೀತ, ನಾಟಕ, ರೂಪಕ, ಸಾಹಿತ್ಯ-ಸಂಸ್ಕೃತಿ, ವಿಜ್ಞಾನ, ಶಿಕ್ಷಣ, ಕ್ರೀಡೆ ಹೀಗೆ ಸಾರ್ವಜನಿಕ ಜೀವನದ ಯಾವುದೇ ಕ್ಷೇತ್ರವನ್ನು ಉದಾಹರಿಸಿ, ಆ ಎಲ್ಲ ಕ್ಷೇತ್ರಗಳ ಹಲವಾರು ಪ್ರತಿಭೆಗಳನ್ನು ತನ್ನ ಮಾಧ್ಯಮದ ಮೂಲಕ ಪರಿಚಯಿಸಿ ಪ್ರೋತ್ಸಾಹಿಸಿದ ಹೆಗ್ಗಳಿಕೆ ಅದರದ್ದು. ಈ ದೃಷ್ಟಿಯಿಂದ ಅದರ ಧ್ವನಿ ಸಂಗ್ರಹಾಲಯ ಇತಿಹಾಸದೊಳಕ್ಕೊಂದು ಕುತೂಹಲಕಾರಿ ಪಯಣವೇ ಆದೀತು. ನಾನು ದೆಹಲಿ ಆಕಾಶವಾಣಿಯ ಸುದ್ದಿ ವಿಭಾಗದಲ್ಲಿದ್ದಾಗ ಅದರ ಧ್ವನಿಭಂಡಾರದಲ್ಲಿದ್ದ ಓಂಕಾರನಾಥ್ ಠಾಕೂರ್-ಅಬ್ದುಲ್ ಕರೀಂ ಖಾನ್-ಅನ್ನಪೂರ್ಣಾದೇವಿಯವರ ಗಾಯನ/ವಾದನಗಳ ಅಪೂರ್ವ ಸಂಗೀತದ ತುಣುಕುಗಳನ್ನೂ (ನಂತರ ಅವು ಕ್ಯಾಸೆಟ್ಟುಗಳ ಮೂಲಕ ಮಾರುಕಟ್ಟೆಗೂ ಬಂದವು) ಗಾಂಧಿ, ನೆಹರು, ಪಟೇಲ್, ಸುಭಾಷ್‌ರ ಧ್ವನಿ ಮುದ್ರಿಕೆಗಳನ್ನು ಮಾತ್ರವಲ್ಲ ನನ್ನ ನೆಚ್ಚಿನ ನಾಯಕ ಲೋಹಿಯಾ ಅವರ ಧ್ವನಿ ಕೇಳಿ ರೋಮಾಂಚನಗೊಂಡಿದ್ದೂ ಅಲ್ಲೆ.

ಬಿಸ್ಮಿಲ್ಲಾ ಖಾನ್-ರವಿಶಂಕರ್-ಚೌರಾಸಿಯಾರಿಂದ ಹಿಡಿದು ದೊರೆಸ್ವಾಮಿ ಅಯ್ಯಂಗಾರ್-ಬೇಂದ್ರೆ-ವೀಸಿ-ಶ್ರೀರಂಗರವರೆಗೆ ಹಲವು ಕ್ಷೇತ್ರಗಳ ಅನೇಕ ಹಿರಿಯ ಪ್ರತಿಭೆಗಳನ್ನು ತನ್ನ ಮಾರ್ಗದರ್ಶಿಗಳನ್ನಾಗಿ ನೇಮಕ ಮಾಡಿಕೊಂಡು ಸಾರ್ವಜನಿಕರಿಗೆ ಸದಾ ಅತ್ಯುತ್ತಮವಾದುದನ್ನು ನೀಡುತ್ತಾ ಬಂದ ಆಕಾಶವಾಣಿ ಎಂಬ ಸಂಸ್ಥೆ ಟಿವಿಯ ಬಣ್ಣ-ಬೆಡಗು-ಬಿನ್ನಾಣಗಳ ಎದುರು ತಾನೂ ಉಳಿದುಕೊಳ್ಳಬಲ್ಲ ಒಂದು ಸುಯೋಜಿತ ಕಾರ್ಯ ಪ್ರಣಾಳಿ ಇಲ್ಲದೆ ಅದನ್ನು ಅದರ ಶಕ್ತಿಗಳ ನೆಲೆಯಲ್ಲಿ ಎದುರಿಸಲು ಹೋಗಿ ತನ್ನ ರುಚಿ ಕೆಡಿಸಿಕೊಂಡು ಆಡಳಿತ ಅರಾಜಕತೆಗೆ ಸಿಕ್ಕಿ ತನ್ನ ಪ್ರಾಣಶಕ್ತಿಯನ್ನೇ ಕಳೆದುಕೊಂಡು ಕುಸಿದುಬಿದ್ದಿತು. ಆದರೂ ಈಗಲೂ ಕೆಲವರು ಅದರ ಸರಳ ಸುದ್ದಿ ಪ್ರಸಾರ ಮತ್ತು ಶ್ರೀಮಂತ ಸಂಗೀತ ಸಿರಿಗಾಗಿ ಅದನ್ನೇ ನೆಚ್ಚಿಕೊಂಡಿರುವುದು ಅದರ ಆಂತರಿಕ ಶಕ್ತಿಯನ್ನು ಸಾಬೀತು ಪಡಿಸುತ್ತದೆ.

ಅದೇನೇ ಇರಲಿ, ಆಕಾಶವಾಣಿಯ ಆಡಳಿತದ ಯಾವುದೋ ಒಂದು ಹಂತದಲ್ಲಿ ಹೊಸ ಆಲೋಚನೆಯ ಮಿಂಚು ಹೊಳೆದಂತೆ ಈ ಯೂ-ಟ್ಯೂಬ್ ಸಾಹಸ ಆರಂಭಿಸಿ ಈ ಸಂಸ್ಥೆಯ ನೆನಪನ್ನು ಮತ್ತೆ ಹಸಿರಾಗಿಸುವ ಪ್ರಯತ್ನ ಮಾಡಿದೆ. ಈಗ ಯೂ-ಟ್ಯೂಬ್‌ನಲ್ಲಿ ಕಾಣಬರುತ್ತಿರುವ ಈ ಕೊಡುಗೆಗಳನ್ನು ನೋಡಿದಾಗ ಈ ಸಂಸ್ಥೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ ನನಗೆ ಹೆಮ್ಮೆಯೆನಿಸುತ್ತದೆ. ಆದರೆ ಧ್ವನಿಭಂಡಾರ ಅಂದರೆ ಅತಿ ಹಳೆಯ ಸರಕೇ ಆಗಬೇಕಿಲ್ಲ. ಎಂಬತ್ತು ತೊಂಬತ್ತರ ದಶಕದಲ್ಲೂ ಅನೇಕ ಪ್ರಯೋಗಗಳು ನಡೆದಿವೆ. ಅವೂ ಹೊರಗೆ ಬರಬೇಕು.

ಆಕಾಶವಾಣಿ ಕೇಂದ್ರಗಳ ಧ್ವನಿಭಂಡಾರವೆಂದರೆ ಅದೊಂದು ಒಬ್ಬರ ಜವಾಬ್ದಾರಿ/ಆಯ್ಕೆಗಳಿಂದ ಸುಯೋಜಿತವಾದುದೇನಲ್ಲ. ಯಾವುದು ಧ್ವನಿ ಭಂಡಾರಕ್ಕೆ ಸೇರಬೇಕೆಂಬುದರ ನಿರ್ದಿಷ್ಟ ನೀತಿಯಿಲ್ಲ. ಎಲ್ಲರೂ ಅದರಲ್ಲಿ ಕೈಹಾಕುವವರೇ. ಒಬ್ಬರು ಮಾಡಿದ ಒಳ್ಳೆಯ ಕಾರ್ಯಕ್ರಮಗಳನ್ನು ನಂತರ ಬಂದವರು ಅಸೂಯೆಯಿಂದಲೋ ಅಥವಾ ಮತ್ತೊಂದು ದೌರ್ಬಲ್ಯದಿಂದಲೋ ಅಳಿಸುವವರೇ. ಆದರೂ ಹೇಗೋ 'ಕುಸುಮ ಬಾಲೆ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ದೇವನೂರ ಮಹಾದೇವ ಅವರನ್ನು ನಾನು ಸಂದರ್ಶಿಸಿದ್ದ ಪುಟ್ಟ ಧ್ವನಿಮುದ್ರಿಕೆಯೊಂದು ಹೇಗೋ ಉಳಿದುಕೊಂಡು ನನ್ನ ಹೆಸರಿನ ಸೂಚನೆಯೂ ಇಲ್ಲದೆ ಈ ಯೂ-ಟ್ಯೂಬ್ ಸಮೂಹಕ್ಕೆ ಸೇರಿಬಿಟ್ಟಿದೆ. ಅದು ನನಗೆ ಗೊತ್ತಾದದ್ದು ನನ್ನ ಮಿತ್ರರೊಬ್ಬರು ಅದನ್ನು ನನಗೆ ಕಳಿಸಿದಾಗಲೇ. ಇನ್ನೊಬ್ಬರು ನಾನು ನಿರ್ದೇಶಿಸಿದ ನಾಟಕವೊಂದು ಇರುವುದನ್ನೂ ತಾವು ಕಂಡಿದ್ದಾಗಿ ತಿಳಿಸಿದರು. ಅದು ಯಾವುದೋ ನನಗೆ ತಿಳಿದಿಲ್ಲ!

ಈ ಸಂಸ್ಥೆಯಿಂದ ಸ್ವಯಂ ನಿವೃತ್ತಿ ಪಡೆದ ಹದಿನೈದು ವರ್ಷಗಳ ನಂತರದ ಈ ಸಂದರ್ಭದಲ್ಲಿ, ನಾನು ಕಾರ್ಯಕ್ರಮಾಧಿಕಾರಿಯಾಗಿ ಕೆಲಸ ಮಾಡಿದ ಕರ್ನಾಟಕದ ಐದು ಕೇಂದ್ರಗಳಲ್ಲಿ (ಇನ್ನೆರಡು ಆಡಳಿತಾತ್ಮಕ ನಿರ್ದೇಶಕ ಹುದ್ದೆ) ನಾನು ನಿರ್ಮಿಸಿ ಹೆಮ್ಮೆಪಟ್ಟುಕೊಂಡ ಕಾರ್ಯಕ್ರಮಗಳು ನೆನಪಿಗೆ ನುಗ್ಗಿ ಬರುತ್ತಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಪಟ್ಟಿ ಮಾಡುವುದಾದರೆ ಅದು ಹೀಗಿದೆ: ಭೀಮಸೇನ್ ಜೋಷಿ, ರಾಜೀವ್ ತಾರಾನಾಥ್, ಎನ್ ನರಸಿಂಹಯ್ಯ(ಕನ್ನಡದ ಆದಿ ಪತ್ತೇದಾರಿ ಕಾದಂಬರಿಕಾರರಾದ ಇವರ ವಿಳಾಸ ಹುಡುಕಿ ಇವರನ್ನು ಸಂದರ್ಶನಕ್ಕೆ ಕರೆದಾಗ ಆ ವೃದ್ಧರು ತಮ್ಮನ್ನು ಗುರುತಿಸಿ ಆಕಾಶವಾಣಿಯಂತಹ 'ಪ್ರತಿಷ್ಠಿತ' ಸಂಸ್ಥೆ ಆಹ್ವಾನಿಸಿದ್ದರ ಬಗ್ಗೆ ಎಷ್ಟು ಭಾವುಕರಾಗಿದ್ದರೆಂದರೆ ಅವರನ್ನು ಸಂದರ್ಶಿಸಿದಾಗ ನನಗೇ ಕಂಠ ತುಂಬಿ ಬಂದಿತ್ತು) ಶಿವರಾಮ ಕಾರಂತ, ಜಿ.ಎಸ್. ಶಿವರುದ್ರಪ್ಪ, ಚದುರಂಗ, ಕೆ.ವಿ. ಸುಬ್ಬಣ್ಣ, ಎಸ್. ನಿಜಲಿಂಗಪ್ಪ, ತೇಜಸ್ವಿ, ಬೆಳಗೆರೆ ಕೃಷ್ಣಶಾಸ್ತ್ರಿ ಇವರುಗಳ ಸಂದರ್ಶನಗಳು, ಜಿಎಸ್ಸೆಸ್, ಚಿದಾನಂದ ಮೂರ್ತಿ, ಕೆ.ವಿ. ನಾರಾಯಣ, ಕಲ್ಗುಡಿ, ಎಚ್ಚೆಸ್ಸಾರ್, ಎಚ್.ಎಸ್. ಶಿವಪ್ರಕಾಶ್, ಕೆ.ಬಿ.ಸಿದ್ದಯ್ಯ, ನಂಗಲಿ ಅವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಂಡು ರೂಪಿಸಿದ ಭಾಷಾ, ಕಾವ್ಯ, ಕಥಾ ಮತ್ತು ವಿಮರ್ಶಾ ಕಮ್ಮಟಗಳು, 'ಜನಪದ ಶಿವ', 'ಮಳೆ ಬಂತು ಮಳೆ', 'ಕಾರಂತರಿಗೇಕೆ ಕೋಪ ಬರುತ್ತದೆ?'(ಇದಕ್ಕಾಗಿ ಸಾಲಿಗ್ರಾಮದ ಕಾರಂತರ ಮನೆಗೆ ಹೋಗಿ ಅವರ ಅಪೂರ್ವ ಆತಿಥ್ಯ ಸ್ವೀಕರಿಸಿ ಬಂದ ಅನುಭವ ದಾಖಲರ್ಹವಾದದ್ದು.), ಎಚ್.ರಾಜಾರಾಯರ 'ಕಾಂತಾಪುರ' ಕಾದಂಬರಿಯನ್ನಾಧರಿಸಿದ ರಾಷ್ಟ್ರೀಯ ನಾಟಕ, ಮೋಹನ ರಾಕೇಶರ 'ಅಲೆಗಳಲ್ಲಿ ರಾಜಹಂಸಗಳು', ಸಾರಾ ಅಬೂಬಕರ್ ಅವರ ಕಾದಂಬರಿಯನ್ನಾಧರಿಸಿದ 'ಚಂದ್ರಗಿರಿಯ ತೀರದಲ್ಲಿ' ದೇವನೂರ ಮಹಾದೇವ ಅವರ 'ಒಡಲಾಳ' ಕಾದಂಬರಿ ಆಧರಿಸಿದ ನಾಟಕ, ಪತ್ತೇದಾರಿ ನಾಟಕ ಚಕ್ರಕ್ಕಾಗಿ ನಾನೇ ಬರೆದು ತಯಾರಿಸಿದ 'ಪಾಪದ ಪಿಶಾಚಿ' ಮತ್ತು ಕುವೆಂಪು ವಿರಚಿತ 'ಶೂದ್ರ ತಪಸ್ವಿ' ಮತ್ತು 'ಜಲಗಾರ' ನಾಟಕಗಳು.

ಆದರೆ ಇವುಗಳಲ್ಲಿ ಬಹುತೇಕ ನನ್ನ ವರ್ಗಾವಣೆಯ ನಂತರದಲ್ಲೇ ಅಳಿಸಿಹೋಗಿವೆ. ಕೆಲವು ಉಳಿದಿವೆ ಎಂದು ಆಗಾಗ್ಗೆ ಅವು ಮರುಪ್ರಸಾರವಾದಾಗ ಗೆಳೆಯರು ತಿಳಿಸುತ್ತಿರುತ್ತಾರೆ. ಹೀಗೆ ಉಳಿದಿರುವುವುಗಳಲ್ಲಿ 'ಯೂ-ಟ್ಯೂಬ್'ಗೆ ಎಷ್ಟು ಹೋಗಿವೆ, ಹೋಗುತ್ತವೆ ಎಂಬುದನ್ನು ಕಾದು ನೋಡಬೇಕು. ಆದರೆ ಒಂದು ಮಾತು: ಆಕಾಶವಾಣಿ ಕಾರ್ಯಕ್ರಮ ವಿಭಾಗಕ್ಕೆ ನಾನು ಸೇರಿದ ಸಮಯ ಸಾಮಾಜಿಕವಾಗಿ ಎಂತಹ ಸಂಧಿಕಾಲವಾಗಿತ್ತೆಂದರೆ ಪ್ರತಿಭೆ ಮತ್ತು ಶ್ರದ್ಧೆಗಳೆರಡರಿಂದಲೇ ಅಲ್ಲಿ ತಲೆ ಎತ್ತಿ ಬಾಳಲು, ಅರ್ಹ ಮಾನ್ಯತೆ ಪಡೆಯಲು ಅಸಾಧ್ಯವಾಗಿತ್ತು. ನನ್ನ ಈ ಮೇಲಿನ ಕಾರ್ಯಕ್ರಮಗಳ ಪಟ್ಟಿಯ ನಡುವೆ ನನಗೆ ಈಗಲೂ ಹೆಚ್ಚಾಗಿ ಕೇಳುವುದು ಈ ತಲೆ ಎತ್ತಿ ಬಾಳಲು ಪಟ್ಟ ಕಷ್ಟದ ನಿಟ್ಟುಸಿರುಗಳೇ. ತಲೆ ಬಾಗದವರ ವಿರುದ್ಧ ಬೀಸಿದ ಕತ್ತಿಗಳ ಝಳಪುಗಳೇ. ಈ ಬಗ್ಗೆ ಬರೆಯುವದು ಬಹಳವಿದೆ. ಮತ್ತೊಮ್ಮೆ ಬರೆಯುವೆ.

**-ಡಿ.ಎಸ್. ನಾಗಭೂಷಣ**

**ಹಿರಿಯ ಸಾಹಿತಿಗಳಾದ ಶ್ರೀನಿವಾಸ ಉಡುಪ ಹಾಗೂ ಬಿಳುಮನೆ ರಾಮದಾಸ್ ಮತ್ತು ಸಂಗೀತ ವಿದುಷಿ ಶ್ಯಾಮಲಾ ಭಾವೆ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.-ಸಂ.**

ಧರ್ಮವಿಚಾರ ಮಟ

# ನಿಸರ್ಗದತ್ತ ಮಹಾರಾಜ್ ಅವರ ಬದುಕು ಮತ್ತು ಬೋಧನೆಗಳು

–ಓ.ಎಲ್. ನಾಗಭೂಷಣ ಸ್ವಾಮಿ



ನಿಸರ್ಗದತ್ತ ಮಹಾರಾಜ್. ಈ ಹೆಸರು ನನ್ನ ಕಿವಿಗೆ ಬಿದ್ದದ್ದೇ ೧೯೯೧ರಲ್ಲಿ, ಹೃಷಿಕೇಶದಲ್ಲಿ ಸುಮಾರು ಎಂಬತ್ತು ದಾಟಿದ ವೃದ್ಧ ಬ್ರಹ್ಮಾನಂದರು, ಸ್ವಾಮೀ ಶಿವಾನಂದರ ಶಿಷ್ಯರು, 'ಪಾಯಿಂಟರ್ಸ್ ಫ್ರಂ ನಿಸರ್ಗದತ್ತ ಮಹಾರಾಜ್' ಪುಸ್ತಕ ಓದುತ್ತ ನಡೆಸುತ್ತಿದ್ದ ಪ್ರವಚನದ ಮೂಲಕ. ಆ ಕಾಲದಲ್ಲಿ ನನ್ನ ಮನಸಿನ ತಳಮಳ, ಆತಂಕ, ಮಂಕು ಇವೆಲ್ಲ ನಿಸರ್ಗದತ್ತ ಮಹಾರಾಜರ ಬೋಧನೆಯಿಂದ ನಿಧಾನವಾಗಿ ಕರಗಿದವು. ಅವರ ಬಗ್ಗೆ ತಿಳಿಯಬೇಕೆಂಬ ಕುತೂಹಲ ಹುಟ್ಟಿತು.

ಅವರ ಬೋಧನೆ ನನ್ನ ಮನಸಿಗೆ ಇಳಿಯುವುದಕ್ಕೆ ಹತ್ತೇ ವರ್ಷ ಮೊದಲು, ೧೯೮೧ರಲ್ಲಿ, ಅವರು ಇಲ್ಲವಾಗಿದ್ದರು. ನಿಸರ್ಗದತ್ತ ಮಹಾರಾಜರು ತಂಬಾಕು ವ್ಯಾಪಾರದ ಸಣ್ಣ ಅಂಗಡಿ ಇಟ್ಟುಕೊಂಡಿದ್ದರು. ಅದೇ ಅವರ ಜೀವನೋಪಾಯ. ಅವರಿಗೆ ಹೆಂಡತಿ, ಸುಮತಿ ಬಾಯಿ ಇದ್ದರು. ನಾಲ್ಕು ಮಕ್ಕಳಲ್ಲಿ ಮೂರು ಹೆಣ್ಣು, ಒಂದು ಗಂಡು. ತಮ್ಮ ಹೆಂಡತಿಯ ಸಾವು, ಮಗಳ ಸಾವು ಕಂಡಿದ್ದರು. ತಮ್ಮ ಎಂಬತ್ತನಾಲ್ಕನೆಯ ವಯಸಿನಲ್ಲಿ (ಹುಟ್ಟಿದ್ದು ೧೮೯೭) ಕ್ಯಾನ್ಸರ್ ಬಂದು ತೀರಿಕೊಂಡರು ಅನ್ನುವುದು ತಿಳಿದಾಗ, ಇವರೂ ನಮ್ಮ ಹಾಗೇ ಬದುಕಿನ ಕಷ್ಟ ಸುಖ ಕಂಡವರು, ಇವರ ಮಾತು ಬರಿಯ ಒಣ ಬೋಧನೆಯಲ್ಲ ಅನಿಸಿತ್ತು. ಹಾಗೇ ಮತ್ತಷ್ಟು ವಿವರ ಹುಡುಕಿ ತಿಳಿದೆ.

ಅವರ ಹುಟ್ಟು ಹೆಸರು ಮಾರುತಿ, ತಂದೆಯ ಹೆಸರು ಶಿವರಾಮ ಪಂತ ಕಂಬ್ಳಿ, ತಾಯಿ–ಪಾರ್ವತೀಬಾಯಿ. ಶಿವರಾಮ ಪಂತ ವಾರಕರೀ ಸಂಪ್ರದಾಯದವರು. ಮುಂಬೈಯಲ್ಲಿ ಉಳ್ಳವರ ಮನೆಯಲ್ಲಿ ಮನೆಗೆಲಸದವರಾಗಿದ್ದರು, ಆನಂತರ ತಮ್ಮ ಊರು ಕಂದಲಗಾಂವ್‌ಗೆ ಹೋಗಿ ಬೇಸಾಯದಲ್ಲಿ ತೊಡಗಿದರು. ಮಾರುತಿಯ ಬಾಲ್ಯ ಅಲ್ಲೇ ಕಳೆಯಿತು. ಮಾರುತಿಗೆ ಹದಿನೆಂಟು ವಯಸ್ಸಾಗಿದ್ದಾಗ ತಂದೆ ತೀರಿಹೋದರು. ಮನೆಯ ಜವಾಬ್ದಾರಿ ನಿರ್ವಹಿಸುವ ಸಲುವಾಗಿ ಮಾರುತಿ ಮುಂಬೈ ಸೇರಿದರು. ಅಲ್ಲಿ ಯಾವುದೋ ಕಛೇರಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದರು. ಆಮೇಲೆ ಸ್ವಂತದ ಬೀಡಿ ಅಂಗಡಿ ತೆರೆದರು. ಕ್ರಮೇಣ ಅವು ಎಂಟು ಅಂಗಡಿಗಳಾದವು. ಮಾರುತಿ ೧೯೨೪ರಲ್ಲಿ ಮದುವೆಯಾದರು. ಒಂಬತ್ತು ವರ್ಷ ಸಂಸಾರ ನಡೆಸಿ, ೧೯೩೩ರಲ್ಲಿ ತಮ್ಮ ಗೆಳೆಯ ಯಶವಂತರಾವ್ ಅವರ ಮೂಲಕ ಸಿದ್ಧರಾಮೇಶ್ವರ ಮಹಾರಾಜ್ ಅವರ ಸಂಪರ್ಕಕ್ಕೆ ಬಂದರು. ಸಿದ್ಧರಾಮೇಶ್ವರ ಅವರು ನವನಾಥ ಪಂಥಕ್ಕೆ ಸೇರಿದ ಇಂಚಿಗೇರಿಯ ಮಠದವರು. ಮಾರುತಿ ಅವರಿಗೆ ದೀಕ್ಷೆಯನ್ನು ನೀಡಿ, ಬೋಧನೆ ಮಾಡಿದರು. ಮಾರುತಿ ನಿಸರ್ಗದತ್ತರೆಂದು ಹೊಸ ಹೆಸರು ಪಡೆದರು. ಸುಮಾರು ಎರಡೂವರೆ ವರ್ಷ ಗುರುವಿನ ಸಂಪರ್ಕದಲ್ಲಿದ್ದು, ಗುರುವು ೧೯೩೬ರಲ್ಲಿ ದೇಹ ಬಿಟ್ಟಾಗ ನಿಸರ್ಗದತ್ತರು ಮುಂಬೈಯನ್ನು ಬಿಟ್ಟು ಎಂಟು ತಿಂಗಳ ಕಾಲ ದೇಶಪರ್ಯಟನೆ ಮಾಡಿ, ಮತ್ತೆ ಮುಂಬೈಗೆ ಹಿಂದಿರುಗಿ, ಅಂಗಡಿ ನೋಡಿಕೊಂಡು ಬದುಕು ಸಾಗಿಸಿದರು. ಗುರುವಿನಿಂದ ಬಂದ ಆದೇಶಕ್ಕೆ ಅನುಗುಣವಾಗಿ ೧೯೫೧ರಿಂದ ನಿಸರ್ಗದತ್ತರು ದೀಕ್ಷೆ ನೀಡುವುದಕ್ಕೆ ತೊಡಗಿದರು. ಮುಂದೆ ೧೯೬೬ರಲ್ಲಿ ಅಂಗಡಿಯ ವ್ಯವಹಾರದಿಂದ ನಿವೃತ್ತರಾಗಿ ದಿನವೂ ತಮ್ಮನ್ನು ಕಾಣಲು ಬರುತ್ತಿದ್ದ ಜನರಿಗೆ ಬೋಧನೆ ಮಾಡಲು ತೊಡಗಿದರು.

ನಿಸರ್ಗದತ್ತ ಮಹಾರಾಜರು ಏನನ್ನೂ ಬರೆಯಲಿಲ್ಲ. ಎಸ್. ಬಾಲಶೇಖರ್, ಮಾರಿಸ್ ಫ್ರೀಡ್‌ಮ್ಯಾನ್, ಮತ್ತು ಇಂಥ ಹಲವು ಶಿಷ್ಯರು ನಿಸರ್ಗದತ್ತರ ಬೋಧನೆಗಳನ್ನು ಬರಹರೂಪಕ್ಕೆ ತಂದು ಪ್ರಕಟಿಸಿದ್ದಾರೆ. ಇವುಗಳಲ್ಲಿ 'ಐ ಆಮ್ ದಟ್', 'ಸೀಡ್ಸ್ ಆಫ್ ಕಾನ್ಶಸ್‌ನೆಸ್', 'ಪ್ರಯರ್ ಟು ಕಾನ್ಶಸ್‌ನೆಸ್', 'ಪಾಯಿಂಟರ್ಸ್ ಫ್ರಂ ನಿಸರ್ಗದತ್ತ ಮಹಾರಾಜ್' ಇವು ಕೆಲವು ಮುಖ್ಯ ಪುಸ್ತಕಗಳು.

'ನೀನು ದೇಹವಲ್ಲ. ದೇಹದೊಳಗಿರುವ ಪ್ರಜ್ಞೆ, ಚೈತನ್ಯ–ಅದು ನೀನು. ಅದು ಇರುವುದರಿಂದಲೇ ನಾನು ಅನ್ನುವ ಅರಿವು ನಿನ್ನಲ್ಲಿ ಹುಟ್ಟಿದೆ. ಅದು ಶಬ್ದವಲ್ಲ, ಮಾತಲ್ಲ, ಶುದ್ಧವಾದ ಇರುವಿಕೆ. ಇಡೀ ಜಗತ್ತಿನ ಆತ್ಮ ಅದು. ಅದಿಲ್ಲದೆ ಲೋಕದ ಅನುಭವವಿಲ್ಲ. ನೀನೇ ಅದು. 'ಅದೇ ನಾನು' ಅನ್ನುವುದು ನಿನ್ನ ಧ್ಯಾನವಾಗಲಿ. ಅದೇ ನಾನು ಅನ್ನುವ ಪ್ರಜ್ಞೆಯೇ ಈಶ್ವರ, ದೇವರು ಎಲ್ಲಾ. ದೇವರೂ ಅದೇ, ಮಾಯೆಯೂ ಅದೇ. ನಾನು ದೇಹವಲ್ಲ. ನಾನು ಅದು ಅನ್ನುವುದು ಸ್ಥಿರವಾಗಿ ನಿನ್ನಲ್ಲಿ ಉಳಿಯಲಿ ಎಂದು ನನ್ನ ಗುರು ಹೇಳಿದರು. ನಾನು ಅದನ್ನು ಬಿಡದೆ ಅನುಸರಿಸಿದೆ. ಪ್ರಾಣಾಯಾಮ, ಸಿದ್ಧಾಂತ ಇಂಥವೇನೂ ನನಗೆ ಗೊತ್ತಿಲ್ಲ' ಎಂದು ನಿಸರ್ಗದತ್ತ ಮಹಾರಾಜ್ ಒಂದೆಡೆ ಹೇಳಿದ್ದಾರೆ.

'ನಾನು ಇದು, ನಾನು ಮತ್ತೇನೋ, ನಾನು ಇನ್ನೇನೋ ಎಂದು ಸುಳ್ಳು ಸುಳ್ಳಾಗಿ ಗುರುತಿಸಿಕೊಳ್ಳಬೇಡ. ನಾನೆಂದರೆ ಇಂಥದು ಎಂಬೆಲ್ಲ ಸುಳ್ಳು ಕುರುಹುಗಳನ್ನು ತೊರೆದುಬಿಡು. ನನ್ನನ್ನು ನಂಬು. ನೀನು ದೇವರು. ಇದು ಅಖಂಡ ಸತ್ಯ. ನಿನ್ನ ಆನಂದ ದೈವಿಕವಾದದ್ದು. ಇದು ಸತ್ಯ. ನಿನ್ನ ನೋವು ನರಳಾಟಗಳೂ ಸತ್ಯ. ನೀನೇ ದೇವರು,' ಎಂದು ಗುರು ಹೇಳಿದರು, ನಾನು ಅದನ್ನು ನಂಬಿ ನಡೆದೆ. ಕ್ರಮೇಣ ಶುದ್ಧ ಚೈತನ್ಯವನ್ನು ಕುರಿತು ಧ್ಯಾನ ಮಾಡುತ್ತ ಗಂಟೆಗಟ್ಟಲೆ ಇದ್ದು ಬಿಡುತ್ತಿದ್ದೆ. ನಿಧಾನವಾಗಿ ಅಗಾಧವಾದ ಶಾಂತಿ, ಎಲ್ಲವನ್ನೂ ಒಳಗೊಳ್ಳುವ ಪ್ರೀತಿ ನನ್ನೊಳಗೆ ಮೂಡಿದವು. ಅದೇ ನನಗೆ ಸಹಜವಾಯಿತು. ನಾನು, ನನ್ನ ಗುರು, ನನ್ನ ಬದುಕು, ಸುತ್ತಲ ಜಗತ್ತು ಎಲ್ಲವೂ 'ಅದು' ಅನ್ನುವುದೆಲ್ಲವೂ ನಾನೇ ಅನ್ನುವ ಅರಿವು, ಆನಂದ, ಉಳಿಯಿತು.' ಎನ್ನುತ್ತಾರೆ ನಿಸರ್ಗದತ್ತ ಮಹಾರಾಜ್.

ಅದು ಅಥವಾ ನಾನಲ್ಲದ ಅನ್ಯ ಎಂಬುದೇ ಇರದಿದ್ದರೆ ಅದು ಅನ್ನುವುದು ನಾನೇ ಆದರೆ ಯಾರನ್ನೂ ದ್ವೇಷಿಸಲಾಗದು, ಯಾವ ವಿನಾಶಕ್ಕೂ ಅವಕಾಶವಿರದು. ನಿಸರ್ಗದತ್ತ ಮಹಾರಾಜರ ಚಿಂತನೆಗಳನ್ನು ಆಧರಿಸಿ ಅವರ ಬೋಧನೆಗಳ ಸಾರಾಂಶವನ್ನು ವಿದ್ವಾಂಸರು ಹೀಗೆ ಹೇಳುತ್ತಾರೆ:

೧. ನಾನೆಂದರೆ ಇದು ಎಂದು ಗುರುತಿಸಿಕೊಂಡು ಪರಿಮಿತಗೊಳಿಸಿಕೊಳ್ಳದೆ ಇರುವುದು, ಸರಿಯಾಗಿ ಅರ್ಥಮಾಡಿಕೊಳ್ಳುವುದು.

೨. ಆಸಕ್ತಿ, ಕುತೂಹಲ, ಶ್ರದ್ಧೆ

೩. ಸಹಜ, ನಿರಾಯಾಸ ಸ್ವಚ್ಛಂದತೆ

೪. ಇರುವಿಕೆಯ ಬಗ್ಗೆ ಗಮನ

೫. ಸೂಕ್ತವಾದ ಕ್ರಿಯೆ

೬. ಅಂತರಂಗಕ್ಕೆ ಇಳಿದು ಮಿತಿಗಳನ್ನು ಮೀರಿ ಸರ್ವವ್ಯಾಪಿಯಾಗುವುದು

೭. ಆತ್ಮ ಅಥವ ನಾನು ಅನ್ನುವುದರ ಬಗ್ಗೆ ಪೂರ್ಣವಾದ ಎಚ್ಚರ.

ನಾನು ಯಾರು ಅನ್ನುವುದನ್ನು ತಿಳಿಯುವುದೇ ಮುಖ್ಯ ಎಂದು ಬೋಧಿಸಿದ ರಮಣರಾಗಲೀ 'ನಾನಾ ಎಂಬುದು ನಾನಲ್ಲ' ಎಂದು ಹೇಳಿದ ಶಿಶುನಾಳ ಶರೀಫರಾಗಲೀ ಆಚರಣೆಗಳನ್ನು ಆಧರಿಸಿದ, ಮೌಢ್ಯವನ್ನು ಅವಲಂಬಿಸಿದ ತತ್ವವನ್ನು ಹೇಳಲಿಲ್ಲ. ಅದು ಎಂದು ಕರೆಯಲಾಗುವ ನಾನಲ್ಲದ ಎಲ್ಲವೂ ನಾನೇ ಎಂದು ಬುದ್ಧಿಪೂರ್ವಕವಾಗಿಯಲ್ಲ, ತತ್ವವಾಗಿಯಲ್ಲ, ಸಿದ್ಧಾಂತವಾಗಿಯಲ್ಲ, ಬಿರುಕಿಲ್ಲದ ಪೂರ್ಣ ಅನುಭವವಾಗಿ ದೊರೆಯುವುದಾದರೆ ಅದು ಕೇವಲ ಅಂತರಂಗದ ಕ್ರಾಂತಿಯಾಗಿ ಮಾತ್ರ ಉಳಿಯುವುದಿಲ್ಲ. ಬುದ್ಧಿ, ತರ್ಕ, ಸಿದ್ಧಾಂತಗಳನ್ನು ಸ್ವಲ್ಪ ಅಮಾನತ್ತಿನಲ್ಲಿಟ್ಟು ಶ್ರದ್ಧೆ, ಪ್ರಾಮಾಣಿಕತೆಗಳೊಡನೆ ನನ್ನ ಒಳಗಿಗೂ ನನ್ನ ಹೊರಗಿಗೂ ಇರುವ ಸಂಬಂಧ ಕಂಡುಕೊಳ್ಳುವುದೇ ನಿಜವಾದ ಅರಿವು, ವಿದ್ಯೆ ಅನ್ನುವ ಬೋಧವನ್ನು ನೀಡಿದ ಮಹನೀಯರಲ್ಲಿ ನನ್ನ ಮಟ್ಟಿಗೆ ನಿಸರ್ಗದತ್ತ ಮಹಾರಾಜರು ಪ್ರಮುಖರು.

ಹೆಚ್ಚಿನ ವಿವರಗಳಿಗೆ ನೋಡಿ: http://www.nisargadatta.net/ https://realization.org/p/nisargadatta/nisargadatta.html

ನಿಸರ್ಗದತ್ತ ಮಹಾರಾಜರ ಕೃತಿಗಳನ್ನು ಉಚಿತವಾಗಿ ಡೌನ್ ಲೋಡ್ ಮಾಡಿಕೊಳ್ಳಲು: https://bit.ly/3e8pOUW




**(ಸದ್ಯ ಮೈಸೂರಿನಲ್ಲಿ ವಾಸವಾಗಿರುವ ಓ.ಎಲ್. ನಾಗಭೂಷಣ ಸ್ವಾಮಿಯವರು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು, ಕನ್ನಡದ ಹಿರಿಯ ಸಾಹಿತ್ಯ ಚಿಂತಕರೂ ಅನುವಾದಕರೂ ಹೌದು)**

## ಪುಸ್ತಕಾವಲೋಕನ

ಪು: **ಮೀಸೆ ಹೆಂಗಸು ಮತ್ತು ಇತರ ಕಥೆಗಳು** ಲೇ: .**ಲೋಕೇಶ ಅಗಸನ ಕಟ್ಟೆ** ಪ್ರ: **ವಸಂತ ಪ್ರಕಾಶನ**, ಬೆಂಗಳೂರು (೦೮೦-೨೨೪೪೩೯೯೬). ಪು: ೧೬೮ ಬೆ: **ರೂ. ೧೩೦/-**

## ಪ್ರಯೋಗಶೀಲ ಕತೆಗಾರಿಕೆಯ ಮಿಶ್ರ ಫಲಗಳು




**ಲೋ**ಕೇಶ ಅಗಸನಕಟ್ಟೆಯವರ ಈ ಹಿಂದಿನ ಸಂಗಹಗಳಲ್ಲಿನ ಕತೆಗಳಿಗೆ ಹೋಲಿಸಿದರೆ ಇಲ್ಲಿರುವ ಕತೆಗಳು ಕೆಲವು ಕಾರಣಗಳಿಗೆ ವೈವಿಧ್ಯತೆಗಳನ್ನು ಪಡೆದುಕೊಂಡಿವೆ. ಮತ್ತೂ ಕೆಲವು ತೀರ ಸಡಿಲವಾದ ವಸ್ತುವನ್ನು ಒಳಗೊಂಡಿವೆ ಎಂದು ಮೊದಲಲ್ಲೇ ಹೇಳಬಹುದಾದ ಮಾತು. ತೊಂಭತ್ತರ ದಶಕದ ನಂತರದಲ್ಲಿ ಬರೆದ ಕತೆಗಾರರನ್ನು ಮತ್ತು ಅವರ ಕಥನಗಾರಿಕೆ, ವಸ್ತು ವೈವಿಧ್ಯವನ್ನು ನಮ್ಮ ವಿಮರ್ಶೆ ಇನ್ನೂ ಗಂಭೀರವಾಗಿ ಚರ್ಚೆ ನಡೆಸಬೇಕಾಗಿದೆ. ಅಗಸನಕಟ್ಟೆಯವರ ಸಮಕಾಲೀನರು ಎನ್ನಬಹುದಾದ ಕೇಶವಮಳಗಿ, ಅಮರೇಶ, ಚನ್ನಪ್ಪ ಕಟ್ಟಿ, ಯೋಗಪ್ಪನವರ್ ಮುಂತಾದವರು ತಮ್ಮ ಹೊಸ ಬಗೆಯ ವಸ್ತುಗಾರಿಕೆಯಿಂದ ಮತ್ತೊಮ್ಮೆ ಚರ್ಚೆಯಲ್ಲಿದ್ದಾರೆ. ಇದರಲ್ಲಿ ಅಮರೇಶ ಅವರ ಕತೆಗಳು ಬಹುಮಟ್ಟಿಗೆ ಇಳಿಮುಖಗೊಂಡಂತೆ ಕಂಡರೆ, ಲೋಕೇಶ ಅವರನ್ನು ಒಳಗೊಂಡಂತೆ ಇತರರು ಪ್ರಯೋಗಶೀಲತೆಯ ಹಾದಿಯಲ್ಲಿ ಉಳಿದಿದ್ದಾರೆ.

ಲೋಕೇಶ ಅವರ ಇಲ್ಲಿನ ಕತೆಗಳನ್ನೇ ನಿದರ್ಶನಕ್ಕೆ ಎತ್ತಿಕೊಂಡರೆ, ಅವರ ಕತೆಗಳ ವಸ್ತು ಇದುವರೆಗೆ ತಾವು ಗ್ರಹಿಸಿದ ಗ್ರಾಮಲೋಕದ ಕಥನವನ್ನು ಹಿಗ್ಗಿಸಿದ್ದಾರೆ. ಕೊಂಚ ತಾತ್ವಿಕವಾಗಿ ಹೇಳುವುದಾದರೆ ತೊಂಭತ್ತರ ದಶಕದ ಕತೆಗಳನ್ನು ಮತ್ತು ಹೊಸಬರ ಕತೆಗಳನ್ನು ವಿವೇಚಿಸುವಾಗ ಪಾಶ್ಚಾತ್ಯ ಥಿಯರಿಗಳು ತೀರಾ ಸಹಾಯಕ್ಕೆ ಬರಲಾರವು. ನಮಗೇನಿದ್ದರೂ ಈ ನೆಲಕ್ಕೆ ಅಂಟಿಕೊಂಡ ಮತ್ತು ಈ ನೆಲದ ಕುರಿತು ಆಳವಾಗಿ ಚಿಂತಿಸಿದ ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾರ ತತ್ವಗಳು ನೆರವಿಗೆ ಬರಬಹುದು. ಲೋಕೇಶರ ಕತೆಗಳ ಅಂತರಂಗದಲ್ಲಿ ನೇರವಾಗಿ ಅಲ್ಲದಿದ್ದರೂ ಅನೇಕ ಕಡೆ ಗ್ರಾಮೀಣ ಬದುಕಿಗೆ ಅಂಟಿಕೊಂಡಂತೆ ಮೇಲಿನವರ ತತ್ವಗಳು ಪ್ರವೇಶ ಪಡೆದುಕೊಂಡಿವೆ. 'ಮಾತುಸೋತ ಭಾರತ', 'ಮೀನುಪೇಟೆ', 'ಧರೆಹತ್ತಿ ಉರಿದೊಡೆ', 'ಮುಟ್ಟಿಕೊಂಡವರು' ಈ ಕತೆಗಳು ಕೇವಲ ಹಳೆಕಾಲದ ಗ್ರಾಮೀಣ ನೆನಪುಗಾರಿಕೆ-ಹಳಹಳಿಕೆಗಳಂತೆ ಕಂಡು ಪೇಲವ ಎನಿಸಬಹುದು. ಆದರೆ, ಸಮಕಾಲೀನ ರಾಜಕೀಯ, ಜಾತಿಗಳ ಧೃವೀಕರಣ, ಮಠಗಳ ಒಳರಾಜಕೀಯ, ಜಾತಿಗಳ ಸೌಹಾರ್ದವನ್ನು ವಿಘಟಿಸುವ ಕ್ರಮಗಳಿಂದ ಅವಲೋಕಿಸಿದರೆ ಒಳನೋಟಗಳು ಸಿಗುತ್ತವೆ.

'ಮಾತುಸೋತ ಭಾರತ' ವಸ್ತುವಿನಿಂದ ಗೆದ್ದರೆ, ಕಥನಗಾರಿಕೆಯಿಂದ ಪೇಲವ ಎನಿಸುವ ಕತೆ. ಕೇವಲ ಅನುಭವನಿಷ್ಠೆಗೆ ಒಳಗಾಗಿ ಅಲ್ಲಲ್ಲಿ ವರದಿಯ ಹಂತಕ್ಕೆ ತಲುಪಿಬಿಡುತ್ತದೆ. ಆದರೆ ಆಂತರ್ಯದಲ್ಲಿ ಈ ನೆಲದ ಜಾತಿಗಳ ಸೌಹಾರ್ದದ ಭಾವನಾತ್ಮಕತೆಯನ್ನು ಸೂಕ್ಷ್ಮವಾಗಿ ಸ್ಪರ್ಶಿಸುವ ಮೂಲಕ ಗಮನ ಸೆಳೆಯುತ್ತದೆ. ಇನ್ನು ಮೇಲೆ ಪ್ರಸ್ತಾಪಿಸಿದ ಇತರ ಕತೆಗಳೂ ಹೀಗೇ ಒಂದು ಹಂತದಾಚೆ ತಮ್ಮ ಮಿತಿಗಳನ್ನು ಮೀರಿ, ವಸ್ತುವನ್ನು ವರ್ತಮಾನಕ್ಕೆ ಎಳೆಯುವ ರೀತಿಯಿಂದಾಗಿ ತಾಜಾ ಅನಿಸುತ್ತವೆ. ಗ್ರಾಮೀಣಲೋಕದ ಹೊಸಬಗೆಯ ಜಾತಿವ್ಯವಸ್ಥೆ ಮತ್ತು ಹೊಸ ಬಗೆಯ ಬಂಡವಾಳಶಾಹಿ ಕ್ರಮಗಳು ತಲೆ ಎತ್ತುತ್ತಿರುವ ಬಗೆಗಳು 'ಮೀನುಪೇಟೆ' ಮುಂತಾದ ಕತೆಗಳು ಅನಾವರಣ ಮಾಡುತ್ತವೆ. ಹುಸಿ ಅಧ್ಯಾತ್ಮದೊಂದಿಗೆ ಕಾಣಿಸುವ ಪೂಜ್ಯಪಾದರು ಸಮಕಾಲೀನ ಅಧ್ಯಾತ್ಮ ಮತ್ತು ರಾಜಕೀಯಗಳ ಸಮೀಕರಣದಿಂದಾಗಿ ವಿನಾಶಗೊಳ್ಳುತ್ತಿರುವ ಜನಸಾಮಾನ್ಯ ಲೋಕವನ್ನು ನೆನಪು ಮಾಡುತ್ತಾರೆ.. ವಾಸ್ತವ ಲೋಕವನ್ನು ಕಲಾತ್ಮಕಗೊಳಿಸುವ ಕಥನಗಾರಿಕೆಯಲ್ಲಿ ಈ ಕತೆ ಸಂಪೂರ್ಣವಾಗಿದೆ. ಭೂಮಿಯ ಪ್ರಶ್ನೆಗಳು ಅದರ ತಕರಾರಿನ ಪ್ರಶ್ನೆಗಳು, ದಲಿತತನದ ಪ್ರಶ್ನೆಗಳು ಎಷ್ಟೇ ಸಹ್ಯ ಬದುಕಿನ ಆವರಣಕ್ಕೆ ಬಂದರೂ, ಅಷ್ಟೇ ಸಂಘರ್ಷಮಯವಾಗುವ ಸೂಚನೆಗಳನ್ನು ಈ ಕತೆಗಳು (ಧರೆಹತ್ತಿ ಉರಿದೊಡೆ) ಅಭಿವ್ಯಕ್ತಿಸುತ್ತವೆ. ಲೋಕೇಶ ಅವರು ಭೂಮಿಯ ಪ್ರಶ್ನೆ ಬಂದಾಗ ಒಂದು ಕತೆಯಲ್ಲಿ ವಸುಧೇಂದ್ರರ ಕತೆಯ ಪ್ರಸ್ತಾಪ ತರುವುದು ತೀರ ಕೃತಕ ಎನಿಸುತ್ತದೆ. ಏಕೆಂದರೆ ಆ ಕತೆಗೆ ತಾನಾಗಿಯೇ ಗಂಭೀರತೆ ಒದಗಿದೆ.

ಇದು ಈ ಸಂಕಲನದ ಕತೆಗಳ ಒಂದು ಭಾಗವಾದರೆ, ಮತ್ತೊಂದು ನೆಲದ ಸೊಗಸುಗಾರಿಕೆ, ಅಧ್ಯಾತ್ಮದ ಸೆಳತಗಳು, ಮನುಷ್ಯ ಸಂಬಂಧಗಳ ಮಾನಸಿಕ ತುಯ್ದಾಟಗಳು, ಹೆಣ್ಣುನೋಟಗಳು, ವಲಸೆ ಬದುಕು, ಸಿದ್ಧಾಂತಗಳನ್ನು ಮೀರಿದ ಜೀವನ ಕ್ರಮಗಳು ಮುನ್ನೆಲೆಗೆ ಬಂದಿವೆ. ಹೆಣ್ಣು ಸಂಬಂಧಿ ಕತೆಗಳನ್ನು ಕೆಲವು ಬಾರಿ ವಿನಾಕಾರಣ 'ಸ್ತ್ರೀವಾದ'ದ ಬೆನ್ನಲ್ಲಿ ಕಟ್ಟಿಹಾಕುವುದು ಸರಿಯಲ್ಲ. ಇಲ್ಲಿನ ಕೆಲವು ಮಹಿಳೆಯರು ತಮ್ಮ ಪರಿಸರಕ್ಕೆ ತಕ್ಕಂತೆ ಕುಟುಂಬ ವ್ಯವಸ್ಥೆಗೆ ಒಗ್ಗಿಸಿಕೊಂಡಿದ್ದಾರೆ. 'ಮೀಸೆ ಹೆಂಗಸು' ಕತೆಯ ಪಾರವ್ವ ಅಪ್ಪಟ ದೇಸಿ ಅಥವ ಗ್ರಾಮೀಣ ಮನಸ್ಸು. ತಾನಾಗಿಯೇ ಈಕೆಗೆ ಮಾನಸಿಕ ಸ್ಥಿಮಿತತೆ ಬಂದುಬಿಟ್ಟಿದೆ. ಬದುಕಿನ ಜಂಜಾಟಗಳು ಹಲವು ಬಾರಿ ಇವರಿಗೆ ಸರಾಗ. ಆದರೆ, 'ನಿಜವು ತೋರದಲ್ಲ' ಕತೆಯ ಭಾನುಮತಿ ಧೈರ್ಯವಿದ್ದರೂ ಗಂಡಿನ ಸಂಶಯಗಳ ಪರಿಸರದಿಂದ ಧೈರ್ಯಗೆಡುತ್ತಾಳೆ.. ಇಲ್ಲಿನ ಗಂಡಿಗೋ ತನ್ನದೇ ಒತ್ತಡಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಬರುವುದಿಲ್ಲ. 'ಮಹಾಪ್ರಸ್ಥಾನ' ಕತೆಗೆ ಹೋಲಿಸಿದರೆ 'ನಿಜವು ತೋರದಲ್ಲ' ಕತೆ ತನ್ನ ವಸ್ತುವಿ ನಿಂದ ತಾಜ ಅನಿಸಿದರೂ ಅಂತಿಮ ಹಂತಕ್ಕೆ ಮಾಮೂಲಿ ಕತೆಯಾಗಿ ಪ್ರಬಂಧದ ಧಾಟಿಗೆ ತಿರುಗಿದೆ..ಆದರೆ, ಮತ ಧರ್ಮಗಳಾಚೆ ಹಸಿವು, ಬದುಕು ಮುಖ್ಯವಾಗುವ ಪ್ರಕ್ರಿಯೆಯನ್ನು ತೋರಿಸಿದೆ.

'ತುಮುರೇ ಕಾರಣ್' ಕತೆ ಹಲವು ಕಾರಣಗಳಿಂದ ಮುಖ್ಯವಾಗುತ್ತದೆ. ಬರಿ ಪ್ರಶ್ನೆಗಳ ಮುಖೇನ ಸಾಗುವ ಈ ಕಥನ ಮನುಷ್ಯರ ಹಲವು ರೀತಿಯ ಮಾನಸಿಕ ಪಲ್ಲಟಗಳನ್ನು ಅನಾವರಣಗೊಳಿಸುತ್ತದೆ. ಹೆಣ್ಣೊಬ್ಬಳ ತಾತ್ವಿಕ ಪ್ರಶ್ನೆಗಳು ಇಲ್ಲಿನ ಬದುಕನ್ನು ಮಾಗಿಸಿವೆ. ಕಥನಗಾರಿಕೆಯಿಂದ 'ಮೀನುಪೇಟೆ' ಕತೆಯಂತೆ ಖಚಿತತೆಯನ್ನು ಪಡೆದುಕೊಂಡಿರುವ 'ಉತ್ತರಾಯಣ'ವು ನಿಸರ್ಗದ ರೂಪಕಗಳ ಮೂಲಕ ಬದುಕಿನ ವೈವಿಧ್ಯಮಯ ಸ್ತರಗಳನ್ನು ತಾಗುತ್ತದೆ.. ಇಲ್ಲೆಲ್ಲಾ ಕಾಲಮಾನದ ಒತ್ತಡಗಳಿಂದ ಬದಲಾಗುತ್ತಿರುವ ಜೀವನಕ್ರಮದ ರಿವಾಜುಗಳು ರೂಪು ಪಡೆದಿವೆ.

ಈ ಸಂಕಲನದ ಹಲವು ಕತೆಗಳಲ್ಲಿ ದೇಸೀ ಜ್ಞಾನಪರಂಪರೆಗಳ ಪರಿಚಯ ಮತ್ತು ಅದ್ವೈತ ಪರಂಪರೆಗಳು ಜಾಗ ಗಿಟ್ಟಿಸಿಕೊಂಡಿವೆ. ಮತ್ತು 'ಮೀನುಪೇಟೆ'ಯಂಥ ಕತೆಗಳ ವಸ್ತುವಿಗೆ ತಕ್ಕಂತೆ ಅವು ಆತುಕೊಂಡು ಬಂದಿವೆ. ಆದರೆ ಅವು ಪುನರಾವರ್ತಿತವಾಗುತ್ತಾ ತೆಳುವಾಗುತ್ತಾ ಬಂದಿವೆ ಎನಿಸುತ್ತದೆ. ಈಚೆಗೆ ಈ ಜ್ಞಾನಪರಂಪರೆಗಳನ್ನೆ ಕತೆಯಾಗಿಸಿದ ಕೇಶವಮಳಗಿಯವರ **'ಅಕಥಕಥಾ'** ಕಟ್ಟಿಯವರ 'ಊರ್ಧ್ವರೇತ' ಜಿ.ವಿ. ಆನಂದಮೂರ್ತಿಯವರ 'ಹುಲ್ಲೇಕರು' ಮುಂತಾದ ಕತೆಗಳನ್ನು ನೋಡಬಹುದು. ಲೋಕೇಶ ಅವರ ಹಿಂದಿನ ಕತೆಗಳಿಗೆ ಹೋಲಿಸಿದರೇ ಆ ಪರಂಪರೆಗಳು ಇಲ್ಲಿ ಮೊಟಕಾಗಿದೆ. ಕೇವಲ ಡೈಲಾಗ್ ರೂಪದಲ್ಲಿ (ಎರ್ರಿ ತಾತನ ಮಾತುಗಳು) ಮಾತ್ರ ಕಾಣಿಸಿಕೊಳ್ಳುತ್ತವೆ. 'ಮೀನುಪೇಟೆ' ಮಾತ್ರ ಈ ನೆಲೆಯಿಂದ ಯಶಸ್ವಿ ಕತೆಎನ್ನಬಹದು.

ಇವನ್ನು ಮೀರಿ ಅನಿವಾಸಿ ಬದುಕಿಗೆ ಅಂಟಿಕೊಂಡ ಕತೆಗಳು ಇಲ್ಲಿವೆ. ಗ್ರಾಮೀಣ ಮನಸ್ಸು ವಲಸೆಯ ಬದುಕನ್ನು ಚಿತ್ರಿಸಿದರೆ ಹೇಗಿರಬಲ್ಲದು ಎಂಬುದಕ್ಕೆ ಇಲ್ಲಿನ ಕತೆಗಳೆ ನಿದರ್ಶನವಾಗಿವೆ. ಲೋಕೇಶರ ಮಾಗಿದ ಅನುಭವಗಳು ಇಂಥ ಕಡೆ ಯಶಸ್ಸು ಕಂಡಿವೆ. 'ಅಳುವ ಕಡಲೊಳು' ಮತ್ತು 'ಗೋ! ಕಿಸ್ ದ ವರ್ಲ್ಡ್' ಕತೆಗಳು ಇಂದಿನ ಬದುಕಿನ ಸೂಕ್ಷ್ಮತೆಯನ್ನು ಅಭಿವ್ಯಕ್ತಿಸುತ್ತವೆ. ಅದರಲ್ಲೂ ಅಳುವ ಕಡಲೊಳು ಕತೆ ಯ ಬೆಳವಣಿಗೆ ಸ್ವ ಬದುಕಿನಿಂದ ಅಮೆರಿಕಾದ ವಾಣಿಜ್ಯ ಜೀವನ ಕ್ರಮಗಳ ಆಯಾಮಗಳ ಕಡೆ ಸಾಗುತ್ತದೆ. ಇಂಥ ಈ ಪುಸ್ತಕ ಮುನ್ನುಡಿ-ಬೆನ್ನುಡಿಗಳಲ್ಲದೆ ನಡು ನುಡಿಯ ಭಾರದಿಂದ ತೊನೆದಾಡಿದೆ. ಇದೇನು ಲೇಖಕನ ಆತ್ಮವಿಶ್ವಾಸದ ಕೊರತೆಯ ಸಾಕ್ಷಿಯೋ ಎಂಬ ಅನುಮಾನ ಉಂಟಾಗುತ್ತದೆ. ಇತ್ತೀಚೆಗೆ ಆರಂಭವಾಗಿರುವ ಈ ಅತಿ ಆಶೀರ್ವಾದದ ಚಾಳಿ ಕೃತಿ ಓದನ್ನು ವಿಚಲಿತಗೊಳಿಸಬಲ್ಲುದಾಗಿದೆ. ನಮ್ಮ ಹೊಸ ತಲೆಮಾರಿನಲ್ಲಂತೂ ಮುನ್ನುಡಿಗಳ ಜೊತೆಗೆ ಪ್ರಕಟಣಾಪೂರ್ವ ಜಾಹೀರಾತುಗಳೇ ಅಧಿಕವಾಗಿವೆ, ಹಾಗಾಗಿ ಈಗ ಬೇಕಿರುವುದು ಇವರನ್ನೊಳಗೊಂಡ ಇಡಿಯಾದ ಅಧ್ಯಯನ.

**-ಸುರೇಶ್ ನಾಗಲಮಡಿಕೆ**

ಪು: ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ ಲೇ: ಎಸ್. ದಿವಾಕರ್ ಪ್ರ: ಬಹುರೂಪಿ, ಬೆಂಗಳೂರು(೭೦೧೯೧೮೨೭೨೯) ಪು: ೭೨ ಬೆ: ರೂ.೧೦೦/-

## ಮಿಶ್ರ ತಳಿಯ ಕುತೂಹಲಕಾರಿ ಕವನಗಳು




**ಎ**ಸ್. ದಿವಾಕರ್ ಕನ್ನಡದ ಹಿರಿಯ ಮತ್ತು ಪ್ರತಿಭಾವಂತ ಕಥೆಗಾರರು. ಜೊತೆಗೆ ತಮ್ಮ ಅನುವಾದಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ಸಂವೇದನೆ ಮತ್ತು ಅಭಿವ್ಯಕ್ತಿ ರೂಪಗಳ ಪರಿಚಯ ಮಾಡಿದವರು. ಅವರು ಆಗಾಗ್ಗೆ ಪದ್ಯಗಳನ್ನೂ ಬರೆದವರು. ೧೯೯೮ರಲ್ಲಿ ಪ್ರಕಟವಾದ 'ಆತ್ಮ ಚರಿತ್ರೆಯ ಕೊನೆಯ ಪುಟ' ಎಂಬ ಮೊದಲ ಸಂಕಲನದ ನಂತರ ಈಗ 'ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ' ಎಂಬ ತಮ್ಮ ಈ ಎರಡನೆಯ ಕವನ ಸಂಕಲನವನ್ನು ಹೊರ ತಂದಿದ್ದಾರೆ. ಇದರ ಹೆಸರೇ ಸೂಚಿಸುವಂತೆ ಇದರಲ್ಲಿನ ಪದ್ಯಗಳು ಸುಕುಮಾರ ಸೂಕ್ಷ್ಮವಾಗಿದ್ದು. ಅವುಗಳ ಲೋಕ ಸತ್ಯ ಗ್ರಹಿಕೆ ಮತ್ತು ಅದನ್ನು ಅಭಿವ್ಯಕ್ತಿಸುವ ಕ್ರಮಗಳು ಮೊದಲ ಓದಿಗೆ ಒದಗಲಾರದೆಂದು ಸ್ವತಃ ಲೇಖಕರಿಗೆ ಅನ್ನಿಸಿಯೋ ಏನೋ ಸಂಕಲನವನ್ನು ಮುನ್ನುಡಿ ಮತ್ತು ಬೆನ್ನುಡಿಗಳೆಂಬ ವ್ಯಾಖ್ಯಾನಗಳಿಂದ ಸಜ್ಜುಗೊಳಿಸಿದ್ದಾರೆ. ಆದರೆ ಮುನ್ನುಡಿ ಬರೆದಿರುವ ಎಚ್. ಎಸ್. ಶಿವಪ್ರಕಾಶ್, ಈ ಸಂಕಲನದಲ್ಲಿನ ಯಾವ ಪದ್ಯವನ್ನೂ ಮುಟ್ಟಿ ನೋಡಿದ ಸಾಕ್ಷ್ಯಗಳಿಲ್ಲದೆಯೂ ಇಲ್ಲಿನ ಕವನಗಳನ್ನು ತಮ್ಮ ಕಾವ್ಯ ಭಾಷೆಯ ಅರಿವಿನ ಗಡಿಯನ್ನು ವಿಸ್ತರಿಸಿರುವ ಮತ್ತು ಕನ್ನಡಕ್ಕೆ ಈವರೆಗೆ ಕಾಣದ ಒಂದು ಕಾವ್ಯ ಸಾಧ್ಯತೆಯನ್ನು ತಂದು ಕೊಟ್ಟಿರುವ ಕವನಗಳೆಂದು ಗುರುತಿಸುತ್ತಾ, ಇಂತಹುದೇ ಹೊಸತನದ ಕವನಗಳಿಗೆ ಹೆಸರಾದವರೆಂದು ಕನ್ನಡ ಕಾವ್ಯ ರಸಿಕರಾರೂ ಈವರೆಗೆ ಕಂಡು ಕೇಳರಿಯದ ಹಲವು 'ಜಾಗತಿಕ' ಕವಿಗಳ ಪಟ್ಟಿಯನ್ನೇ ನೀಡಿ ನಮ್ಮನ್ನು ಬೆಪ್ಪುಗೊಳಿಸುವಷ್ಟರ ಮಟ್ಟಿಗಷ್ಟೇ ಯಶಸ್ವಿಯಾಗಿದ್ದಾರೆ. ಇನ್ನು ಹಿನ್ನುಡಿಯ ನರೇಂದ್ರ ಪೈ ಅವರ ವ್ಯಾಖ್ಯಾನವೂ ಇದಕ್ಕಿಂತ ಭಿನ್ನವಾಗಿರದೆ ಓದುಗರೇ ತಮ್ಮದೇ ಹಳೆಯ ಓದಿನ ಸೂಕ್ಷ್ಮಗಳೊಂದಿಗೆ ಇಲ್ಲಿನ ಕವನಗಳಿಗೆ ಮುಖಾಮುಖಿಯಾಗಬೇಕಿದೆ.


ಹಾಗೆ ನೋಡಿದರೆ ಇಲ್ಲಿನ ಬಹತೇಕ ಕವನಗಳು ಎ.ಕೆ. ರಾಮಾನುಜನ್ ಮತ್ತು ಕೆ.ವಿ.ತಿರುಮಲೇಶರ ಪ್ರಯೋಗಶೀಲ ಕವನಗಳ ಮಿಶ್ರತಳಿಯಂತಿದ್ದು, ವಸ್ತು ಪ್ರಪಂಚ ಮತ್ತು ಶಬ್ದಲೋಕಗಳ ನಡುವೆ ಹೊಸದೊಂದು ಹದದ ಅನುಸಂಧಾನದ ಮೂಲಕ ನಮ್ಮೊಳಗೆ ಅನುಭವದ ಹೊಸ ವಿನ್ಯಾಸಗಳನ್ನು ಸೃಷ್ಟಿಸುತ್ತಾರೆ; ಹೊಸದೊಂದು ಲೋಕದೃಷ್ಟಿಯ ಮಿಂಚನ್ನೂ ಕಾಣಿಸುತ್ತಾರೆ. ಉದಾ. ಗೆ **'ವಯಸ್ಸಾಗಿದೆ ಎಂದು ಗೊತ್ತಿಲ್ಲ ಆಲ್ಬಂ ಫೋಟೊಗಳಿಗೆ/ಅಸ್ಥಿಪಂಜರವೆದ್ದು ಬರುತ್ತವೆ ಜನ ತುಂಬಿದ ಬೀದಿಗೆ'** ಎಂದು ಆರಂಭವಾಗುವ '೨೦೨೦ರ ಹೊಸ್ತಿಲಲಿ' ಎಂಬ ಮತ್ತು **'ನೀನಿರುವುದೆಲ್ಲಿ? ಭಾಷೆ ಭಾಷೆಗಳೆಲ್ಲ ಕೊನೆಯಾಗುವಲ್ಲಿ?/ಕೇಳಿಸುತ್ತಿದೆಯೀಗ ಪ್ರತಿಮೆಗಳ ಉಸಿರಾಟ ಚಿತ್ರಪಟಗಳ ಮೌನ/ಬೇಸಿಗೆಗಳ ಸಂಜೆಗಳ ನೀರವ ನೀರವದ ಎಲೆಯುದುರು..'** ಎಂದು ಆರಂಭವಾಗುವ 'ಬಾಲಮುರಳಿ ಗಾನ'ದಂತಹ ಕವನಗಳಾಗಲೀ ಅಥವಾ 'ಝೀಬ್ರಾ' ದಂತಹ ಜಾಣ ಮತ್ತು ಚುರುಕಿನ ಕವನಗಳಾಗಲೀ ಕನ್ನಡ ಕಾವ್ಯ ಸಂವೇದನೆಗೆ ಹೊಸದಲ್ಲ; ಇಲ್ಲಿನ ವ್ಯಾಕರಣವಷ್ಟೇ ಹೊಸದೆನಿಸುವುದು. ಆದರೆ ಆ ಸಿದ್ಧಿಗಾಗಿ ದಿವಾಕರರನ್ನು ಅಭಿನಂದಿಸದಿರಲಾಗದು.

ಆದರೆ ಈ ವ್ಯಾಕರಣ ವಿಶೇಷ ಅರ್ಥ ವಲಯಗಳನ್ನು ಸೃಷ್ಟಿಸಲು ಒಮ್ಮೊಮ್ಮೆ ಅತಿ ಕಸರತ್ತಿಗೂ ಹೋಗುವುದೂ ಉಂಟು. 'ಪುಸ್ತಕ' ಎಂಬ ಕವನದ ಸಾಲುಗಳು ಅರಾಜಕವಾಗಿ ಬೆಳೆ ಬೆಳೆಯುತ್ತಾ ಮಂಪರು ಸೃಷ್ಟಿಸಿ ಈ ಸಂಗ್ರಹದ ಶೀರ್ಷಿಕೆಯನ್ನು ಸಾರ್ಥಕಗೊಳಿಸುವಂತಾಗಿಬಿಟ್ಟಿವೆ! 'ಬಂಗಲೆಯೂ, ಜೋಪಡಿಯೂ', 'ವಿರಾಮ ಚಿಹ್ನೆಗಳು', 'ಮಂಡಲ' ಮುಂತಾದವು ಈ ಜಾತಿಗೆ ಸೇರಿದವು. ಇಂತಹ ಕವನಗಳು ಎಲ್ಲೋ ದೂರದಲ್ಲಿ ಸೂಕ್ಷ್ಮ ರಾಜಕೀಯ ಧ್ವನಿಗಳನ್ನು ಹೊರಡಿಸುವುದರಿಂದ ಅವುಗಳನ್ನು ಅಲ್ಲಿಗೇ ಬಿಡದೆ ಹಿಂದೆ ಬೀಳುವ ಚಪಲವೂ ಉಂಟಾಗುವುದು ಸುಳ್ಳಲ್ಲ. ಇನ್ನು ಇದೇ ಅಭಿರುಚಿಯ ಒಂದೆರಡು ವಿಲಾಯ್ತಿ ಕವಿಗಳಿಂದ ಪ್ರೇರಿತವಾದುವೆಂದು ಹೇಳಲಾದ ಒಂದೆರಡು ಕವನಗಳೂ ಇಲ್ಲಿವೆ. ಆದರೆ ಇವೇನೂ ದಿವಾಕರರ ಈ ಹೊಸ ಪ್ರಯೋಗವನ್ನು ಅರಿಯಲು ನೆರವಾಗುವಂತೆ ಕಾಣುವುದಿಲ್ಲ. ಆದರೆ ಕನ್ನಡಕ್ಕೆ ವೈವಿಧ್ಯಮಯ ವಿಲಾಯ್ತಿ ಸಾಹಿತ್ಯ ಸಂಪರ್ಕಗಳಿಂದ ಹೊಸದೇನನ್ನಾದರೂ ಕೊಡುತ್ತಲೇ ಬಂದಿರುವ ದಿವಾಕರರು ಇಲ್ಲಿಯೂ ಹೊಸದನ್ನು ಕೊಡುವ ಪ್ರಯತ್ನ ಮಾಡಿದ್ದಾರೆ. ಆದರೆ ಅದು ಸಂಪೂರ್ಣ ವಿಲಾಯತಿಯದ್ದೂ ಅಲ್ಲ, ಸಂಪೂರ್ಣ ಹೊಸದೂ ಅಲ್ಲ.

**–ಡಿಎಸ್ಸೆನ್**

ಪು: ಆಹಾರ ಸಂಜೀವಿನಿ ಲೇ: ಡಾ. ಎ.ಎನ್.ನಾಗರಾಜ್ ಪ್ರ: ಅಂಕಿತ ಪುಸ್ತಕ, ಬೆಂಗಳೂರು(೦೮೦-೨೬೬೧೭೧೦೦) ಪು: ೧೬೮ ಬೆಲೆ: ರೂ.೧೫೦/-

## ಉತ್ತಮ ಆರೋಗ್ಯಕ್ಕೊಂದು ಮಾರ್ಗದರ್ಶಿ




**ನ**ಮ್ಮ ದಿನನಿತ್ಯದ ಆಹಾರಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ಕಾಯಿಲೆಗಳ ಉಪಶಮನ ಮಾಡಿಕೊಳ್ಳಬಹುದು ಹಾಗೂ ಕಾಯಿಲೆಗಳನ್ನು ತಡೆಗಟ್ಟಬಹುದು ಎಂಬುದು ಹೊಸ ಮಾತೇನಲ್ಲ. ಈ ಪುಸ್ತಕದಲ್ಲಿ ಈ ಮಾತಿಗೆ ಅನೇಕ ಸಂಶೋಧನೆಗಳ ಸಾಕ್ಷ್ಯ ನೀಡುವ ಮೂಲಕ ಸಂಪೂರ್ಣ ಸಸ್ಯಾಹಾರ ಆರೋಗ್ಯಕರ ಜೀವನಕ್ಕೆ ಎಷ್ಟು ಉಪಯುಕ್ತ ಎಂಬುದನ್ನು ವಿವರಿಸಲಾಗಿದೆ. ಪ್ರಾಣಿಮೂಲದ ಹಾಲು, ಮೊಟ್ಟೆಗಳಿಲ್ಲದ ಆಹಾರ ಆದರ್ಶ ಸಸ್ಯಾಹಾರ ಎನ್ನುವ ಈ ಪುಸ್ತಕದ ಲೇಖಕ ಡಾ. ಎ.ಎನ್ ನಾಗರಾಜ್ ಅವರು ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯಲ್ಲಿ ವಿಜ್ಞಾನಿಗಳಾಗಿದ್ದವರು.

ಹೃದಯದ ಕಾಯಿಲೆ, ಕ್ಯಾನ್ಸರ್, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಆಸ್ಟಿಯೋಪೋರೋಸಿಸ್, ಸ್ಟ್ರೋಕ್ ಇತ್ಯಾದಿ ಕಾಯಿಲೆಗಳಿಂದ ನರಳಿ ಸಾವಿಗೀಡಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವ ಈ ದಿನಗಳಲ್ಲಿ ಆರೋಗ್ಯ ಸಮಸ್ಯೆಗಳ ಬಗ್ಗೆ, ಕಡಿಮೆ ಖರ್ಚಿನಲ್ಲಿ ಪರಿಹಾರಗಳನ್ನೊದಗಿಸುವ, ಸಮಗ್ರ ಮಾಹಿತಿಗಳಿರುವ ಪುಸ್ತಕ ಕನ್ನಡದಲ್ಲಿ ಬಂದಿರುವುದು ಸ್ವಾಗತಾರ್ಹ. ಈ ಪುಸ್ತಕದಲ್ಲಿ, ಆಹಾರಗಳಿಂದ ವಾಸಿಮಾಡಬಹುದಾದ ದೈಹಿಕ–ಮಾನಸಿಕ ಕಾಯಿಲೆಗಳು ಮತ್ತು ಅಲರ್ಜಿಗಳ ಕಾಯಿಲೆಗಳು ಎಂಬ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಅಮೇರಿಕಾ ಮತ್ತು ಚೈನಾ ದೇಶದ ಜೀವನಶೈಲಿ ಮತ್ತು ಆಹಾರಪದ್ಧತಿಗಳ ತುಲನಾತ್ಮಕ ಅಧ್ಯಯನ ನಡೆಸಿದ ಡಾ.ಕಾಲಿನ್ ಕ್ಯಾಂಪ್‌ಬೆಲ್ ಮತ್ತು ಥಾಮಸ್ ಕ್ಯಾಂಪ್‌ಬೆಲ್ ಅವರ 'ದಿ ಚೈನಾ ಸ್ಟೋರಿ' ಮತ್ತು ಡೀನ್ ಓರ್ನಿಶ್ ಅವರ 'ಡೀನ್ ಓರ್ನಿಶಸ್ ಪ್ರೋಗ್ರಾಂ ಫಾರ್ ರಿವರ್ಸಲ್ ಆಫ್ ಹಾರ್ಟ್ ಡಿಸೀಸಸ್' ಪುಸ್ತಕಗಳನ್ನು ಆಕರಗ್ರಂಥಗಳನ್ನಾಗಿ ಬಳಸಿಕೊಂಡಿದ್ದಾರೆ. ಎರಡನೆಯ ಭಾಗದಲ್ಲಿ ಅಲರ್ಜಿ ಕಾಯಿಲೆಗಳ ಬಗ್ಗೆ ಹೋಲಿಸ್ಟಿಕ್ ವೈದ್ಯರಾದ ಡಾ.ಕೀತ್ ಸ್ಕಾಟ್ ಮಂಬಿ ಅವರ 'ಡಯಟ್–ವೈಸ್' ಎಂಬ ಪುಸ್ತಕದ ವಿವರಗಳನ್ನು ಉಲ್ಲೇಖಿಸುತ್ತಾ, ತಮ್ಮ ಅನುಭವಗಳನ್ನು ಹಂಚಿಕೊಂಡು ಸಸ್ಯಾಹಾರದಿಂದಲೇ ಉತ್ತಮ ಆರೋಗ್ಯ ಕಾಪಾಡಿಕೊಂಡು ಬರಬಹುದೆಂಬ ನಿಲುವನ್ನು ಪ್ರತಿಪಾದಿಸುತ್ತಾರೆ.

ಶಸ್ತ್ರಚಿಕಿತ್ಸೆ ಅಥವಾ ಆಂಜಿಯೋಪ್ಲಾಸ್ಟಿ ಆದ ಮೇಲೆ ಗುಣಮುಖರಾಗುವ ಹಂತದಲ್ಲೂ ಸಸ್ಯಾಹಾರಿಗಳು ಮತ್ತು ಮಾಂಸಾಹಾರಿಗಳ ಮೇಲೆ ಡಾ.ಡೀನ್ ಆರ್ನಿಷ್, ಡಾ.ಕಾಲ್ಡ್‌ವೆಲ್ ಸ್ಸೆಲ್ ಸ್ಟೈನ್ ಜ್ಯೂನಿಯರ್ ಮೊದಲಾದ ವೈದ್ಯರು ನಡೆಸಿದ ಪ್ರಯೋಗಗಳ ಬಗ್ಗೆ ತಿಳಿಸುತ್ತಾ ಸಸ್ಯಾಹಾರ ಹೇಗೆ ಸಂಜೀವಿನಿಯಂತೆ ಕೆಲಸ ಮಾಡುತ್ತದೆ ಎಂಬುದನ್ನು ವಿವರಿಸಿದ್ದಾರೆ. ಉತ್ತಮ ಆಹಾರದೊಂದಿಗೆ ವ್ಯಾಯಾಮವೂ ಅಗತ್ಯವೆನ್ನುತ್ತಾರೆ. ಸಂಪೂರ್ಣ ಸಸ್ಯಾಹಾರ ಮಾಡುವ ಇಲಿಗಳು ಸಹಜವಾಗಿಯೇ ಹೆಚ್ಚು ವ್ಯಾಯಾಮ ಮಾಡುತ್ತವೆ. ಹಾಗೆಯೇ ಅಂತಹ ಆಹಾರವನ್ನೇ ಬಳಸುವ ಜನರೂ ಸಹಜವಾಗಿಯೇ ಹೆಚ್ಚು ವ್ಯಾಯಾಮ ಮಾಡುತ್ತಾರೆ ಎಂಬುದನ್ನು ಚೈನಾದ ಅಧ್ಯಯನ ರುಜುವಾತು ಮಾಡಿರುವುದನ್ನು ಉಲ್ಲೇಖಿಸುತ್ತಾರೆ. ಲೇಖಕರು ಈ ಪುಸ್ತಕದಲ್ಲಿ ಉಲ್ಲೇಖಿಸಿರುವ ಅಧ್ಯಯನಗಳೆಲ್ಲಾ ಅಮೇರಿಕಾ ಮತ್ತು ಚೈನಾ ದೇಶದಲ್ಲಿ ಮಾಡಿರುವಂತಹದು.

ಈ ಪುಸ್ತಕದ ಎರಡನೇ ಭಾಗದಲ್ಲಿ ಅಲರ್ಜಿ ಇರುವ ಆಹಾರಪದಾರ್ಥಗಳನ್ನು ಗುರುತಿಸಿಕೊಳ್ಳುವ ವಿಧಾನಗಳನ್ನು ತಿಳಿಸಿದ್ದಾರೆ. ಅಲರ್ಜಿ ಇರುವ ಹಾಲಿನ ಪದಾರ್ಥಗಳನ್ನು ತ್ಯಜಿಸಿದಾಗ ತಮಗೆ ಚಿಕ್ಕಂದಿನಿಂದಲೂ ಇದ್ದ ಕೆಮ್ಮು–ನೆಗಡಿ–ಅಸ್ತಮಾ ವಾಸಿಯಾಗಿರುವುದಾಗಿ ಹೇಳುತ್ತಾರೆ. ಕೆಲವೊಮ್ಮೆ ಮಾನಸಿಕ ಒತ್ತಡವೂ ಅಲರ್ಜಿಗೆ ಕಾರಣವಾಗುವುದರಿಂದ ಮಾನಸಿಕ ಒತ್ತಡವನ್ನು ನಿಯಂತ್ರಿಸಿಕೊಳ್ಳುವುದೂ ಅಗತ್ಯವೆನ್ನುತ್ತಾರೆ. ಸಂಪೂರ್ಣ ಸಸ್ಯಾಹಾರ ಸೇವನೆ ಮತ್ತು ವ್ಯಾಯಾಮ, ಪ್ರಾಣಾಯಾಮದ ಅಭ್ಯಾಸಗಳಿಂದ ಔಷಧಿಯನ್ನು ತೆಗೆದುಕೊಳ್ಳುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಆರೋಗ್ಯ ಕಾಪಾಡಿಕೊಳ್ಳಲು ಸಲಹೆಗಳನ್ನು ನೀಡಿದ್ದಾರೆ. ಹಾಲು ಅದರಲ್ಲೂ ಹಸುವಿನ ಹಾಲು ಅಮೃತ ಎಂದುಕೊಂಡು ಹಾಲನ್ನು ಪ್ರತಿದಿನ ಬಳಸಿಕೊಂಡು ಬಂದಿರುವ ನಾವು ಹಾಲು ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬುದನ್ನು ಒಪ್ಪುವುದು ಕಷ್ಟ. ಆದರೂ ಆರೋಗ್ಯದ ದೃಷ್ಟಿಯಿಂದ ಈ ಸಲಹೆಗಳಂತೆ ನಮ್ಮ ಆಹಾರಪದ್ಧತಿಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಬಹುದು.

**–ಕೆ. ಪದ್ಮಾಕ್ಷಿ**

‘ಹೊಸ ಮನುಷ್ಯ’ದ ನೂರೊಂದನೇ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



-ಜೆ.ಎಲ್. ಪದ್ಮನಾಭ
ಮತ್ತು ಕುಟುಂಬ
ಶಿವಮೊಗ್ಗ

---

‘ಹೊಸ ಮನುಷ್ಯ’ದ ನೂರೊಂದನೇ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



–ಟಿ.ಆರ್. ಶಾಮಭಟ್
ಮತ್ತು ಕುಟುಂಬ
ಬೆಂಗಳೂರು

'ಹೊಸ ಮನುಷ್ಯ'ದ ನೂರೊಂದನೇ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು




ಅವಿರತ ಪ್ರತಿಷ್ಠಾನ
# ೭೩, ೩ನೇ ಘಟ್ಟ, ೨ನೇ ಮುಖ್ಯ ರಸ್ತೆ,
ವಿನಾಶಯಕ ನಗರ, ವಿಜಯನಗರ
ಬೆಂಗಳೂರು-೫೬೦ ೦೪೦

## ತಿಂಗಳ ಕೊನೆಯ ಸಾಲುಗಳು



ಹೊಸ ಸುಖಗಳ ಅನ್ವೇಷಣೆಯಿಂದ ಹೊಸ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಅವಕ್ಕೆ ಪರಿಹಾರ ಕಂಡು ಹಿಡಿಯುತ್ತಾ ಅದನ್ನೇ ಪ್ರಗತಿ ಎಂದು ಬೀಗುವ ವಿಪರ್ಯಾಸವನ್ನೇ ಆಧುನಿಕ ನಾಗರೀಕತೆ ಎಂದು ಕರೆಯಲಾಗುತ್ತಿದೆ.

-ಇ.ಎಫ್. ಷುಮೇಕರ್ (ಜರ್ಮನಿಯ ಆರ್ಥಿಕ ತಜ್ಞ)

ಶುಭಾಶಯಗಳೊಂದಿಗೆ

ಟಿ.ವಿ. ಸುರೇಂದ್ರ
ಮತ್ತು ಕುಟುಂಬ
ಸಾಗರ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)